ದೃಶ್ಯಕಲೆಯ ಆರಾಧಕರು

ಕರ್ನಾಟಕ ಲಲಿತಕಲಾ ಅಕಾಡೆಮಿ

ದೃಶ್ಯಕಲೆಯ ಆರಾಧಕರು

ಪ್ರಧಾನ ಸಂಪಾದಕರು
ಬಿ.ವಿ.ಕೆ. ಶಾಸ್ತ್ರೀ

ಸಂಪಾದಕರು
ಎಚ್.ಎನ್. ಸುರೇಶ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು – 560 002

DRUSHYA KALEYA ARADHAKARU : (PART - 1) An Introduction about Senior Artists of Karnataka.
Publishers T.S.Venkatachalaiah, Registrar, Karnataka Lalithakala Academy,
Nrupathunga Road, Bangalore - 560 002

Chief Editor : **B.V. K. Sastry**
Editor : **H.N. Suresh**
Design : **C.S. Krishna Setty**

First Impression 1990, Copies : 1000

Price Rs. 15-00

Printed at **RASHMI MUDRANA,** 5th Cross, Sudhamanagar, Bangalore - 560 027

ಅಧ್ಯಕ್ಷರ ಮಾತು

ಕನ್ನಡದಲ್ಲಿ ಕಲಾ ಸಾಹಿತ್ಯದ ಕೊರತೆ ಇದೆಯೆಂಬುದನ್ನು ಎಲ್ಲರೂ ಬಲ್ಲರು. ಹಿರಿಯ, ಕಿರಿಯ ಕಲಾವಿದರ ಪರಿಚಯ ಮಾಡಿಕೊಳ್ಳುವ ಲೇಖನಗಳೂ ಒಟ್ಟಾಗಿ ಒಂದೆಡೆ ಇಲ್ಲ. ಹೀಗಿರುವಾಗ ಸಮಗ್ರ ರೂಪದಲ್ಲಿ ಗ್ರಹಿಸಿ ಒಲವು–ನಿಲುವುಗಳನ್ನು ಗುರುತಿಸುವ, ತಂತ್ರ ಪ್ರಯೋಗಗಳನ್ನು ವಿಷದೀಕರಿಸುವ ಕಲಾ ವಿಮರ್ಶೆಯಂತೂ ಇದುವರೆಗೂ ಬಂದಿಲ್ಲ. ಇಲ್ಲವೆ, ಪರಂಪರೆಗೆ ಸಂಬಂಧಿಸಿದಂತಹ ಸಂಶೋಧಾತ್ಮಕ ಎನ್ನಬಹುದಾದ ಬರಹಗಳು ಬೆರಳೆಣಿಕೆಯಷ್ಟು ಮಾತ್ರ. ಒಬ್ಬ ಕಲಾವಿದನನ್ನು, ಅವನ ರಚನೆಗಳನ್ನು ಕಾಲದ ಪರಿಸರದ ವೈಚಾರಿಕ ಬದಲಾವಣೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ, ಶಕ್ತಿ, ದೌರ್ಬಲ್ಯಗಳನ್ನು ಪ್ರಯೋಗ ವೈಶಿಷ್ಟ್ಯಗಳನ್ನು ಎಳೆ ಎಳೆಯಾಗಿ ಗಮನಿಸಿ ವಿವರಿಸುವ ಕೃತಿಗಳು ಹಲವು ದಶಕಗಳನ್ನು ಗಮನಿಸಿದರೆ ಒಂದೆರಡು ಕಾಣಬರಬಹುದು.

ಈ ಹಿನ್ನೆಲೆಯಲ್ಲಿ ಕಲಾ ಸಾಹಿತ್ಯ ಯಾವ ಯಾವ ಬಗೆಯಲ್ಲಿ ಬಂದರೂ ಸ್ವಾಗತಾರ್ಹವೇ. ಕಲೆ, ಕಲಾ ಪ್ರಾಕರಗಳು, ಕಲಾವಿದರ ಬಗೆಗಿನ ಇದುವರೆಗಿನ ಚರ್ಚೆಗಳು ಬರಹ ರೂಪದಲ್ಲಿ ಬರಬೇಕಿದೆ. ಕಳೆದ ಇಪ್ಪತ್ತೈದು–ಮೂವತ್ತು ವರ್ಷದಿಂದ ಕೇವಲ ವ್ಯಕ್ತಿ ಜೀವನ, ಹೊಗಳಿಕೆಗಳಿಗೇ ನಮ್ಮ ಬರಹ ಸೀಮಿತವಾಗಿದೆ. ಆ ಕೊರತೆಯನ್ನು ನೀಗುವ ಕಡೆಗೂ ಸೂಕ್ಷ್ಮ ಸಂವೇದನೆಯುಳ್ಳ ನಮ್ಮ ಕಲಾವಿದರು, ಬರಹಗಾರರು ಗಮನಹರಿಸಬೇಕಿದೆ.

ನಮ್ಮ ಹಿರಿಯ ಕಲಾವಿದರು ಅನೇಕ ಕಲಾ ಪ್ರಭಾವಗಳಿಗೆ ಒಳಗಾದರು. ಒಂದು ಬಗೆಯ ಗೊಂದಲಮಯ ವಾತವರಣ, ಸಿಕ್ಕುಗಳ ನಡುವೆಯೇ ಕಲಾ ಕೃತಿಗಳನ್ನು ರಚಿಸಿದ್ದಾರೆ. ಆ ಸಂದರ್ಭ ಸನ್ನಿವೇಶಗಳ ಐತಿಹಾಸಿಕ ದಾಖಲೆಗಳಾಗಲೀ, ವಿಮರ್ಶಾತ್ಮಕ ಬರಹವಾಗಲೀ, ವ್ಯಕ್ತಿ–ಕೃತಿ ಸಂಬಂಧದ ನಿಲುವುಗಳ ವಿವೇಚನೆಯಾಗಲೀ, ಬರಹ ರೂಪದಲ್ಲಿ ಬರಲಿಲ್ಲ. ಅಂದಿನ ಗೊಂದಲಮಯ ಜೀವನ, ಹೋರಾಟದ ಹಿನ್ನೆಲೆಯಲ್ಲಿ ಇವರ ರಚನೆಗಳು ರಾಷ್ಟ್ರೀಯ ಮನೋಧರ್ಮ, ಧಾರ್ಮಿಕ, ಆಧ್ಯಾತ್ಮಿಕ ಒಲವು–ಪ್ರೇರಣೆಗಳನ್ನು ತೋರುವಂತೆಯೇ ಅನೇಕ ಸಂದರ್ಭಗಳಲ್ಲಿ ಕಲಾ ಪ್ರಕಾರವನ್ನು ವೃತ್ತಿಯಾಗಿ ಮಾಡಿಕೊಂಡು, ಬದುಕಿಗಾಗಿ ಬಳಸಿಕೊಂಡ ಬಗೆಯನ್ನೂ ಸ್ಪಷ್ಟಪಡಿಸುತ್ತವೆ. ಕಲಾವಿದರಿಗೆ, ಕಲಾ ಚಿಂತಕರಿಗೆ ಇಂತಹ ವಿವರ ನೀಡುವ ಬರಹಗಳು ಪೂರಕ ಸಾಮಗ್ರಿ ಒದಗಿಸಬಹುದು.

ಕಲಾವಿದರನ್ನು ಕುರಿತ ಇಲ್ಲಿನ ಬರಹಗಳು ಅವರ ಕಲಾ ಸೇವೆಯನ್ನು ಗಮನಿಸಿ, ಅವರ ಜೀವನದ ಹಿನ್ನೆಲೆಯಲ್ಲಿ ನಿರ್ಮಿಸಿದ ಕೃತಿಗಳ ಬಗೆಗೆ ಹೇಳಿಕೆ–ಕೇಳಿಕೆಗಳನ್ನು ಗಮನಿಸಿ, ಹಾಕಿಕೊಂಡ ಚೌಕಟ್ಟು–ಪರಿಮಿತಿಯಲ್ಲಿಯೇ ಉತ್ಪ್ರೇಕ್ಷೆಯಿಲ್ಲದ, ಸಾಧ್ಯವಾದಷ್ಟು ವಸ್ತುನಿಷ್ಠ ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡುತ್ತವೆ. ಇದೇ ಕೊನೆಯ ಮಾತಲ್ಲ, ಹಾಗಾಗಬಾರದು. ಮುಂದೆ ಹೆಚ್ಚಿನ ಸಂಶೋಧನೆಗೆ ಅವರ ಗೊತ್ತಿಲ್ಲದ ಕೃತಿಗಳ ಬಗೆಗೆ ಸಂಶೋಧನೆ ಮಾಡಲು ಪ್ರೇರಣೆ ನೀಡಿದರೆ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ. ಕರ್ನಾಟಕದ ಚಿತ್ರ – ಶಿಲ್ಪ ಇತಿಹಾಸಕ್ಕೆ ಕೆಲವಾದರೂ ಹೆಚ್ಚಿನ ವಿಷಯ, ವಿವರ ಸೇರಿಸಲು ಈ ಬರಹಗಳು ನೆರವಾದರೂ ನಮ್ಮ ಶ್ರಮ ಸಫಲ ಎಂದು ಭಾವಿಸುತ್ತೇನೆ.

ಇಲ್ಲಿ ಸೇರಿಸಿರುವ ಕಲಾವಿದರ ಕಲಾಕೃತಿಗಳನ್ನು ನೋಡಲು ಸಿಗದಂತಹ ಇಂದಿನ ಪರಿಸ್ಥಿತಿಯಲ್ಲಿ ಪುರಾಣಗಳಂತೆ ಇತಿಹಾಸದ ಹಿನ್ನೆಲೆಯೂ ಸಹ ರಮ್ಯವೂ, ಕಲ್ಪಕಾಯಕವೂ ಆದ ಪರಿವೇಶವನ್ನು ಪಡೆಯುತ್ತದೆ – ಎಂಬುದು ನಿಜ. ಇದನ್ನು ಕಲಾಭಿಮಾನಿ ಓದುಗರು ತಮಗೆ ತಿಳಿದಿರುವ ಆ ಕಲಾವಿದರ ಬಗೆಗಿನ

ಅರಿವಿನ ಹಿನ್ನೆಲೆಯಲ್ಲಿ ಸತ್ಯಾಸತ್ಯತೆಯನ್ನು ಹೊಂದಿಸಿಕೊಂಡು ವಿಮರ್ಶಾ ಮನೋಧರ್ಮದಿಂದ ವಿಶ್ಲೇಷಿಸಿ, ಗತ ಇತಿಹಾಸದ ಬಗೆಗೆ, ನಮ್ಮ ಕಲಾವಿದರ ಸಾಧನೆಗಳ ಬಗೆಗೆ ಅಭಿಮಾನ ತಾಳುವಂತಾಗಲಿ ಎಂದು ಹಾರೈಸುತ್ತಾ ಈ ಬರಹಗಳನ್ನು ತಮ್ಮ ಕೈಗಿಡಲು ಕರ್ನಾಟಕ ಲಲಿತಕಲಾ ಅಕಾಡೆಮಿ ಹರ್ಷಿಸುತ್ತದೆ.

ಈ ಪುಸ್ತಕದ ಮುಖ್ಯ ಸಂಪಾದಕರಾದ ಶ್ರೀ ಬಿ.ವಿ.ಕೆ. ಶಾಸ್ತ್ರೀ ಅವರಿಗೆ ಧನ್ಯವಾದಗಳು. ಹಾಗೆಯೇ ಪುಸ್ತಕದ ಸಂಪಾದಕರಾದ ಶ್ರೀ ಎಚ್.ಎನ್. ಸುರೇಶ್, ವಿನ್ಯಾಸಕರಾದ ಶ್ರೀ ಚಿ.ಸು. ಕೃಷ್ಣಸೆಟ್ಟಿಯವರಿಗೆ ಮತ್ತು ಪುಸ್ತಕದ ಪ್ರಕಟಣೆಯಲ್ಲಿ ಸಹಾಯ ಮಾಡಿದ ಕಲಾವಿದ ಶ್ರೀ ಎನ್. ಮರಿಶಾಮಾಚಾರ್ ಅವರಿಗೂ ನನ್ನ ವಂದನೆಗಳು. ಈ ಕಾರ್ಯದಲ್ಲಿ ನೆರವಾದ ಕಲಾವಿದರು – ಲೇಖಕರು ಇವರಿಗೆಲ್ಲ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು ಆಯಾ ಲೇಖಕರದ್ದೇ ಹೊರತು ಅಕಾಡೆಮಿಯದೆಂದು ಪರಿಗಣಿಸಬೇಕಾಗಿಲ್ಲ ಎಂದೂ ತಿಳಿಸಬಯಸುತ್ತೇನೆ.

ಆರ್.ಎಂ. ಹಡಪದ್

ಅಧ್ಯಕ್ಷ

ಕರ್ನಾಟಕ ಲಲಿತಕಲಾ ಅಕಾಡೆಮಿ

ಸಂಪಾದಕೀಯ

ಈ ಪುಸ್ತಕದಲ್ಲಿ ನಾಡಿನ ಕೆಲವು ಹಿರಿಯ ಕಲಾವಿದರ ಕಿರು ಪರಿಚಯ ಮಾಡಿಸಲಾಗಿದೆ. ಇವರಲ್ಲಿ ಚಿತ್ರಕಾರರಿದ್ದಾರೆ, ಶಿಲ್ಪಿಗಳಿದ್ದಾರೆ. ರಾಜ್ಯಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ಪಡೆದವರಿದ್ದಾರೆ. ಸ್ವಂತ ಕಲಾಶಾಲೆಗಳನ್ನು ಸ್ಥಾಪಿಸಿ, ಶಿಕ್ಷಣ ನೀಡಿ ಕಲಾವಿದರನ್ನು ತಯಾರು ಮಾಡಿದವರು ಕೆಲವರು. ಸರ್ಕಾರ ಅಥವಾ ಖಾಸಗಿ ಶಾಲೆಗಳಲ್ಲಿ ಶಿಕ್ಷಕರಾಗಿದ್ದವರು ಇನ್ನು ಕೆಲವರು. ಕಲೆಯನ್ನೇ ಪೂರಾ ವೃತ್ತಿ ಮಾಡಿಕೊಂಡವರು ಮತ್ತೂ ಕೆಲವರು. ಇವರೆಲ್ಲರೂ ವಿಶೇಷ ಏರಿಳಿತಗಳಿಲ್ಲದ ಒಂದು ಯುಗದಲ್ಲಿ ಹುಟ್ಟಿ ಬೆಳೆದವರು.

ಇವರೆಲ್ಲಾ ಮುಂದೆ ಕಲಾಕ್ಷೇತ್ರದಲ್ಲಿ ಒಂದು ಹೊಸ ಗಾಳಿ ಬೀಸಲಾರಂಭವಾದ ನಂತರ ಉಂಟಾದ ಸಂದಿಗ್ಧ ಸ್ಥಿತಿಯಲ್ಲಿ ಸಿಲುಕಿದವರು. ಪರಂಪರೆಯಿಂದ ಬಂದ ಸೂತ್ರ ನಿಯಮಬದ್ಧವಾದ ಕಲೆಯು ಮಾಯವಾಗುತ್ತಾ, ಪಾಶ್ಚಾತ್ಯ ಚಿಂತನ ತತ್ವ ಹಾಗೂ ತಾಂತ್ರಿಕ ವಿಧಾನಗಳಿಂದ ರೂಪಿತವಾದ ಕಲೆ ಕ್ಷೇತ್ರವನ್ನು ಆವರಿಸತೊಡಗಿದ ಕಾಲವದು. ಕಲೆಯನ್ನು ಕಲಿಯಲು ಆಸಕ್ತನಾದವನಿಗೆ ಯಾವುದನ್ನು ಆರಿಸಿಕೊಳ್ಳಬೇಕು ಹಿಂದಿನದೇ? ಇಂದಿನದೇ? ಎಂಬ ಪ್ರಶ್ನೆಗಳು ಎದುರು ನಿಂತ ಕಾಲವೂ ಹೌದು. ತಮಗೆ ಪರಿಣತಿ ಇದ್ದ ಹಿಂದಿನದರಲ್ಲಿ ಜೀವನಾಧಾರಕ್ಕೆ ದಾರಿ ಇತ್ತು. ಆದರೆ ತಮ್ಮ ಊಹೆಗೆ ನಿಲುಕದ ಈ ಹೊಸದರಲ್ಲಿ(?) ಅನಿಶ್ಚಯ ಸ್ಥಿತಿ. ಕಲೆಯ ಉದ್ದಿಶ್ಯ ಮತ್ತು ಆದರ್ಶಗಳೇನೇ ಇದ್ದರೂ ಕಲೆಗಾಗಿ ಕಲೆ ಎಂಬ ತತ್ವ ಅವರಿಗೆ ಹೊಸದು. ಅದು ಬದುಕಿನ ಬಗೆಗೆ ಭೀತಿ ಉಂಟುಮಾಡುವಂಥದ್ದು.

ಈ ಕಲಾವಿದರನ್ನು ಸ್ಥೂಲವಾಗಿ ಎರಡು–ಮೂರು ಭಾಗವಾಗಿ ವಿಂಗಡಿಸಬಹುದು. ಮೈಸೂರು, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲಿತವರ ಸಾಧನೆಯ ಅಳತೆಗೋಲೆಂದರೆ, ಮದರಾಸು ಪ್ರಾಂತ್ಯದ ಸರಕಾರ ನಡೆಸುತ್ತಿದ್ದ ಪರೀಕ್ಷೆಗಳು. ಅವರು ಕಲಿತ ಕಲೆಯ ಶೈಲಿ ಮದರಾಸಿನದಕ್ಕೆ ಹತ್ತಿರ. ಉತ್ತರ ಕರ್ನಾಟಕದಲ್ಲಿ ಕಲಿತವರೆಲ್ಲಾ ಪ್ರಾಯಶಃ ಬೊಂಬಾಯಿ ಸರಕಾರದ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು. ಅವರ ಕಲೆಯ ಮೇಲೆ ಬೊಂಬಾಯಿಯಲ್ಲಿ ಪ್ರಚಲಿತವಿದ್ದ ಶೈಲಿಯ ಪ್ರಭಾವ. ನಿಜಾಂ ಕರ್ನಾಟಕದವರದು ಹೈದರಾಬಾದಿನ ಕಡೆಗೆ..... ಹೀಗೆ. ಇದರಲ್ಲಿ ಬೊಂಬಾಯಿ ಜೆ.ಜೆ. ಕಲಾಶಾಲೆ, ನೂತನ ಕಲಾಮಂದಿರ ಮತ್ತು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯುಕ್ತವಾಗಿ ಅಧ್ಯಯನ ಮಾಡಿದವರು ಒಂದು ಹೆಜ್ಜೆ ಮುಂದೆ.

ಹೀಗೆ ಮೂಲಭೂತವಾಗಿ ಒಂದೇ ರೀತಿ ಕಂಡು ಬಂದರೂ, ಈ ಕಲಾವಿದರ ಕಲೆ ಬೇರೆ ಬೇರೆ ತಳಿಗಳಿಂದ ಪ್ರಭಾವಿತವಾದುದು ಅನುಭವವಾಗುತ್ತದೆ. ಈ ಮೂರು ನಾಲ್ಕು ಭಾಗಗಳವರಲ್ಲಿಯೂ ಕೇವಲ ಕೆಲ ಮಂದಿಯನ್ನು ಬಿಟ್ಟು, ಇತರರಲ್ಲಿ ಪರಸ್ಪರ ಸಂಪರ್ಕವಿಲ್ಲದೆ, ವಿಚಾರ ವಿನಿಮಯದಿಂದ ತಮ್ಮ ತಮ್ಮ ವಿಚಾರಧಾರೆ ಮತ್ತು ಶೈಲಿಗಳನ್ನು ವಿಶಿಷ್ಟ ರೀತಿಯಲ್ಲಿ ಬೆಳೆಸಿಕೊಳ್ಳಲು ಸಾಧ್ಯವಾಗಲಿಲ್ಲ. ಮುಂದೆ ಇದು ಸ್ವಲ್ಪ ಮಟ್ಟಿಗೆ ಸಾಧ್ಯವಾದುದು, ಚದುರಿದ ನಾನಾ ಭಾಗಗಳು ಒಟ್ಟುಗೂಡಿ ಕರ್ನಾಟಕ ರಾಜ್ಯ ಸ್ಥಾಪನೆಯಾದ ನಂತರ. ಅಲ್ಲಿಯವರೆಗೆ ಅವರುಗಳಲ್ಲಿ ಅನೇಕರು ಎಲೆಯ ಮರೆಯ ಕಾಯಿನಂತೆ ಇದ್ದರು.

ಕರ್ನಾಟಕ ರಾಜ್ಯ ಸ್ಥಾಪನೆಯಾಗಿ ನಾನಾ ಕಲಾಸಂಸ್ಥೆಗಳೂ ಅದರಲ್ಲಿಯೂ ಲಲಿತ ಕಲಾ ಅಕಾಡೆಮಿ ರಚಿತವಾಗಿ ಕಾರ್ಯಕಲಾಪಗಳು ಸಾಮೂಹಿಕ ರೀತಿಯಲ್ಲಿ ಪ್ರಾರಂಭವಾದ ನಂತರ ಕರ್ನಾಟಕದ ಒಟ್ಟು ಕಲಾಕ್ಷೇತ್ರದ ಸ್ಥೂಲ ಚಿತ್ರ ಕಾಣಲಾರಂಭವಾಯಿತು. ರಾಜ್ಯದ ವಿವಿಧ ಭಾಗಗಳಲ್ಲಿ ವಾಸವಿದ್ದು ಕೆಲಸ ಮಾಡುತ್ತಿದ್ದ ಕಲಾಸಂಸ್ಥೆಗಳೂ ಮತ್ತು ಕಲಾವಿದರ ಹೆಸರುಗಳೂ ಪರಿಚಯವಾಗಲಾರಂಭಿಸಿತು.

ಪುಸ್ತಕದಲ್ಲಿ ಪರಿಚಯ ಮಾಡಿಸಲಾದ 24 ಕಲಾವಿದರೂ ಕರ್ನಾಟಕ ರಾಜ್ಯ ಸ್ಥಾಪನೆಯಾದ ಸಮಯದಲ್ಲಿ ಕಲಾಕ್ಷೇತ್ರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ ಪ್ರಮುಖರು. ಎಲ್ಲರೂ ಕಲಾವ್ಯವಸಾಯಿಗಳಾಗಿದ್ದವರು. ಆದರೆ ಕೆಲವರದು ಒಂದೊಂದು ಪ್ರಾಕಾರದಲ್ಲಿ ವಿಶೇಷ ಸಾಧನೆ. ಅರ್ಧಕ್ಕಿಂತ ಹೆಚ್ಚು ಮಂದಿ ಕಲಾ ಶಿಕ್ಷರಾಗಿದ್ದವರು. ಪ್ರೌಢ ಶಿಕ್ಷಕರಾಗಿದ್ದವರೂ ಕೆಲವರು. ಡ್ರಾಯಿಂಗ್ ಮಾಸ್ಟರ್ ಪ್ರಕಾರದವರೂ ಕೆಲವರಿದ್ದರು. ಇವರನ್ನು ಬಿಟ್ಟು ರಾಜ್ಯದಲ್ಲಿ ಇನ್ನೂ ಕೆಲವು ಗಣ್ಯ ಕಲಾವಿದರಿದ್ದಾರೆ. ಅವರೆಲ್ಲರ ಪರಿಚಯ ಮುಂದಿನ ಪುಸ್ತಕದಲ್ಲಿ ಅಕಾಡೆಮಿ ಮಾಡಿಕೊಡಲು ಆಶಿಸಿದೆ.

ಈಗ ಪ್ರಕಟಿಸಿರುವ ಪುಸ್ತಕದಲ್ಲಿ ಅಧ್ಯಾಪಕರಾಗಿ ಮಾನಿತರಾಗಿದ್ದವರಲ್ಲಿ ಟಿ.ಪಿ. ಅಕ್ಕಿ, ಬಿ.ಜಿ. ಮಹಮದ್, ಎಸ್. ಕಾಳಪ್ಪ, ಬಸವಣ್ಣ ಶಿಲ್ಪಿ, ಟಂಕಸಾಲೆ ಮುಂತಾದವರು ನೆನಪಿಗೆ ಬರುತ್ತಾರೆ. ಅಧ್ಯಾಪಕರಾಗಿಯೂ ಸ್ವಂತ ಕಲಾ ವ್ಯವಸಾಯವನ್ನು ವೃದ್ಧಿಪಡಿಸಿಕೊಂಡು ಕಲಾವಿದರೆಂದು ಹೆಚ್ಚು ಮಾನಿತರಾಗಿದ್ದ ಎಂ.ಜೆ. ಶುದ್ಧೋದನ, ಹನುಮಂತಾಚಾರ್ಯ, ಸಾಗರದತ್ತ ಪಾಟೀಲ್, ಸಿ.ಎನ್. ಪಾಟೀಲ್ ಮುಂತಾದವರೂ ಇದ್ದಾರೆ. ಇವರುಗಳು ಅಧ್ಯಾಪಕರಾಗಿದ್ದರೂ ಹೆಚ್ಚು ಪರಿಚಿತರಾದುದು ಕಲಾವಿದರೆಂದು. ಅವರ ಕೃತಿಗಳ ಮೂಲಕ. ಅಧ್ಯಾಪಕ ಕರ್ತವ್ಯದ ಜೊತೆಗೆ, ಕಲಾಕ್ಷೇತ್ರದ, ಕಲಾವಿದರ ಏಳಿಗೆಗೆ ಹಾಗೂ ಸಮಾಜ ಸೇವೆಯಲ್ಲಿಯೂ ನಿರತರಾದವರು – ವಿ.ಸಿ. ಮಾಲಗತ್ತಿ, ಎ.ಎನ್. ಸುಬ್ಬರಾವ್, ಹೆಚ್. ಎಸ್. ಇನಾಮತಿ, ಆರ್.ಜಿ.ರಾಯಕರ್ ಮುಂತಾದವರು. ಕಲೆಯನ್ನೇ ಪೂರ್ಣ ಸಮಯ ವೃತ್ತಿಯನ್ನಾಗಿ ಮಾಡಿಕೊಂಡು ಅದರಲ್ಲಿ ಉನ್ನತ ಸ್ಥಾನಗಳಿಸಿದವರು ರಾಘವೇಂದ್ರ ಚೌಟೆ, ಶಾಂತಮಲ್ಲಪ್ಪ ಪಾಟೀಲ್, ಕೃಷ್ಣ ಛತ್ರಿ, ಎಸ್.ಎಸ್. ಕುಕ್ಕೆ, ಎಸ್.ಜಿ. ಚಿನ್ನಣ್ಣನವರ್, ಎಸ್. ನರಸಿಂಹಾಚಾರ್, ಎಫ್. ಎಂ. ಸೂಫಿ ಮುಂತಾದವರು. ಕಲೆಯನ್ನು ಚೆನ್ನಾಗಿ ಕಲಿತು, ಅದರ ಬಗೆಗೆ ಬರವಣಿಗೆಯ ಮೂಲಕ ಜ್ಞಾನ ಪ್ರಸಾರ ಮಾಡಿ ಒಂದು ಕಲಾ ಸಾಹಿತ್ಯ ಕೃಷಿ ಮಾಡಿದವರು. ಪಿ.ಆರ್. ತಿಪ್ಪೆಸ್ವಾಮಿ, ಬಿ.ಪಿ. ಬಾಯಿರಿ ಮುಂತಾದವರು. ಈ ಎಲ್ಲ ವರ್ಗಗಳಿಗೂ ಹೊರತಾಗಿ ಒಂದು ಒಂಟಿ ಸಲಗನಂತೆ ಜೀವನ ಯಾತ್ರೆ ಮಾಡಿದವರು ಆರ್.ಎಸ್. ನಾಯುಡು. ಇವರಲ್ಲಿ ಅನೇಕರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿಯೂ ಪ್ರಶಸ್ತಿ ಗಳಿಸಿದವರಿದ್ದಾರೆ.

ಹೀಗೆ ಅವರ ಕಾರ್ಯದ ರೂಪ, ಪ್ರಾಕಾರ, ವಿಧಾನ ಮುಂತಾದವುಗಳಲ್ಲಿ ವ್ಯತ್ಯಾಸವಿದ್ದರೂ ಈ ಕಲಾವಿದರೆಲ್ಲರಲ್ಲಿಯೂ ಸಮಾನವಾಗಿದ್ದ ಒಂದು ಗುಣ – ತಾನು ಕಲಿತ ವಿದ್ಯೆಯ ಬಗೆಗೆ ತೀವ್ರ ನಿಷ್ಠೆ. ಒಮ್ಮನಸ್ಸಿನಿಂದ ಕರ್ನಾಟಕದ ಕಲೆಯ ತೇರನ್ನು ಮುಂದಿನ ಪೀಳಿಗೆಯ ಹಿತಚಿಂತನೆಯಿಂದ ಮುಂದು ಮುಂದಕ್ಕೆ ಎಳೆದು ತಂದರು. ಕರ್ನಾಟಕದ ಕಲಾ ಇತಿಹಾಸದಲ್ಲಿ ಗಣನೀಯ ಸ್ಥಾನ ಈ ಕಲಾವಿದರದು. ಇವರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವ ಈ ಪುಸ್ತಕ ಯಾವ ಕಲಾವಿದರಿಗೆ ಸ್ಫೂರ್ತಿ ನೀಡಬಲ್ಲದು.

ಈ ಪುಸ್ತಕದ ರಚನೆಯಲ್ಲಿ, ಕಲಾವಿದರ ಬಗೆಗೆ ಲೇಖನಗಳನ್ನು ಬರೆದುಕೊಟ್ಟ ಹಲವಾರು ಲೇಖಕರ ಪಾತ್ರವನ್ನು ಸ್ಮರಿಸಬೇಕಾಗಿದೆ. ಕಷ್ಟಪಟ್ಟು ವಿಷಯ ಸಂಗ್ರಹ ಮಾಡಿ ಅದನ್ನು ಸೂಕ್ತವಾಗಿ ಕ್ರೋಢೀಕರಿಸಿ ಲೇಖನ ರೂಪಕ್ಕೆ ಇಳಿಸಿ ಪುಸ್ತಕದ ಮೌಲ್ಯಕ್ಕೆ ಬಹು ಸಹಾಯ ಮಾಡಿದ್ದಾರೆ. ಅದಕ್ಕಾಗಿ ಈ ಲೇಖಕ ಬಳಗದವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಿ. ವಿ. ಕೆ. ಶಾಸ್ತ್ರಿ

ಪರಿವಿಡಿ

ಟಿ. ಪಿ. ಅಕ್ಕಿ



ಗದಗ್ ಕರ್ನಾಟಕದ ಪುರಾತನ ಹಾಗೂ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರ ಧಾರವಾಡ ಜಿಲ್ಲೆಯ ತಾಲ್ಲೂಕಿನ ಸ್ಥಳವೂ, ವ್ಯಾಪಾರೀ ಕೇಂದ್ರವೂ ಆದ ಒಂದು ಪಟ್ಟಣ. ಹಿಂದೆ ಕೃತಪುರವೆಂದು ಕರೆಯಲ್ಪಡುತ್ತಿದ್ದ ಇಂದಿನ ಗದಗ್ ಸಾಂಸ್ಕೃತಿಕ ಕೇಂದ್ರವೂ ಹೌದು; ಪಾಂಡವ ಕುಲತಿಲಕ ಜನಮೇಜಯ ಮಹಾರಾಜರು ಸರ್ಪಯಜ್ಞವನ್ನು ಇದೇ ಸ್ಥಳದಲ್ಲಿ ಮಾಡಿ, ತಪೋವಿದ್ಯಾನಿರತ ಸಂಪನ್ನರಾದ ವಿದ್ವಾಂಸರಿಗೆ ಕೃತಪುರವನ್ನು ದತ್ತಿಯಾಗಿ ನೀಡಿದ ಪುಣ್ಯ ಕ್ಷೇತ್ರವೂ ಹೌದು. ಚಾಲುಕ್ಯ ಮತ್ತು ಹೊಯ್ಸಳ ಶಿಲ್ಪಕಲಾ ವೈಭವದ ಕುರುಹಾಗಿ ಶ್ರೀ ವೀರನಾರಾಯಣ, ತ್ರಿಕೋಟೇಶ್ವರ, ಸರಸ್ವತಿ ಹಾಗೂ ಸೋಮೇಶ್ವರ ದೇವಾಲಯಗಳು ಗದುಗಿನ ಮೇರು ಕಲಾಸಂಸ್ಕೃತಿಯ ಜೀವಂತ ಸಾಕ್ಷಿಗಳು. "ಗದುಗಿನ ಭಾರತ"ವೆಂದೇ ಕರೆಯಲ್ಪಡುವ 'ಕರ್ನಾಟಕ ಭಾರತ ಕಥಾಮಂಜರಿ'ಯ ಕರ್ತೃ ಕುಮಾರವ್ಯಾಸನ ತಪೋವನವೀ ಕೃತಪುರ, "ಉದಯವಾಗಲಿ ಚೆಲುವ ಕನ್ನಡ ನಾಡು" ಗೀತೆಯ ಧ್ವನಿ ಶ್ರೀ ಹುಯಿಲಗೋಳ ನಾರಾಯಣರಾಯರಿಂದ ಮೊಳಗಿದ್ದು ಇಲ್ಲಿಂದಲೇ. ಗದುಗಿನ ಈ ಶ್ರೀಮಂತ ಪರಂಪರೆ ಇಂದಿನವರೆಗೂ ಅನೂಚಾನವಾಗಿ ಬೆಳೆದು ಬಂದಿದೆ ಎಂಬುದಕ್ಕೆ ಅಲ್ಲಿನ "ವಿಜಯ ಕಲಾ ಮಂದಿರ" ಹಾಗೂ "ಶ್ರೀ ವೀರೇಶ್ವರ ಪುಣ್ಯಾಶ್ರಮ"ಗಳು ಪ್ರತ್ಯಕ್ಷ ಪ್ರಮಾಣ.

ಅಲ್ಲಿನ "ವಿಜಯ ಕಲಾಮಂದಿರ" ಕರ್ನಾಟಕ ರಾಜ್ಯದ ಚಿತ್ರ ಕಲಾಶಾಲೆಗಳಲ್ಲಿ ಪ್ರಮುಖವಾದುದು. ಅದರ ಹೊರ ಬಾಗಿಲಿಗೆ ಹೋದಾಗ ಸದಾ ಪರಿಮಳಯುಕ್ತ, ಪುಷ್ಪಭರಿತ ಕೈತೋಟವೊಂದು ನಮ್ಮನ್ನು ಸ್ವಾಗತಿಸುತ್ತದೆ. ಬಲಗಡೆಯಲ್ಲಿ ಎರಡು ಅಂತಸ್ತಿನ "ಗಿರಿಜಾಶಂಕರ ಕಲಾಭವನ" ಎಂಬ ಬೋರ್ಡನ್ನು ತಗುಲಿಸಿಕೊಂಡ ದೊಡ್ಡ ಕಟ್ಟಡ; ನಮ್ಮ ಎದುರಿಗೆ ಮೂರು ಬಾಗಿಲುಳ್ಳ ಒಂದು ಚಿಕ್ಕ ಕಟ್ಟಡ ನೇರವಾಗಿ ಹೋಗಿ, ಎಡಗಡೆಯ ಬಾಗಿಲಲ್ಲಿ ಹಣಿಕಿದಾಗ ಮುಖ್ಯ ಆಸನದಲ್ಲಿ ಕುಳಿತ ಎಂಬತ್ತು ವರುಷದ ಯುವಕನೊಬ್ಬ ಬೆರಳಚ್ಚು ಯಂತ್ರದ ಮೇಲೆ ಒಂದೇ ಬೆರಳಿನಿಂದ ಪತ್ರವನ್ನು ಟೈಪಿಸುತ್ತ ನಮ್ಮನ್ನು ಸ್ವಾಗತಿಸುತ್ತಾನೆ. ಮುಖ ಸ್ವಲ್ಪ ಗಂಭೀರವಾಗಿರುತ್ತದೆ; ನಾವು ನಮ್ಮ ಹೆಸರು ಹೇಳಿ ಒಳಕ್ಕೆ ತೂರಿದಾಗ ಗಂಭೀರ ಮುಖ ಅರಳುತ್ತದೆ; ನಗೆ ಮಲ್ಲಿಗೆ ಉದುರುತ್ತದೆ. ಇದೇ ವ್ಯಕ್ತಿ ಶ್ರೀ ಟಿ.ಪಿ. ಅಕ್ಕಿ ಎಂದು ತಿಳಿದಾಗ ನಮ್ಮನ್ನು ನಾವೇ ನಂಬದಾಗುತ್ತೇವೆ. ಕರ್ನಾಟಕದ ಪ್ರಶಾಂತ ವಾತಾವರಣದಲ್ಲಿ ನಿರ್ಮಿತವಾದ ವಿಜಯ ಕಲಾ ಮಂದಿರದ ಒಳಗೆ ಹೋದೊಡನೆಯೇ ಕಾಣಬರುತ್ತಾರೆ ಶ್ರೀ ಟಿ.ಪಿ. ಅಕ್ಕಿ. ಮಂದಿರದ ನಿರ್ಮಾತೃ ಪ್ರಧಾನ ಆಚಾರ್ಯ. ಸರಳವಾದ ರೂಪ ಅಕ್ಕಿಯವರದು. ಆದರೆ ಸಹೃದಯತೆ ಮತ್ತು ಸ್ನೇಹಪರತೆ ಶ್ರೀಮಂತವಾದುದು.

ಅಕ್ಕಿ ಅವರು ಹುಟ್ಟಿದುದು ಲಕ್ಷ್ಮೇಶ್ವರದ ಒಂದು ಸುಸಂಸ್ಕೃತ ಮನೆತನದಲ್ಲಿ– 1908ರಲ್ಲಿ. ತಂದೆ ಪ್ರಭಪ್ಪ ಮತ್ತು ತಾಯಿ ಮುದುಕಮ್ಮನವರು. ಪ್ರಭಪ್ಪನವರ ಐದು ಮಕ್ಕಳಲ್ಲಿ ಅಕ್ಕಿ ಅವರು ಮೂರನೆಯ ಮಗ. ಅವರು ಒಂಬತ್ತು ವರುಷದ ಬಾಲಕನಾಗಿದ್ದಾಗಲೇ ಅಕ್ಕಿ ತಂದೆಯನ್ನು ಕಳೆದು

ಕೊಂಡರು. ತಾಯಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಜವಾಬ್ದಾರಿಯನ್ನು ಧೈರ್ಯದಿಂದ ನಿರ್ವಹಿಸಿದರು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳನ್ನು ಗದಗ ಮತ್ತು ಹುಬ್ಬಳ್ಳಿಯಲ್ಲಿ ಮುಗಿಸಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಭ್ಯಾಸವನ್ನು ಮುಂದುವರಿಸಿದರು ಅಕ್ಕಿ. ಈ ವೇಳೆಗೆ ಮುಂಬಯಿಯಲ್ಲಿ ಖ್ಯಾತ ಕಲಾವಿದರಾಗಿ ಬೆಳೆದಿದ್ದ ಅವರ ಅಣ್ಣ ಶಿವಾನಂದ ಅವರು ತಾಯಿ ತಮ್ಮಂದಿರನ್ನೆಲ್ಲ ಮುಂಬಯಿಗೆ ಕರೆಸಿಕೊಂಡರು. ಅಕ್ಕಿ ಅವರು ಜೆ.ಡಿ.ಎ. (ಅಕೌಂಟೆಂಟ್ ಡಿಪ್ಲೊಮಾ) ಪದವಿ ಪಡೆಯುವ ಇಚ್ಛೆಯಿಂದ ಸಿಡನ್ಹ್ಯಾಮ್ ಕಾಲೇಜು ಸೇರಿದರು. ಆದರೆ ಅಣ್ಣ ಶಿವಾನಂದ ಅವರ ಕಲಾ ಪ್ರೌಢಿಮೆ, ಗೌರವಗಳು ಬಾಲಕನಿಗೆ ಹೆಚ್ಚು ಆಕರ್ಷಣೀಯವಾದಷ್ಟೆ, ಅಕ್ಕಿ ಕುಂಚವನ್ನು ಹಿಡಿದರು. ಅಣ್ಣನವರ ಕೃತಿಗಳಿಗೆ ಸರಿಸಮಾನವಾದ ನಿಸರ್ಗ ಚಿತ್ರ (ಲ್ಯಾಂಡ್ ಸ್ಕೇಪ್)ಗಳನ್ನು ರಚಿಸಿ ಅವರಿಂದ ಸೈ ಅನಿಸಿಕೊಂಡರು. ಆದರೆ ದುರ್ದೈವ ಅಣ್ಣ ಶಿವಾನಂದ ಅವರ ಅನಿರೀಕ್ಷಿತವಾದ ಆಘಾತದ ಫಲವಾಗಿ ತತ್ತರಿಸಿದ ಅಕ್ಕಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ನವಸಾರಿ, ವಸಯಿ ಮುಂತಾದ ಅನ್ಯ ಭಾಷಾ ಪ್ರಾಂತಗಳಲ್ಲಿ ಕಲಾಸೇವೆಗೈದು ಕರ್ನಾಟಕಕ್ಕೆ ಮರಳಿದರು. ಗದಗನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆಯ್ದುಕೊಂಡರು. ಗದುಗಿನ ಮುನಿಸಿಪಲ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಿತರಾದರು.

ಶಿಕ್ಷಕ ವೃತ್ತಿ ಹಿಡಿದುದರಿಂದ ಜೀವನ ನಿರ್ವಹಣೆ ಸುಗಮವಾಯಿತು, ನಿಜ. ಆದರೆ ಮಹತ್ವಾಕಾಂಕ್ಷಿಯಾದ ಅಕ್ಕಿ ಅವರಿಗೆ ತೃಪ್ತಿಯಿಲ್ಲ, ಸಮಾಧಾನವಿಲ್ಲ. ಅವರಿಗೆ ಗುರುದೇವ ರವೀಂದ್ರನಾಥ ಟಾಗೂರ್ ಅವರ ವಿಶ್ವಭಾರತಿಯದೇ ಕನಸು. "ವಿಶ್ವಭಾರತಿಯಂಥ ಒಂದು ಸಂಸ್ಥೆ ಗದುಗಿನಲ್ಲಿ ನಿರ್ಮಿತವಾಗಬೇಕು. ಅದು ಕನಿಷ್ಠಪಕ್ಷ ಕನ್ನಡ ನಾಡಿನಲ್ಲಾದರೂ ದೊಡ್ಡ ಸಂಸ್ಥೆಯೆಂದು ಮಾನಿತವಾಗಬೇಕು."–ಎಂಬ ಧೃಢ ನಿರ್ಧಾರಕ್ಕೆ ಬಂದರು.

ಆ ಕನಸು ಕಾರ್ಯಗತವಾದುದು 1947ರಲ್ಲಿ. ಭಾರತವು ಸ್ವತಂತ್ರವಾದ ವರುಷದಲ್ಲಿ ಅಕ್ಕಿ ಅವರ ಈ ನಿರ್ಧಾರ ಹಾಗೂ ವ್ಯಕ್ತಿತ್ವಕ್ಕೆ ಮಾರುಹೋದ ಹಲವಾರು ಸಹೃದಯಿಗಳ ಸಹಕಾರದಿಂದ ಅದೇ ವರ್ಷ ಗದಗಿನಲ್ಲಿ 'ವಿಜಯ ಕಲಾಮಂದಿರ' ಜನ್ಮ ತಳೆಯಿತು. ಇಲ್ಲಿಂದಲೇ ಅಕ್ಕಿ ಅವರ ಕಲಾಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭ.

ಸಾವಿರಾರು ಪ್ರಾಯೋಗಿಕ ವರ್ಣಚಿತ್ರಗಳನ್ನು ನಿರ್ಮಿಸಿ, ಕೈತುಂಬ ಹಣ ಸಂಪಾದಿಸಿ, ನಾಡಿನುದ್ದಗಲಕ್ಕೂ ಹೆಸರುಗಳಿಸಿ ಇಂದು ಶ್ರೀಮಂತ ಜೀವನ ಸಾಗಿಸಬೇಕಾಗಿದ್ದ ಶ್ರೀ ಅಕ್ಕಿಯವರು ತಮ್ಮನ್ನು ಉನ್ನತ ಕಲಾ ಶಿಕ್ಷಣ ನೀಡುವುದಕ್ಕಾಗಿ ಸಮರ್ಪಿಸಿಕೊಂಡರು. ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯ 'ಆರ್ಟ್ ಮಾಸ್ಟರ್' ಪದವೀಧರರಾಗಿ ಚಿತ್ರಕಲಾ ಶಿಕ್ಷಕರಾದ ಅಕ್ಕಿ ಇಂದು ಹಿರಿಯ ಕಲಾವಿದರ ಮಾಲಿಕೆಯಲ್ಲಿ ಸೇರಿದ್ದರೂ ಆ ಸ್ಥಾನದಲ್ಲಿ ಅವರ ವಸ್ತುನಿಷ್ಠ ಸೇವೆಯ ಫಲವಾಗಿದೆ. ಕಲೆಯನ್ನು ತಮ್ಮ ಪ್ರತಿಷ್ಠೆಯ ಲಾಂಛನವಾಗಿ, ಕೌಶಲ್ಯ ಪ್ರದರ್ಶನ ಹಾಗೂ ಹಣ ಗಳಿಕೆಯ ಸಾಧನವಾಗಿ ಮಾಡಲಿಲ್ಲ. ಅವರ ಮುಖ್ಯ ಉದ್ದಿಶ್ಯ ಕರ್ನಾಟಕದ ಚಿತ್ರಕಲಾ ಶಿಕ್ಷಣದ ಏಳಿಗೆ. ಶಿಕ್ಷಣ ತಜ್ಞರೊಬ್ಬರು ಒಮ್ಮೆ ವಿಜಯ ಕಲಾಮಂದಿರವನ್ನು ಕುರಿತು "ಅಕ್ಕಿಯವರು ಅಂದು ಈ ಕಲಾಮಂದಿರವನ್ನು ಕಟ್ಟಿ, ಯುವಕರನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಿರತರಾಗದಿದ್ದರೆ ನವ ಕರ್ನಾಟಕ ರಾಜ್ಯದಲ್ಲಿ ಚಿತ್ರಕಲಾ ಶಿಕ್ಷಕರ ಹಾಗೂ ನವಕಲಾ ಪೀಳಿಗೆಯ ಅರಬನ್ನು ಈ ರಾಜ್ಯ ಅನುಭವಿಸಬೇಕಾಗುತ್ತಿತ್ತು" – ಎಂದು ಅಭಿಪ್ರಾಯಪಟ್ಟುದುಂಟು.

ಹೈಸ್ಕೂಲಿನ ನಾಲ್ಕಾರು ವಿದ್ಯಾರ್ಥಿಗಳಿಂದಲೇ ಪ್ರಾರಂಭವಾದ ವಿಜಯ ಕಲಾಮಂದಿರ ಇಂದು ಸಾವಿರಾರು ಚಿತ್ರಕಲಾ ಶಿಕ್ಷಕರನ್ನೂ ಹತ್ತಾರು ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಕಲಾವಿದರನ್ನೂ ದೇಶಕ್ಕೆ ನೀಡಿದೆ. ಆಗಿನ ಕಾಲದಲ್ಲಿ ಲೋಯರ್ ಗ್ರೇಡ್ ಹಾಗೂ ಹೈಯರ್ ಗ್ರೇಡ್ ಪರೀಕ್ಷೆಗಳನ್ನು ಪಾಸಾದ ನಂತರ ಉನ್ನತ ಚಿತ್ರಕಲಾ ಶಿಕ್ಷಣಕ್ಕಾಗಲೀ ಚಿತ್ರಕಲಾ ಶಿಕ್ಷಕ ತರಬೇತಿಗಾಗಲೀ ಮುಂಬಯಿಯ ಜೆ.ಜೆ. ಕಲಾಶಾಲೆಗೇ ಹೋಗಬೇಕಿತ್ತು. ಅಕ್ಕಿಯವರಲ್ಲಿ ಅಭ್ಯಾಸ ಮಾಡಲು ಬರುವ ವಿದ್ಯಾರ್ಥಿಗಳೋ ಬಹು ಬಡ ಸಂಸಾರಗಳಿಂದ ಬಂದವರು. ಅವರು ಮುಂಬಯಿಯಲ್ಲಿ ಕಲಿಯುವುದು ಸಾಧ್ಯವೇ? ಅಕ್ಕಿ ಅವರಿಗೆ ಒಂದು ಉಪಾಯ ಹೊಳೆಯಿತು. ಗದುಗಿನ ಕೆಲವು ಉದಾರ ಹೃದಯದ ಸಿರಿವಂತರಲ್ಲಿ ಬೇಡಿ, ಸ್ಕಾಲರ್ ಶಿಪ್ ವ್ಯವಸ್ಥೆ ಮಾಡಿಸಿ, ಶಿರಸಂಗಿ ಲಿಂಗರಾಜರ ಫಂಡು ದೊರೆಯುವಂತೆ ಮಾಡಿ ಅವರ ಚಿತ್ರಕಲಾ ಶಿಕ್ಷಣದ ಮಾರ್ಗ ಸುಗಮವಾಗುವಂತೆ ಮಾಡಿದರು. ಈ

ಘಂಡನ್ನು ದೊರಕಿಸಿ ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯಲ್ಲಿ ಉನ್ನತ ಕಲಾ ವ್ಯಾಸಂಗವನ್ನು ಮುಗಿಸಿಕೊಂಡು ಬರಲು ಪ್ರಪ್ರಥಮವಾಗಿ ಸಿ.ಎನ್. ಪಾಟೀಲ ಅವರನ್ನು ಕಳಿಸಿದರು. ಸಿ.ಎನ್. ಅವರಲ್ಲಿ ಸುಪ್ತವಾಗಿದ್ದ ಕಲಾ ಚೈತನ್ಯವನ್ನು ಕಂಡುಕೊಂಡ ಅಕ್ಕಿಯವರು "ಅವನು ಕಲಿತು ಬರಲಿ; ಅವನೊಬ್ಬನಿಂದಲೇ ನಾನು ಏನೆಲ್ಲವನ್ನೂ ಸಾಧಿಸಬಲ್ಲೆ" ಎಂದುಕೊಂಡರು. ಪಾಟೀಲರು ಮುಂಬಯಿಯಿಂದ ಮರಳಿ ಗದುಗಿಗೆ ಬಂದ ನಂತರ ಅಕ್ಕಿಯವರ ಸಹಾಯಕ್ಕೆ ನಿಂತರು. ಗುರುವಿಗೆ ತಕ್ಕ ಶಿಷ್ಯರಾದರು. ಹೀಗೆ ಪ್ರಾರಂಭವಾದ ವಿಜಯ ಕಲಾಮಂದಿರ ಬೃಹದಾಕಾರ ತಾಳಿ ತನ್ನದೇ ಆದ ಕಟ್ಟಡ, ಪ್ರಭಾವೀ ಶಿಕ್ಷಕರನ್ನು ಪಡೆದು ಇಡೀ ಕನ್ನಡ ನಾಡಿನಲ್ಲಿಯೇ ಖ್ಯಾತಿವೆತ್ತು ರಾಜ್ಯ ಹಾಗೂ ಕೇಂದ್ರ ಸರಕಾರಗಳ ಮಾನ್ಯತೆ ಪಡೆದು ನಿಂತಿದೆ.

ಶಿಷ್ಯರ ಆಗ್ರಹದ ಮೇರೆಗೆ 1960ರಲ್ಲಿ ಡ್ರಾಯಿಂಗ್ ಶಿಕ್ಷಕರ ತರಬೇತಿ ವರ್ಗಗಳನ್ನೂ ಮಣ್ಣಿನ ಪ್ರತಿಮಾ ನಿರ್ಮಾಣ ವರ್ಗಗಳನ್ನೂ ಪ್ರಾರಂಭಿಸಿದ ಅಕ್ಕಿ ಶಿಷ್ಯರ ಅಪೇಕ್ಷೆಯಂತೆಯೇ ಸಂಗೀತ, ನೃತ್ಯ, ನಾಟಕ, ವರ್ಗಗಳನ್ನೂ ಪ್ರಾರಂಭಿಸಿದರು. ಅದಕ್ಕಾಗಿ "ವಿಜಯ ನಾಟ್ಯ ಸಂಘ"– ಎಂಬ ಪ್ರತ್ಯೇಕ ಅಂಗ ಸಂಸ್ಥೆಯೊಂದು ಪ್ರಾರಂಭವಾಯಿತು. ಸಂಗೀತ, ನೃತ್ಯ ಕಲಾಭ್ಯಾಸಿಗಳಿಗಾಗಿ 'ಅಖಿಲಭಾರತ ಗಾಂಧರ್ವ ಮಹಾವಿದ್ಯಾಲಯ'ದ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪರೀಕ್ಷಾ ಕೇಂದ್ರವನ್ನೂ ಪಡೆದುಕೊಂಡರು. ಶಿಷ್ಯರೆಂದರೆ ಅಕ್ಕಿಯವರ ದೃಷ್ಟಿಯಲ್ಲಿ ಅವರ ಸ್ವಂತ ಮಕ್ಕಳಂತೆ. ಸರಕಾರದಿಂದ ಸಾಕಷ್ಟು ಸಹಾಯ ದೊರೆಯದಿದ್ದಾಗ ಶಿಷ್ಯರಿಗಾಗಿ, ಸಂಸ್ಥೆಗಾಗಿ ತಮ್ಮ ನಿವೃತ್ತಿ ನಿಧಿ (ಪ್ರಾವಿಡೆಂಟ್ ಫಂಡ್)ಯನ್ನೇ ಬಳಿಸಿ ಸಂಸ್ಥೆ ಮುನ್ನಡೆಯುವಂತೆ ಮಾಡಿದ ವಾತ್ಸಲ್ಯ ಅಕ್ಕಿ ಅವರದು.

ಕರ್ನಾಟಕ ರಾಜ್ಯೋದಯಕ್ಕೂ ಮೊದಲೇ ಅಂದರೆ 1950ರಲ್ಲಿ ಉತ್ತರ ಕರ್ನಾಟಕ ಪ್ರದೇಶವೆಲ್ಲ ಮುಂಬಯಿ ರಾಜ್ಯಾಡಳಿತಕ್ಕೊಳಪಟ್ಟ ಕಾಲದಲ್ಲಿಯೇ ಮುಂಬಯಿ ರಾಜ್ಯದ ಕಲಾ ಶಿಕ್ಷಣ ಮಂಡಳಿಯ ಸಲಹಾ ಸದಸ್ಯರಾಗಿ ಶ್ರೀ ಅಕ್ಕಿಯವರು ನಾಲ್ಕು ವರ್ಷಗಳ ಸೇವೆ ಸಲ್ಲಿಸಿದರು. ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾದ "ಕರ್ನಾಟಕ ಆರ್ಟ್ ಸೊಸೈಟಿ"ಯ ಕಾರ್ಯದರ್ಶಿಗಳಾಗಿ, ಅದಕ್ಕೆ ಹೊಸ ಚೈತನ್ಯ ನೀಡಿ ಸರಕಾರದ ಮಾನ್ಯತೆಯನ್ನೂ ಗಳಿಸಿಕೊಟ್ಟರು. ರಾಜ್ಯ ಪುನರ್ರಚನೆಯ ನಂತರ 1961ರಲ್ಲಿ ಕರ್ನಾಟಕ ಕಲಾ ಶಿಕ್ಷಣ ಮಂಡಳಿಯ ರಚನೆಯಾದುದು ಅಕ್ಕಿಯವರ ಪ್ರೇರಣೆಯಿಂದಲೇ ಎನ್ನಬಹುದು. ಕರ್ನಾಟಕ ಲಲಿತಕಲಾ ಅಕಾಡೆಮಿ ರೂಪುಗೊಂಡುದರಲ್ಲಿಯೂ ಅಕ್ಕಿಯವರ ಪಾತ್ರವಿದೆ. 1962ರಲ್ಲಿ ಕಲಕತ್ತಾದಲ್ಲಿ ನಡೆದ ಅಖಿಲಭಾರತ ಕಲಾವಿದರ ಸಮ್ಮೇಳನದಲ್ಲಿ ಮೈಸೂರು ಲಲಿತಕಲಾ ಅಕಾಡೆಮಿಯಿಂದ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಿದ ಅಕ್ಕಿ 1966ರಿಂದ ಹತ್ತು ವರ್ಷಗಳ ಕಾಲ ಸತತವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಇಂದಿಗೂ ಕರ್ನಾಟಕ ರಾಜ್ಯದ ಚಿತ್ರಕಲಾ ಶಿಕ್ಷಕರ ಹಾಗೂ ಚಿತ್ರಕಲಾ ಶಿಕ್ಷಣದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅಕ್ಕಿ 1968ರಲ್ಲಿ ಕರ್ನಾಟಕ ರಾಜ್ಯದ ಚಿತ್ರಕಲಾವಿದರ ಹಾಗೂ ಚಿತ್ರಕಲಾ ಶಿಕ್ಷಕರ 4ನೆಯ ಸಮ್ಮೇಳನವನ್ನು ಗದಗಿನಲ್ಲಿ ಸಂಘಟಿಸಿ, ಕಲಾ ಶಿಕ್ಷಣ ಕ್ಷೇತ್ರದ ಬೇಕು–ಬೇಡಗಳನ್ನು ನಿರ್ಧರಿಸುವಂತೆ ಪ್ರಚೋದನೆ ನೀಡಿದರು. ಕನ್ನಡನಾಡಿನ ಇಂದಿನ ಸಮಕಾಲೀನ ಕಲೆಯ ವಿರಾಟ್ರೂಪ ಪ್ರದರ್ಶನದಲ್ಲಿ ಅಕ್ಕಿ ಅವರ ಶ್ರಮವೂ ಗಣನೀಯ ಪ್ರಮಾಣದಲ್ಲಿದೆ. "ಕಲೆ ಕಾಲಕಾಲಕ್ಕೆ ಹೊಸ ರೂಪ ತಳೆಯಬೇಕು, ಹೊಸ ಹೊಸ ಆಯಾಮಗಳಿಂದ ನಮ್ಮ ಕಲಾ ಪ್ರಪಂಚ ಹಸನಾಗಬೇಕು"–ಎಂಬ ಚಿಂತನೆ ಅವರದು.

ಉತ್ತರ ಕರ್ನಾಟಕದ ಕೆಲವೇ ಉತ್ತಮ ಕಲಾವಿದರಲ್ಲಿ ಶ್ರೀ ಸಿ.ಎನ್.ಪಾಟೀಲ್, ಎ.ಐ.ಕಮಾನಗಾರ, ಸಿ.ಟಿ. ರಾಯ್ಕರ, ಬಿ.ಜಿ.ವಾರಿ, ಎನ್.ಎಸ್.ಶಿಲ್ಪಿ, ದಿ. ಎಸ್.ಜಿ. ಗೂಳಣ್ಣವರ, ದಿ. ಸಿ.ವ್ಹೈ.ಕಾಮಾಜಿ, ಬಿ.ಕೆ.ಹಿರೇಮಠ, ವಿ.ಟಿ.ಅಕ್ಕಿ, ಅಶೋಕ ಅಕ್ಕಿ ಹಾಗೂ ಪ್ರಭಾವೀ ಕಲಾ ಶಿಕ್ಷಕರಾದ ಆರ್.ಎಂ.ಹಡಪದ, ಎಸ್.ಕೆ.ಹೂಗಾರ, ಆರ್.ಎಸ್. ಮಡಿವಾಳರ ಮುಂತಾದವರೆಲ್ಲ ಅಕ್ಕಿ ಅವರ ಶಿಷ್ಯರೇ ಆಗಿದ್ದಾರೆ. ಅದು ಅವರ ಕಲಾಸೇವೆಯ ಸಜೀವ ಕೃತಿಗಳು ಎನ್ನಬಹುದು. ಅವರ ಸೇವಾ ಹಿರಿಮೆಯನ್ನು ಗೌರವಿಸಿ, ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಅವರಿಗೆ 1969–70ನೇ ಸಾಲಿನ ಪ್ರಶಸ್ತಿಯನ್ನು ನೀಡಿತು. (ಅವರಿಗೆ ಗೌರವ ಧನವನ್ನೂ ನೀಡುತ್ತ ಬಂದಿದೆ.) ಮುಂದೆ 1981ರಿಂದ ಮೂರು ವರುಷಗಳ ಕಾಲ "ಅಕಾಡೆಮಿಯ ಅಧ್ಯಕ್ಷ" ಸ್ಥಾನವನ್ನೂ ನಿರ್ವಹಿಸಿದರು. ಅಕ್ಕಿಯವರು ರಾಜ್ಯದ

ಕಲಾ ಶಿಕ್ಷಣದ ಅಭ್ಯುದಯಕ್ಕಾಗಿ 1970ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಪತ್ರಿಕೆಗಳಿಗೆ ಸಲಹಾಗಾರರಾಗಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಗ್ರಹಿಸಿದ "ಚಿತ್ರಕಲಾ ಇತಿಹಾಸ"ದ ಗ್ರಂಥ ಸಂಪಾದಕರಾಗಿ, ರಾಜ್ಯದ ಕಲಾ ಶಿಕ್ಷಕರ ಸಂಘದ ಚೇರ್‌ಮನ್ನರಾಗಿ, ರಾಜ್ಯದ ಕಲಾ ಶಾಲೆಗಳ ಫೆಡರೇಷನ್ನಿನ ಅಧ್ಯಕ್ಷರಾಗಿ, ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಮೈಸೂರು ಆರ್ಟ್ ಅಕಾಡೆಮಿ ಜನರಲ್ ಕೌನ್ಸಿಲ್‌ನ ಸದಸ್ಯರಾಗಿ, ವಿಶ್ವ ಕನ್ನಡ ಸಮ್ಮೇಳನದ ಸಾಂಸ್ಕೃತಿಕ ಕಮಿಟಿಯ ಹಾಗೂ ಕಲಾ ಮಹೋತ್ಸವ ಮೆರವಣಿಗೆಯ ಸದಸ್ಯರಾಗಿ ಶ್ರಮಿಸಿದ ಹಿರಿಮೆಯನ್ನು ಪಡೆದ ಮಹಾ ವ್ಯಕ್ತಿಯಾಗಿರುವರಲ್ಲದೆ, 1958ರಿಂದ ಅಂತರ ರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಯಾದ ರೋಟರಿ ಕ್ಲಬ್‌ನ ಸದಸ್ಯರಾಗಿ, 1972–73ರಲ್ಲಿ ರೋಟರಿ ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ, 1945ರಿಂದ 1952ರವರೆಗೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸದಸ್ಯರಾಗಿ ಸಮಾಜ ಸೇವಾಧುರಂಧರರೆಂಬ ಕೀರ್ತಿಭಾಜನರಾಗಿದ್ದಾರೆ. ಸಾರ್ವಜನಿಕರಿಂದ, ಅಸಂಖ್ಯ ಕಲಾವಿದ ಹಾಗೂ ಕಲಾಭಿಮಾನಿಗಳಿಂದ ಬಿರುದು, ಪ್ರಶಸ್ತಿಗಳನ್ನು ಪಡೆದ ಅಕ್ಕಿಯವರ ವಿಜಯ ಕಲಾ ಮಂದಿರ ಇಂದು ದಕ್ಷಿಣದ ಶಾಂತಿನಿಕೇತನದಂತಿದೆ. 1985ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಪ್ರಥಮವಾಗಿ ಮನ್ನಣೆ ಪಡೆದು ಕಲಾ "ವಿಜಯ ಲಲಿತಕಲಾ ಕಾಲೇಜು" ಆಗಿದೆ. ಎಂಥ ನೋವು, ಕಷ್ಟಗಳು ಎದುರಾದರೂ ಅವುಗಳನ್ನು ಸುಲಭವಾಗಿ ಎದುರಿಸುವ ಧೈರ್ಯ ಅಕ್ಕಿಯವರದು. ಅವರ ನಗೆ, ಮಾತುಗಾರಿಕೆಯ ಹಿಂದೆ ಇರುವ ಧೃಡಮನಸ್ಸು ತೀವ್ರ ಕಾರ್ಯತತ್ಪರತೆ ಮರೆಯುವಂತಿಲ್ಲ.

ಎ. ಟಿ. ಕಾಳೆ

ಟಿ.ಪಿ. ಅಕ್ಕಿ



ನಾಸಿಕದ ದೇವಾಲಯ

ಎ. ಸಿ. ಎಚ್. ಆಚಾರ್ಯ



"ತೀರಾ ಬೇಸರವಾದಾಗ, ಮನಸ್ಸು ತಳಮಳಗೊಂಡು, ಸಮಸ್ಯೆಗಳು ಬಂದಾಗ ನೇರವಾಗಿ ದೇವನಹಳ್ಳಿಗೆ ಹೋಗಿ ಆಚಾರ್ಯರನ್ನು ನೋಡಿ ನಿಮ್ಮ ಕಷ್ಟ–ಸುಖಗಳನ್ನು ತೋಡಿಕೊಳ್ಳಿ; ಮನಸ್ಸಿಗೆ ಸಮಾಧಾನವಾಗುತ್ತದೆ, ನೆಮ್ಮದಿ ಸಿಗುತ್ತದೆ.'' ಇದು ಒಬ್ಬರ ಅನುಭವವಲ್ಲ, ಹಲವಾರು ಮಂದಿಯ ಅನುಭವ. ಅವರು ಕಲಾವಿದರೂ ಆಗಬೇಕಿಲ್ಲ, ಸಾಹಿತಿ ಆಗಿರಬಹುದು, ಸಂಶೋಧಕ ಆಗಿರಬಹುದು, ಜನ ಸಾಮಾನ್ಯನೇ ಆಗಿರಬಹುದು. ಆಚಾರ್ಯರೊಂದಿಗೆ ಸ್ವಲ್ಪ ಹೊತ್ತು ಮಾತಾಡಿ ಬಂದರೂ ಏನೋ ಒಂದು ಧನ್ಯತೆಯ ಭಾವ, ಹೊಸ ವಿಷಯಗಳ ಮಹಾಪೂರ, ಮುಂದಿನ ಹಲವು ದಿನಗಳವರೆಗೆ ಚಿಂತನೆಗೆ ಆಹಾರ, ಅರವತ್ತು ಮೀರಿದ ಆಚಾರ್ಯರೂ ಅಷ್ಟೆ. ಅರಸಿ ಬಂದವರನ್ನು 'ಆರೆಂದು' ಕೇಳುತ್ತಿರಲಿಲ್ಲ. ಬಂದವರಿಗೆ ತುಂಬುಹೃದಯದ ಸ್ವಾಗತ. ತಮ್ಮ ಗುರುಕುಲಾಶ್ರಮದ ಪರಿಚಯ. ಕಾಲ, ದೇಶದ ಪರಿವೇ ಇಲ್ಲದೆ ಶಿಲ್ಪ ಸಾಮ್ರಾಜ್ಯದಲ್ಲಿ ಒಂದಾಗಿ ಕರಗಿ ಹೋದ ಅನುಭವ ಬಂದವರಿಗೆ. ಶಿಲ್ಪಿ ಕಡೆದು ತೆಗೆಯುವುದು ಕಲ್ಲಿನ ಒಂದು ಮೂರ್ತಿಯಲ್ಲ. ಅದೊಂದು ಶಿಲ್ಪ ಕಲಾಕೃತಿ ಪೂಜಾವಸ್ತು, ಕೇವಲ ಆಗಮಗಳ ಮಂತ್ರ ಘೋಷಗಳಲ್ಲ, ಅದೊಂದು ವೈಜ್ಞಾನಿಕ ತಿಳಿವಳಿಕೆ. ಅನೇಕ ತಪ್ಪು–ಸರಿಗಳನ್ನು ಮಾಡಿ, ಮೂಡಿಸಿದ ಜ್ಞಾನ ಭಂಡಾರ. ಅದರ ಆಳ–ಅಂತರಾರ್ಥ ತಿಳಿದು ಬಳಸಿಕೊಳ್ಳಬೇಕು ಎಂಬವಾದವಾಗಿತ್ತು ಆಚಾರ್ಯರದು.

ಬೆಂಗಳೂರು ಜಿಲ್ಲೆಗೆ ಸೇರಿದ ದೇವನಹಳ್ಳಿ ಐತಿಹಾಸಿಕವಾಗಿ ಪ್ರಸಿದ್ಧವಾದುದು. 350 ವರ್ಷಗಳ ಹಿಂದೆ ಮಧುರೆಯಿಂದ ಬಂದ ಕುಟುಂಬಗಳಲ್ಲಿ ಇಂದು ಅಲ್ಲಿ ಉಳಿದಿರುವುದು ಶಿಲ್ಪಿ ಹನುಮಂತಾಚಾರ್ಯರದು ಮಾತ್ರ. ಸುತ್ತಮುತ್ತಲ ಪ್ರದೇಶದಲ್ಲಿ ಇವರ ಹಿರಿಯರ ಶಿಲ್ಪಕಲಾ ನೈಪುಣ್ಯ ಕಾಣಬಹುದು. ಶಿಲ್ಪ ಕಲೆ ಕಲಿಯಲು ಬಂದವರಿಗೆ ಅನ್ನ, ವಸತಿ ಕೊಟ್ಟು, ಸಂತೋಷದಿಂದಲೇ ಕಲಿಸಿಕೊಡುತ್ತಿದ್ದರು. ಆಚಾರ್ಯರು ಹೀಗೆ ವರ್ಷಕ್ಕೆ 30–40 ಮಂದಿ ಶಿಷ್ಯರಿಗೆ ಶಿಲ್ಪಕಲೆ ಕಲಿಸುತ್ತಿದ್ದರು. 1952ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಕೃಪೆಯಿಂದ ಶಿಲ್ಪಶಾಲೆ ಆರಂಭವಾಯಿತು. ಸರ್ಕಾರದಿಂದ ಆಗೊಮ್ಮೆ ಈಗೊಮ್ಮೆ ಶಿಷ್ಯವೇತನ ಇತ್ಯಾದಿ ಸಹಾಯ.

ತಮ್ಮ ತಾಯಿ ಶೇಷಮಾಂಬ ಅವರಿಂದಲೇ ಶಾಸ್ತ್ರೋಕ್ತವಾಗಿ ಆಗಮ ಇತ್ಯಾದಿಗಳನ್ನು ಅನುಸರಿಸಿ, ಶಿಲ್ಪಕಲೆ ಕಲಿತ ಆಚಾರ್ಯರ ವಿಷಯಜ್ಞಾನ ಅಪಾರ, ಮಾತು ನಿರರ್ಗಳ. "ಯಾರೋ ಎಂದೋ ಮಾಡಿದ ಶಾಸ್ತ್ರ ಸಂಪ್ರದಾಯಗಳು ನಿಂತ ನೀರಾಗಿ ಕೊಳೆಯಬಾರದು. ಕಾಲಕಾಲಕ್ಕೆ ಬದಲಾಗಬೇಕು'' ಇದು ಅವರ ಭಾವನೆ. ನಿದರ್ಶನವಾಗಿ ಗಣಪತಿಯ ಶಿಲ್ಪದ ಹಿಂದೆ ಮಿಥುನದ ಜೋಡಿಯೊಂದನ್ನು ಮಾಡಿ ಅದಕ್ಕೆ ತಕ್ಕ ಶ್ಲೋಕವನ್ನು ರಚಿಸಿ, "ಮುಂದೆ ಇದೇ ಒಂದು ಆಗಮ ಶ್ಲೋಕವಾಗಬಹುದು'' ಎನ್ನುತ್ತಿದ್ದರು. ಆಕಾರ, ಪ್ರಮಾಣ, ಸಂಕೇತಗಳು ಹಿಂದೆ ಯಾರೋ ಒಬ್ಬಾತನಿಂದ ರಚಿತವಾಗಿ, ಪರಂಪರೆ ಬೆಳೆದಿದೆ. ಹಾಗೆ ಇಂದೂ ಹೊಸದೊಂದು ಹುಟ್ಟಬೇಕು, ಬೆಳೆಯಬೇಕು ಎಂಬ ಅಭಿಪ್ರಾಯ ಅವರದಾಗಿತ್ತು.

ಆಚಾರ್ಯರ ಮಾತುಗಳಲ್ಲಿ ಅವರು ಬಹಳ ಹಿಂದುಳಿದಿದ್ದಾರೇನೋ ಎಂಬ ಭಾವನೆ ಬರುತ್ತಿದ್ದುದು ಸಹಜ. ಹಿಂದೆ ಇದ್ದ ಆಚಾರ, ವಿಚಾರ, ಸಂಸ್ಕೃತಿಗಳು ಹಾಳಾಗಿಹೋದವು ಎಂದೋ; ಬ್ರಾಹ್ಮಣನಿಗೆ ಇದ್ದ ಸ್ಥಾನಮಾನ ಕುರಿತು ಅವರು ಹೇಳುವಾಗ ಇವರು ಯಾವ ಕಾಲದಲ್ಲಿ ಇದ್ದಾರೆ ಎಂಬ ಸಂಶಯ ಬರುತ್ತಿದ್ದುದೂ ಸಹಜ. ಆದರೆ ಹಳೆಯದರಲ್ಲಿ [illegible] ಇರಿಸಿಕೊಳ್ಳಬೇಕಾದುದು, ಬಿಡಬೇಕಾದುದು ಯಾವುದು? ಇನ್ನೊಮ್ಮೆ ಪರಿಶೀಲಿಸಿ ಈ ಕಾಲಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕಾದುದು ಯಾವುದು ಎಂದು ವಿವರಿಸುತ್ತಾ ಹೋದಂತೆ, ನಾವು ಎಲ್ಲಿ ತಪ್ಪಿದ್ದೇವೆ ಎಂಬ ಅರಿವಾಗುತ್ತಿತ್ತು. ಇಂದಿನ ಬದುಕಿಗೆ ಸರಿಹೋಗುವಂತಹ ವಿಚಾರಗಳು ಹಳೆಯದರಲ್ಲಿ ಇಲ್ಲವೆಂದು ತಪ್ಪು ತಿಳಿದು ಸಾರಾಸಗಟಾಗಿ ಹಳೆಯದೆಲ್ಲವನ್ನೂ ಹೊಳೆಗೆ ಎಸೆದೆವು. ಹೊಸದನ್ನು ಇಡಿಯಾಗಿ ರೂಪಿಸಿಕೊಳ್ಳಲು ಅಸಮರ್ಥರಾದೆವು ಎಂಬ ಭಾವನೆ ಬರುತ್ತಿತ್ತು.

"ಕಲಾವಿದ ಆತ್ಮಾನಂದದ ಕಲೆಯನ್ನು ಮಾಡಬೇಕು. ಜನಕ್ಕೆ ಅದರಿಂದ ಜ್ಞಾನ ಬೋಧೆ, ಆನಂದ ಎರಡೂ ಕೊಡತಕ್ಕಂತಹ ಕೃತಿ ಮಾಡೋದು ಕಲಾವಿದನ ಕರ್ತವ್ಯ. ಸಮಾಜದಲ್ಲಿ ಕಲಾವಿದನಿಗೆ ಗುರು ಸ್ವರೂಪದ ಸ್ಥಾನ ಈಗಲೂ ಇದೆ.'' ಇತ್ಯಾದಿಗಳನ್ನು ಹೇಳುತ್ತಾ ಆಚಾರ್ಯರು ಹೇಗೆ ಮೂರ್ತಿ ಪೂಜೆ ಬಂತು, ಬರಬೇಕಾಯಿತು, ಮೂರ್ತಿಯಲ್ಲಿ ಕಲೆಯ ಅಂಶವನ್ನು ಕಾಣುವುದು ಹೇಗೆ ಎಂದು ವಿವರಿಸುತ್ತಾ ಹೋದಾಗ, ಕಣ್ಣು ತೆರೆದ ಅನುಭವ.

ಹನುಮಂತಾಚಾರ್ಯರೂ ಸಹ ಉಳಿದ ಸಂಪ್ರದಾಯಿಕ ಶಿಲ್ಪಿಗಳಂತೆ ದೇವಾನುದೇವರ ವಿಗ್ರಹಗಳನ್ನೇ ಹೆಚ್ಚಾಗಿ ಮಾಡುತ್ತಿದ್ದರು. ಬೇಡಿಕೆ ಇದ್ದುದೂ ಅಷ್ಟಕ್ಕೇ. ಆದ ಕಾರಣ ಪೂಜಾ ಮೂರ್ತಿಗಳನ್ನು ಮಾಡಿಸುವವರ ಹೃದಯ ಅರಿತು, ಶಿಲ್ಪವನ್ನು ಕಲಾಕೃತಿ ಎಂಬಂತೆ ರಚಿಸಿ ಕೊಡುತ್ತಿದ್ದರು. ಬೇರೆ ಕೆಲವು ಕಸುಬುದಾರಿ ಶಿಲ್ಪಿಗಳಂತೆ ಇವರ ಶಿಲ್ಪಗಳಲ್ಲಿ ತಾರತಮ್ಯಗಳಿಲ್ಲ. ಮಾಡಿಸಿದವನು ತನ್ನಿಚ್ಛೆ ಬಂದಷ್ಟು ಮೌಲ್ಯ ನೀಡಲಿಲ್ಲವೆಂದು ಕಲಬೆರಕೆ ಕೆಲಸ ಮಾಡುವವರಲ್ಲ. ಒಡವೆಯೋ, ವಸ್ತ್ರವೋ, ನಿಲವೋ, ಪೀಠ–ಪ್ರಭಾವಳಿಗಳೊಂದಿಗೆ ಪ್ರಸ್ತುತ ಶಿಲ್ಪಕ್ಕೆ ಎಷ್ಟು ಬೇಕೋ ಅಷ್ಟನ್ನೂ ಪರಿಪೂರ್ಣವಾಗಿಯೇ ರೂಪಿಸಿ ಕೊಡುತ್ತಿದ್ದರು. ಆದುದರಿಂದ ಹಣದ ವಿಷಯದಲ್ಲಿ ಸೋಲು ಅವರಿಗೇ. ತಾವು ಚಾಲುಕ್ಯರ ಶೈಲಿಯನ್ನು ಮೆಚ್ಚಿರುವುದಾಗಿಯೂ, ತಮ್ಮ ಕೃತಿಗಳಲ್ಲೂ ಅದರ ಛಾಯೆ ಕಾಣಬಹುದೆಂದು ಹೇಳುತ್ತಿದ್ದರು. ಇದರ ನಿದರ್ಶನ ಗದಗ್‌ನಲ್ಲಿಯ ಚಾಲುಕ್ಯರ ಕಾಲದ ಪ್ರಖ್ಯಾತ ಸರಸ್ವತಿಯನ್ನು ಅನುಸರಿಸಿ ಅದೇ ಪ್ರಮಾಣದಲ್ಲಿ ಆಚಾರ್ಯರು ಕೆತ್ತಿದ ಪರಿಪೂರ್ಣ ವಿಗ್ರಹ. ಉಳಿದ ಶಿಲ್ಪಗಳಲ್ಲಿ ಶಿಲೆ, ಪ್ರಮಾಣ ಇತ್ಯಾದಿಗಳನ್ನು ಅನುಸರಿಸಿ ಚಾಲುಕ್ಯರೇ ಅಲ್ಲದೆ, ಪಲ್ಲವ, ಗಾಂಧಾರ ಶೈಲಿಯ ಪ್ರಭಾವವು ಅವರ ಶಿಲ್ಪಗಳಲ್ಲಿ ಕಾಣಬರುತ್ತದೆ. ಕೈಗಳನ್ನು ಭುಜದಿಂದ ಹೊರಚಾಚಿದಂತಿರಿಸಿ, ಎತ್ತರವಾದ ನಿಲುವು, ಗತ್ತಿನಿಂದ ತಲೆಯನ್ನು ತುಸು ಎತ್ತಿದಂತೆ ತೋರಿಸಿ, ದೃಢವಾದ ಕಾಲುಗಳ ಮೇಲೆ ನಿಲ್ಲಿಸಿ, ಹಿಂದು–ಮುಂದುಗಳನ್ನು ಪೂರ್ಣವಾಗಿ ಕಡೆದ ಇವರ ಶಿಲ್ಪಗಳಲ್ಲಿ ಚೆಲವು–ಲಾಲಿತ್ಯಗಳಿವೆ. ಆಗಮಗಳ ರೀತ್ಯಾ ಪ್ರಮಾಣಬದ್ಧವಾಗಿಯೂ ಇರುತ್ತವೆ.

ಆಚಾರ್ಯರು ಹೆಚ್ಚು ಪ್ರಸಿದ್ಧರಾದುದು ವಿದ್ಯೆ ಕಲಿಸುವ ರೀತಿಯಿಂದ. ಅದು ಗುರುಕುಲಾಶ್ರಮದ ಪದ್ಧತಿ, ಶಿಷ್ಯರುಗಳಲ್ಲಿ ಸ್ಥಳೀಯರೇ ಹೆಚ್ಚಾಗಿದ್ದರೂ, ಕರ್ನಾಟಕದ ಬೇರೆಯ ಭಾಗಗಳು ಹಾಗೂ ನೆರೆಯ ನಾಡುಗಳಿಂದಲೂ ಸಾಕಷ್ಟು ಆಸಕ್ತರು ಹುಡುಕಿ ಬಂದು ಸೇರುವಷ್ಟು ಆಕರ್ಷಣೆ – ಆಚಾರ್ಯರ ಶಾಲೆಯದು. ಕಲಿತ ಮೇಲೆ ತಮ್ಮೂರಿಗೆ ಕಲೆಯನ್ನು ಕೊಂಡುಹೋಗಿ ಯಶಸ್ವಿಯಾಗಿ ಮುಂದುವರಿಸುತ್ತಾ ಆಚಾರ್ಯರ ಹೆಸರನ್ನೂ ಪ್ರಸರಿಸುತ್ತಾರೆ. ಟಿಪ್ಪು ಸುಲ್ತಾನ್ ಹುಟ್ಟಿದ ದೇವನಹಳ್ಳಿಯ ಮುಸ್ಲಿಂ ಜನಕ್ಕೂ ಶಿಲ್ಪಕಲೆಯನ್ನು ಕಲಿಯುವ ಆಸಕ್ತಿ. ಮುಸ್ಲಿಂ ಹುಡುಗರಲ್ಲದೆ, ಹುಡುಗಿಯರೂ ಬಂದು ಶಾಸ್ತ್ರೋಕ್ತವಾಗಿ ಶಿಲ್ಪಕಲೆಯನ್ನು ಇವರ ಬಳಿ ಕಲಿತುದು ಮೆಚ್ಚಬೇಕಾದ ಸಂಗತಿ. "ಶಿಲ್ಪಶಾಸ್ತ್ರ ಕಲಿಯುವರಿಲ್ಲದೆ ಹಾಳಾಗುತ್ತಿದೆ ಎಂದು ಎಲ್ಲರಿಗೂ ಶಿಲ್ಪಕಲೆಯನ್ನು ಹೇಳಿಕೊಟ್ಟಾಗ, ಮುಸ್ಲಿಂ ಅವರೂ ಹಿಂದೂ ವಿಗ್ರಹಗಳನ್ನು ಮಾಡಿದಾಗ ಸಂಪ್ರದಾಯದ ಪ್ರಕಾರ ವಿರುದ್ಧ ಎನಿಸುವುದಿಲ್ಲವೆ?'' ಎಂಬ ಪ್ರಶ್ನೆಗೆ "ಸಂಪ್ರದಾಯದ ವಿಗ್ರಹಗಳು ಬರೀ ದೇವಸ್ಥಾನಗಳಿಗೆ ಮಾತ್ರ ಮೀಸಲು. ಆದರೆ ಕಲಾಕೃತಿಗಳನ್ನೇ ಹೆಚ್ಚಾಗಿ ಮಾಡುವುದರಿಂದ ಯಾರು ಮಾಡಿದರೂ ತಪ್ಪಿಲ್ಲ'' ಎಂಬುದು ಆಚಾರ್ಯರ ಉತ್ತರ. "ಅವರು ಮಾಡಿದ ಶಿಲ್ಪವನ್ನು ಪೂಜಿಸಬಹುದೇ'' ಎಂದು ಕೇಳಿದಾಗ

"ಹೃದಯ ಬೇಕಾಗಿದೆಯೇ ಹೊರತು, ಜಾತಿಯಲ್ಲ. ತಾಯಿಯೇ ಮೊದಲ ಗುರುವಾದ್ದರಿಂದ ಹೆಣ್ಣು ಮಕ್ಕಳಿಗೆ ಕಲಿಸುವುದರಲ್ಲಿ ಆಸಕ್ತಿಯಿದೆ" ಎಂದು ಉತ್ತರಿಸುತ್ತಿದ್ದರು. ಅಂತೆಯೇ ವಿದ್ಯಾರ್ಥಿಗಳು ಸಂಸ್ಕೃತ ಕಲಿತಿರಬೇಕು ಎಂಬುದೂ ಕಡ್ಡಾಯವೇ. ಶಾಸ್ತ್ರಗಳೆಲ್ಲ ಸಂಸ್ಕೃತದಲ್ಲಿರುವುದರಿಂದ ಹಾಗೂ ಬೇರೆ ಬೇರೆ ಪ್ರದೇಶಗಳಿಂದ ಬರುವುದರಿಂದ ಸಂಸ್ಕೃತವನ್ನು ಸಾಮಾನ್ಯ ಭಾಷೆಯಾಗಿ ಬಳಸಿಕೊಳ್ಳಬಹುದು ಎಂಬುದು ಅವರ ಉದ್ದೇಶ. ಅಮರ, ವ್ಯಾಕರಣ, ಛಂದಸ್ಸುಗಳ ಕಲಿಕೆ ಕಡ್ಡಾಯ. ಶಿಲ್ಪಿಗೆ ಷಟ್ ಶಾಸ್ತ್ರಗಳು ತಿಳಿದಿರಬೇಕು ಎಂದು ವೈದ್ಯ, ಸಾಮುದ್ರಿಕ, ನೃತ್ಯ, ಚಿತ್ರ ಇತ್ಯಾದಿಗಳ ತಿಳಿವಳಿಕೆಯನ್ನೂ ಕೊಡುತ್ತಿದ್ದರು. ಮೊದಲು ರೇಖಾ ಚಿತ್ರದಲ್ಲಿ ರೂಪ ತಳೆದೇ ನಂತರ ಶಿಲ್ಪವಾಗುತ್ತದೆ ಎನ್ನುತ್ತಿದ್ದರು.

ಊರೊಳಗಿದ್ದ[illegible] ಒಳಹೊಕ್ಕರೆ ಪ್ರಾಚೀನ ಕಾಲದ ಆಶ್ರಮದಂತೆ, ಆಚಾ[illegible]ರು ಒಬ್ಬ ತಪಸ್ವಿಯಂತೇ, ನೋಡಲು ರವೀಂದ್ರನಾಥ ಟಾಗೂರರಂತೆ ಕಾಣಬರುತ್ತಿದ್ದುದು ಆಶ್ಚರ್ಯವೇನಲ್ಲ. ಶಾಲೆಯಲ್ಲಿ ಅಲ್ಲಲ್ಲಿ ಸಂಸ್ಕೃತ ಸುಭಾಷಿತಗಳ, ಫಲಕಗಳು, ಶಿಲೆ ಹಾಗೂ ಶಿಲ್ಪದ ಉಪಕರಣಗಳು, ಉಳಿಯನ್ನು ಆಗಾಗ್ಗೆ ಚೂಪುಮಾಡಲು ಅಗ್ಗಿಷ್ಟಿಕೆ, ಲೋಹದ ಶಿಲ್ಪ ಮಾಡಲು ಲೋಹ ಕರಗಿಸುವ ಕುಲುಮೆ ಇತ್ಯಾದಿಗಳು. ಮೂರ್ತಿಗಳು ಮೈ ತಾಳುವುದು, ಸುವಾಸಿತ ಹೂಗಿಡಗಳ ಮಧ್ಯೆ ಇದ್ದ ಶಿಲ್ಪಿಯ ಈ ಕಮ್ಮಟ ಶಾಲೆಯಲ್ಲಿ ಎರಡರಿಂದ ಹತ್ತು ವರ್ಷಗಳವರೆಗೆ ಹಲವು ಸ್ತರಗಳಲ್ಲಿ ಪಠ್ಯ ಕ್ರಮಗಳನ್ನು ಅಳವಡಿಸಿ ಕಲಿಸಿ ಕೊಡಲಾಗುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳೆಲ್ಲ ಅಲ್ಲಿಯೇ ವಾಸಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಪ್ರಾಯೋಗಿಕ ಅವಧಿಯ ನಂತರ ಉಳಿದ ವಿಷಯಗಳನ್ನು ಚರ್ಚಿಸಬಹುದು. ಸಾಂದರ್ಭಿಕವಾಗಿ ಅನೇಕ ವಿಷಯಗಳನ್ನು ತಿಳಿಯಬಹುದು. ಸಂದೇಹ ಬಂದಾಗಲೇ ಪರಿಹರಿಸಿಕೊಳ್ಳಬಹುದು. ಸಾಕಷ್ಟು ವಿಷಯ ತಿಳಿದಿರುವ, ತಮ್ಮನ್ನು ಕೇಳಿದವರಿಗೆ ಸೂಕ್ತವಾಗಿ ತಾನು ತಿಳಿದಿದ್ದನ್ನು ಧಾರೆಯೆರೆಯಬೇಕೆಂಬ ಮುಕ್ತ ಮನೋಭಾವದ ಆಚಾರ್ಯರು ನಿರರ್ಗಳವಾಗಿ ಹೇಳುತ್ತಾ ಹೋಗುತ್ತಿದ್ದರು, ಅದಕ್ಕೆ ಹೊತ್ತು–ಗೊತ್ತು ಇಲ್ಲ. ಮುಚ್ಚು–ಮರೆಯಿಲ್ಲ. ಊಟಕ್ಕೆ ಒಟ್ಟಿಗೆ ಕುಳಿತಾಗಲೂ ಆಹಾರದೊಂದಿಗೆ ಆಚಾರ್ಯವಾಣಿಯೂ ಒಳಹೋಗುತ್ತಿತ್ತು, ಪಚನವಾಗುತ್ತಿತ್ತು, ಮೆದುಳು ಬೆಳೆಯುತ್ತಿತ್ತು, ಹಳೆಯ ಸಂಕೇತಗಳನ್ನೇ ಹೊಸ ಸಂಯೋಜನೆಯಲ್ಲಿ ಇರಿಸಿ, ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುವ ಆಚಾರ್ಯರ ಶಿಲ್ಪಗಳನ್ನು ಬೇರೆಯದೇ ರೀತಿಯಿಂದ ವಿಮರ್ಶಿಸಬೇಕಾಗಿದೆ. ಅಂತಹ ವಿಮರ್ಶಕನಿಗೆ ಕಾಯಬೇಕಾಗಿದೆ.


(ಆಚಾರ್ಯರು 1989ರಲ್ಲಿ ತೀರಿಕೊಂಡರು.)

ಮಾ ಮಂಜುಳ

ಎ.ಸಿ.ಎಚ್. ಆಚಾರ್ಯ



ಹೆಚ್ ಎಸ್ ಇನಾಮತಿ



ತೈಲ ಮತ್ತು ಜಲವರ್ಣ ಚಿತ್ರಗಳೇ ಅಲ್ಲದೆ ವಿವಿಧ ಇಲಾಖೆಗಳಿಗೆ ಹಾಗೂ ನಾನಾ ಸಂಸ್ಥೆಗಳಿಗೆ ಪ್ರಚಾರ ಕಲಾಕೃತಿಗಳನ್ನು ರಚಿಸಿ ಖ್ಯಾತರಾದ ಕರ್ನಾಟಕದ ಹಿರಿಯ ಚಿತ್ರಕಲಾವಿದರಲ್ಲೊಬ್ಬರಾಗಿದ್ದ ಹರಿರಾವ್ ಶಾಮರಾವ್ ಇನಾಮತಿಯವರು 1900ರಲ್ಲಿ ಜಬ್ಬಲ್‌ಪುರದಲ್ಲಿ ಹುಟ್ಟಿದರು. ವಿಶ್ವವಿದ್ಯಾಸಿಲಯದ ಎಂಟ್ರೆನ್ಸ್ ಪರೀಕ್ಷೆಯವರೆಗೆ ಓದಿದ ನಂತರ ಕಲಾಸಕ್ತಿಯ ಪ್ರಭಾವದಿಂದ ಹಾಗೂ ತಂದೆಯ ಉತ್ತೇಜನದಿಂದ ಮುಂಬೈನ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆಯಲ್ಲಿ ಸಮರ್ಥ ಗುರುಗಳ ಮಾರ್ಗದರ್ಶನದಲ್ಲಿ ಐದು ವರ್ಷಕಾಲ ಚಿತ್ರ ಕಲಾ ವ್ಯಾಸಂಗ ಮಾಡಿದರು. ವ್ಯಾಸಂಗದ ಅವಧಿಯಲ್ಲಿ ನಡೆದ ಸ್ಪರ್ಧೆಯೊಂದರಲ್ಲಿ ಜಯಶಾಲಿಯಾಗಿ 'ಮೇಯೋ' ವಿದ್ಯಾರ್ಥಿ ವೇತನ ದೊರೆಯಿತು.

ಪ್ರಸ್ತುತ ಬಸವನಗುಡಿಯ ವಾಡಿಯಾ ರಸ್ತೆಯಲ್ಲಿ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಕಟ್ಟಡ ಸುಮಾರು 1943–44ರ ವರೆಗೂ ಇನಾಮತಿಯವರ ಕುಟುಂಬಕ್ಕೆ ಸೇರಿದು ಆಗಿತ್ತು. ಅಲ್ಲಿಯೇ ಇವರ ವಾಸ. ತಂದೆಯವರ ನಿಧನದ ನಂತರ ಆ ಕಟ್ಟಡವನ್ನು ಮಾರಾಟ ಮಾಡಲಾಯಿತು. ಧೋತಿ ಮತ್ತು ಜುಬ್ಬಾ ಧರಿಸಿ, ಬೆಳ್ಳಿಯ ಬಣ್ಣದ ಉದ್ದನೆಯ ತಲೆಗೂದಲನ್ನು ಹೊಂದಿರುತ್ತಿದ್ದ, ಎತ್ತರವಾದ ಉತ್ತಮ ಮೈ ಕಟ್ಟಿನ ಇನಾಮತಿಯವರು ಸದಾ ಹಸನ್ಮುಖಿ. ಮೃದು ಧ್ವನಿಯ ಮಾತುಗಾರರಾಗಿದ್ದ ಅವರು ಎಂದೂ ಯಾರನ್ನೂ ನೋಯಿಸುವಂಥ ಮಾತನಾಡಿದವರಲ್ಲ. ಇತರರಿಗೆ ಸಂತೋಷ ತರುವ ವಿಷಯಗಳನ್ನೇ ಮಾತನಾಡುತ್ತಿದ್ದ ಅವರು ಸಹೃದಯಿ. ಗುಂಪುಗಾರಿಕೆಯ ಸ್ಪರ್ಧಾತ್ಮಕವಾಗಿರುತ್ತಿದ್ದ ಆ ದಿನಗಳಲ್ಲೂ ಇಂಥ ವ್ಯಕ್ತಿತ್ವದ ಇನಾಮತಿಯವರಂಥ ಕಲಾವಿದರು ಅಪರೂಪವೆಂಬ ಅಭಿಪ್ರಾಯವನ್ನು ಅಸಮಕಾಲೀನ ಪತ್ರಕರ್ತರಾದ ಸಿ.ಹೆಚ್.ಪ್ರಹ್ಲಾದರಾವ್ ವ್ಯಕ್ತಪಡಿಸಿದ್ದಾರೆ. ಖ್ಯಾತ ಸಾಹಿತಿ ದಿ. ಕೆ.ವಿ. ಅಯ್ಯರ್ ಅವರ ಶಿಷ್ಯರಲ್ಲೊಬ್ಬರಾಗಿದ್ದ ಇನಾಮತಿ, ಅಲ್ಲಿನ ಅಂಗಸಾಧನೆಯಿಂದ ಉತ್ತಮ ದೇಹ ಸಂಪತ್ತನ್ನು ಹೊಂದಿದ್ದರು.

ಇನಾಮತಿಯವರು ಮುಂಬಯಿಯ ಬಿ.ಬಿ. ಅಂಡ್ ಸಿ.ಐ. ರೈಲ್ವೇ ಹಾಗೂ ಬೆಂಗಾಲ್ ನಾಗ್‌ಪುರ್ ರೈಲ್ವೇ ವಿಭಾಗಗಳಿಗೆ 'ವಿಸಿಟ್ ಬಾಂಬೆ', 'ವಿಸಿಟ್ ನಾಗ್‌ಪುರ್' ಇತ್ಯಾದಿ ಭಿತ್ತಿಪತ್ರಗಳನ್ನು ಪ್ರಚಾರಕ್ಕಾಗಿ, ಅತ್ಯಂತ ಆಕರ್ಷಕವಾಗಿ ಸಿದ್ಧಪಡಿಸಿಕೊಟ್ಟಿದ್ದರು. ಅದು ಸ್ವಾತಂತ್ರ್ಯಪೂರ್ವ ಕಾಲ. ನಮ್ಮ ರೈಲ್ವೇ ವಿಭಾಗ ಮೈಸೂರು ಸಂಸ್ಥಾನಕ್ಕೆ ಸೇರಿತ್ತು. ಮೈಸೂರು ಸಂಸ್ಥಾನದ ರೈಲ್ವೇ ಟ್ರಾಫಿಕ್ ಮ್ಯಾನೇಜರ್ ಮುಂಬಯಿಗೆ ಅನಿರೀಕ್ಷಿತ ಭೇಟಿ ನೀಡಿದ ಸಂದರ್ಭದಲ್ಲಿ ಇನಾಮತಿಯವರ ಭಿತ್ತಿಪತ್ರಗಳನ್ನು ಕಂಡು ಆಕರ್ಷಿತರಾದರು. ಮುಂಬಯಿ ರೈಲ್ವೇ ಸಾರ್ವಜನಿಕ ಸಂಪರ್ಕಾಧಿಕಾರಿಯಿಂದ ಕಲಾವಿದನ ಬಗ್ಗೆ ವಿಚಾರಿಸಿ, ಆತ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆಂದು ತಿಳಿದು, ನಮ್ಮವರೆಂದು ಹೆಮ್ಮೆಪಟ್ಟರು. ವಿಳಾಸ ಹುಡುಕಿ, ಇನಾಮತಿಯವರನ್ನು 'ವಿಸಿಟ್ ಮೈಸೂರ್ ದಸರಾ' ಹೀಗೆ 2 ಭಿತ್ತಿಪತ್ರಗಳನ್ನು ಸಿದ್ಧಪಡಿಸಲು ವಿನಂತಿಸಿ

ದರು. ತಮ್ಮ ಪ್ರದೇಶಕ್ಕೆಂದು ಖುಷಿಗೊಂಡ ಇನಾಮತಿಯವರು ಬೃಹತ್ ಭಿತ್ತಿಪತ್ರಗಳನ್ನು (4x7 ಅಡಿಗಳು) ಸಿದ್ಧಪಡಿಸಿದರು. ಮೈಸೂರು ಬೃಂದಾವನ ಉದ್ಯಾನವನದ ಹಿನ್ನೆಲೆಯಲ್ಲಿ ವರ್ಣಮಯಿವಾಗಿ ಭಿತ್ತಿಪತ್ರಗಳು ಸಂಯೋಜಿಸಲ್ಪಟ್ಟಿದ್ದುವು. ಆದರೆ ಹಿತ್ತಲಗಿಡ ಮದ್ದಲ್ಲ! ನಮ್ಮ ಅಧಿಕಾರಿಗಳೇ ಹಾಗೆ. ನಮ್ಮವರೆಂದರೆ ಅನಾದರ. ಅವರು ಇನಾಮತಿಯವರಿಗೆ ಸಂಭಾವನೆಯಾಗಿ ಕೊಡಲು ಬಂದ ಹಣ ಕೇವಲ 50 ರೂಪಾಯಿಗಳು! ಆದರೆ ಮುಂಬಯಿಯಲ್ಲಿ ಸಾಮಾನ್ಯ ಭಿತ್ತಿಪತ್ರಗಳಿಗೆ ಇನಾಮತಿಯವರಿಗೆ ಎರಡು ನೂರಾ ಐವತ್ತು ರೂಪಾಯಿಗಳನ್ನು ಕೊಡುತ್ತಿದ್ದರು. ಬೇಸರಗೊಂಡ ಇನಾಮತಿ ತಮ್ಮ ಸ್ನೇಹಿತರ ಸಲಹೆಯಂತೆ ಆ ಭಿತ್ತಿಪತ್ರಗಳನ್ನು ರೈಲ್ವೇ ಅಧಿಕಾರಿಗಳಿಗೆ ಕೊಡಲು ನಿರಾಕರಿಸಿದರು!

ಕಲೆಯ ಕುರಿತ ಲೇಖನಗಳನ್ನು ಇನಾಮತಿಯವರು ಇಂಗ್ಲಿಷಿನಲ್ಲಿ ಬರೆಯುತ್ತಿದ್ದರಲ್ಲದೆ, ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ರಾಜ್ಯದ ಚಿತ್ರಕಲಾವಿದರ ಮಹಾಪರಿಷತ್ತಿನ ಕಾಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇನಾಮತಿಯವರು ಜಲವರ್ಣದಲ್ಲಿ ನಿಸರ್ಗ ಚಿತ್ರಗಳನ್ನೂ, ಸಂಯೋಜನೆಗಳನ್ನೂ ರಚಿಸಿ ಜನಪ್ರಿಯರಾಗಿದ್ದರು. ಅವರ ಹಲವಾರು ಕೃತಿಗಳು ಮೈಸೂರಿನ ಜಗನ್ಮೋಹನ ಶಾಲೆಯ ಸಂಗ್ರಹದಲ್ಲಿದ್ದು, ಕೆಟ್ಟದ್ದಾಗಿ ಪ್ರದರ್ಶಿಸಲ್ಪಟ್ಟಿದ್ದುವು. 1948–49ರ ಅವಧಿಯಲ್ಲಿ ಆ ಗ್ಯಾಲರಿಯನ್ನು ಸುವ್ಯವಸ್ಥೆಗೊಳಿಸಿದ ಜೇಮ್ಸ್ ಕಸಿನ್ಸ್ ಇನಾಮತಿಯವರ ಕೃತಿಗಳನ್ನು ಆಯ್ದು ಒಂದೇ ಗೋಡೆಯಲ್ಲಿ ಪ್ರದರ್ಶಿಸುವ ವ್ಯವಸ್ಥೆ ಮಾಡಿದರು. ಇನಾಮತಿಯವರ 'ರಾಧಾಕೃಷ್ಣ' ಕೃತಿಯನ್ನು ಖಾಲಿ ಚೆಕ್ ಕೊಟ್ಟು, ಚಿಕ್ಕಪೇಟೆಯ ಸೀತಾಲಕ್ಷ್ಮಿಹಾಲ್‌ನ ಮಾಲೀಕರು ಕೊಂಡದ್ದೂ ಉಂಟು. ಆ ಕೃತಿ ವೇವೆಲ್‌ರವರು ನಮ್ಮ ದೇಶದ ವೈಸ್‌ರಾಯ್ ಆಗಿದ್ದಾಗ ದೆಹಲಿಯಲ್ಲಿ 1946ರಲ್ಲಿ ವ್ಯವಸ್ಥೆಯಾಗಿದ್ದ 'ಇಂಡಿಯನ್ ಎಂಪೈರ್ ಕಲಾಪ್ರದರ್ಶನ'ದಲ್ಲಿಯೂ ಪ್ರದರ್ಶಿತವಾಗಿತ್ತು. ಅಲ್ಲಿ ಮಾರಾಟವಾಗಿ ತಮಗೆ ದಕ್ಕದೆ ಹೋಗಬಹುದೆಂಬ ಕಾರಣದಿಂದ ಆ ರೀತಿ ಕೊಳ್ಳಲಾಗಿತ್ತು. ಆ ನಂತರ ರುಮಾಲೆಯವರು ಕೆಂಗಲ್ ಹನುಮಂತಯ್ಯನವರಿಗೆ ಇನಾಮತಿಯವರ ಬಗ್ಗೆ ತಿಳಿಸಿ ಕೆಲವು ಕೃತಿಗಳನ್ನು ಕೊಳ್ಳುವ ವ್ಯವಸ್ಥೆ ಮಾಡಿದರು. ಆ ಕೃತಿಗಳನ್ನು ಆ ದಿನಗಳಲ್ಲಿ ಆಗಮಿಸಿದ್ದ ವಿದೇಶೀ ಗಣ್ಯ ಅತಿಥಿಗಳಿಗೆ ಕೊಡಲು ಹನುಮಂತಯ್ಯನವರು ಬಳಸಿರಬೇಕು.

ಬೆಂಗಳೂರಿನ ನಿವೃತ್ತ ಹಿರಿಯ ಪತ್ರಕರ್ತ ಬಿ. ಶ್ರೀನಿವಾಸಮೂರ್ತಿಯವರ ಹಾಗೂ ಇನ್ನಿತರ ಗಣ್ಯರ ಸಂಗ್ರಹಗಳಲ್ಲಿ ಇನಾಮತಿಯವರ ಕೃತಿಗಳಿವೆ. ಇವುಗಳಲ್ಲಿ 1940ರಲ್ಲಿ ಚಿತ್ರಿಸಿದ 'ಬಾಂದ್ರಾ ಪೂರ್ವ' ಜಲವರ್ಣದ ವಾಷ್ ತಂತ್ರದ ಕೃತಿ ಸರಳ–ಸುಂದರ. ಹಾಗೆಯೇ ಮೈಸೂರಿನ ಜಗನ್ಮೋಹನ ಗ್ಯಾಲರಿಯ ಜಲವರ್ಣದ, ನೈಜ್ಯಶೈಲಿಯ ಭಿಕ್ಷುಕರ ಕೃತಿ, ಕೃಷ್ಣ–ಗೋಪಿಕೆಯರ ಅಲಂಕರಣ ಶೈಲಿಗೆ ಹತ್ತಿರವಾಗಿರುವ ಕೃತಿ, ಉದ್ಯಾನವೊಂದರಲ್ಲಿ ವಿಶ್ರಮಿಸಿಕೊಳ್ಳುತ್ತಿರುವ ಜಲವರ್ಣದ ಭೂ ದೃಶ್ಯದ ಕೃತಿ ಮೊದಲಾದವು ಇವೆ. ಇವೆಲ್ಲಾ ಸಾಮಾನ್ಯ ಕೃತಿಗಳು ಎನ್ನಿಸುತ್ತವೆಯಾದರೂ, ಇವರ ಉತ್ತಮ ಕೃತಿಗಳು ದೇಶವಿದೇಶಗಳ ಹಲವಾರು ಸಂಗ್ರಹಗಳಲ್ಲಿ ಹಂಚಿಹೋಗಿವೆ. 1930ರಲ್ಲಿ ಲಂಡನ್ನಿನಲ್ಲಿ ನಡೆದ ಕಲಾಪ್ರದರ್ಶನವೊಂದರಲ್ಲಿ ಅವರ 'ನ್ಯಾಯ' ಶೀರ್ಷಿಕೆಯ ಕೃತಿ ವಿಮರ್ಶಕರ ಪ್ರಶಂಸೆಗೆ ಪಾತ್ರವಾಯಿತು. ಇವರ ಕೃತಿಗಳಲ್ಲಿ ವರ್ಣಗಳ ಸ್ವಾಭಾವಿಕತೆ, ಸ್ವಚ್ಛತೆ ಎದ್ದು ಕಾಣುವ ಅಂಶಗಳಾಗಿವೆ.

1950ರ ನಂತರ ಆಧ್ಯಾತ್ಮದ ಕಡೆ ಗಮನ ಹರಿಸಿದ ಇನಾಮತಿಯವರು, ಸತ್ಸಂಗಗಳ ಸಹವಾಸ ಮಾಡುತ್ತಿದ್ದರು. ಒಮ್ಮೆ ಕಾಶ್ಮೀರದ ಆಶ್ರಮವೊಂದರಲ್ಲಿ ಸ್ವಲ್ಪ ಕಾಲ ಇದ್ದು ಬಂದ ಅವರು 1986 ಆಗಸ್ಟ್ 5ರಂದು ನಿಧನರಾದರು. ಮುಂಬಯಿಯ 'ಇಲಸ್ಟ್ರೇಟೆಡ್ ವೀಕ್ಲಿ', 'ಟೈಂಸ್ ಆಫ್ ಇಂಡಿಯಾ'ಗಳಲ್ಲಿ ಸ್ವಲ್ಪ ಕಾಲ ಕಲಾವಿದರಾಗಿ ದುಡಿದಿದ್ದ ಇನಾಮತಿಯವರು ಉತ್ತಮ ಕಲಾಶಿಕ್ಷಕರಾಗಿದ್ದು, ಸೈಕಲ್ ತುಳಿದುಕೊಂಡೇ ಬೆಂಗಳೂರಿನ ಆಚಾರ್ಯ ಪಾಠಶಾಲಾ, ಬೆಂಗಳೂರು ಹೈಸ್ಕೂಲ್ ಮತ್ತು ನ್ಯಾಷನಲ್ ಕಾಲೇಜುಗಳಿಗೆ ಹೋಗಿ ಕಲಾಭ್ಯಾಸ ಮಾಡಿಸುತ್ತಿದ್ದರು. ಸಮಕಾಲೀನ ಕಲಾವಿದರಿಂದ 'ಜೀನಿಯಸ್' ಎಂದೆನ್ನಿಸಿಕೊಂಡಿದ್ದ ಇನಾಮತಿಯವರನ್ನು ಬೆಂಗಳೂರಿನ ಜ್ಞಾನ ಜ್ಯೋತಿ ಕಲಾ ಸಂಘ 1968–69ರಲ್ಲಿ ಸನ್ಮಾನಿಸಿತು. ರಾಜ್ಯ ಲಲಿತಕಲಾ ಅಕಾಡೆಮಿ 1973ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿತು.


ಕೆ. ವಿ. ಸುಬ್ರಹ್ಮಣ್ಯ

ಎಚ್.ಎಸ್. ಇನಾಮತಿ



ಪ್ರಕೃತಿ ಚಿತ್ರ

ಎಸ್. ಕಾಳಪ್ಪ



ಮೈಸೂರಿನ ಕಲಾವಿದ ಕಾಳಪ್ಪನವರದು ಒಂದು ವರ್ಣಮಯ ಜೀವನ. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಹೋರಾಟದ ಬದುಕು. ಕಷ್ಟದ ದಿನಗಳಲ್ಲಿ ಜೀವನಾಭರಣಕ್ಕಾಗಿ ಕಲಾಕ್ಷೇತ್ರದ ವಿವಿಧ ಪ್ರಕಾರಗಳನ್ನು ಉಪಯೋಗಿಸಿದ್ದಾರೆ. ಲಲಿತಕಲೆಗಳನ್ನು ಅಭ್ಯಾಸ ಮಾಡಿದ್ದರೂ "ವಾಣಿಜ್ಯ ಕಲೆ, ಸಿನಿಮೀಯ ಕಲೆ, ನಾಮಫಲಕ, ಪುಸ್ತಕಗಳ ಮುಖಪುಟ ಹೀಗೆ ಹಲವಾರು ಶಾಖೆಗಳನ್ನು ಕರಗತ ಮಾಡಿಕೊಂಡರು. ಆದರೆ ಕಲಿತುದುದನ್ನು ಆಸಕ್ತರಿಗೆ ಕಲಿಸುವುದರಲ್ಲಿಯೂ ಉತ್ಸಾಹಿ. ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆಯ ಒಂದು ಕಟ್ಟಡದಲ್ಲೂ, ಅನಂತರ ತಮ್ಮ ನಿವಾಸದಲ್ಲೂ ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಬೋಧಿಸಿದರು. ಉಪಾಧ್ಯಯ, ವಿದ್ಯಾರ್ಥಿ ಎಂಬ ತಾರತಮ್ಯವಿಲ್ಲದ ನಡತೆ ಕಾಳಪ್ಪನವರದು. ಬಡವಿದ್ಯಾರ್ಥಿಗಳ ಬಗೆಗೆ ಕನಿಕರ. ಅವರ ನಿವಾಸವು ಈಗಲೂ ಒಂದು ಶಾಲೆಯಂತೇ ಇದೆ. ಮನೆಯ ಗೋಡೆಗಳನ್ನು ನಾನಾ ರೀತಿಯ, ನಾನಾ ಶೈಲಿಯ ಚಿತ್ರಗಳು ಅಲಂಕರಿಸಿವೆ. ಅವರು ನಿಷ್ಠಾವಂತ ಕಲಾಕಾರ. ಸತ್ಯಶುದ್ಧಬಿಂಬ ಚಿತ್ರ ರಚನೆಯಲ್ಲಿ ಪರಿಣತರು. ಪ್ರತಿಬಿಂಬವನ್ನು ಮೂಲದಷ್ಟೇ ಸತ್ಯಶುದ್ಧವಾಗಿ ರಚಿಸಬಲ್ಲರು. ಅನೇಕ ವರ್ಷಗಳ ಕಾಲ ದೊಡ್ಡ ಸಂಸ್ಥೆಯನ್ನು ನಡೆಸಿದ್ದರೂ, ನೂರಾರು ಶಿಷ್ಯರನ್ನು ತಯಾರು ಮಾಡಿದ್ದರೂ, ಅನೇಕ ಸನ್ಮಾನಗಳನ್ನು ಪಡೆದಿದ್ದರೂ ನಿಗರ್ವಿಯಾದ ಸ್ನೇಹಪರ ವ್ಯಕ್ತಿ ಕಾಳಪ್ಪನವರು. ನವ್ಯಕಲೆಯ ಬಗ್ಗೆ ಹೆಚ್ಚಿನ ಆಸಕ್ತರಲ್ಲ. ಭವ್ಯಕಲೆಗಾಗಿ ಶ್ರದ್ಧೆಯಿದೆ. ವ್ಯಕ್ತಿ ಚಿತ್ರ, ಪ್ರಕೃತಿ ಚಿತ್ರ, ರೇಖಾಚಿತ್ರ, ನಾಮಫಲಕ, ಪುಸ್ತಕಗಳ ರಕ್ಷಾಪುಟ, ವ್ಯಾಪಾರಿ ಚಿತ್ರಗಳು ಎಲ್ಲದರಲ್ಲೂ ಕೌಶಲ್ಯವಿದೆ ಇವರಿಗೆ.

ಜಲ, ತೈಲ ಯಾವುದೇ ಮಾಧ್ಯಮವಾಗಿರಲಿ, ಕರಗತ ಮಾಡಿಕೊಳ್ಳುವ ಸಾಹಸ ಪ್ರವೃತ್ತಿ. ಕಾಳಪ್ಪನವರು ಶ್ರೀಮಂತರಲ್ಲದಿದ್ದರೂ ಅವರ ಶ್ರೀಮಂತಿಕೆ ಇರುವುದು ಕಲೆಯಲ್ಲಿ.

1924ರಲ್ಲಿ ಮೈಸೂರಿನಲ್ಲಿ ಜನಿಸಿದ ಇವರು ತಮ್ಮ 12ನೇ ವಯಸ್ಸಿಗೆ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟನ್ನು ಸೇರಿದರು. ಎಸ್.ಜಿ. ಟಂಕಸಾಲೆ, ಕೆ.ಕೇಶವಯ್ಯ, ಎಸ್.ಎನ್. ಸ್ವಾಮಿ, ವೈ. ಸುಬ್ರಮಣ್ಯ ರಾಜು ಇವರುಗಳಿಂದ ಶಿಕ್ಷಣ ಹಾಗೂ ಮಾರ್ಗದರ್ಶನ ಪಡೆದರು. "ಪ್ರತಿಭಾ ವಿದ್ಯಾರ್ಥಿ ವೇತನ"ವನ್ನೂ ಪಡೆದರು.

1943–45ರ ತನಕ ಬೆಂಗಳೂರು, ಮೈಸೂರು ನಗರಗಳಲ್ಲಿ ಅವರೇ ಸ್ಥಾಪಿಸಿದ "ಸಿನಿ ಆರ್ಟ್ಸ್ ಅಂಡ್ ಪಬ್ಲಿಸಿಟಿ" ಎಂಬ ಹೆಸರಿನ ಸಂಸ್ಥೆಯಲ್ಲಿ ದುಡಿದರು. ಅನಂತರ ಏಳು ವರ್ಷಗಳ ಕಾಲ ದಕ್ಷಿಣ ಭಾರತದಲ್ಲೇ ಪ್ರಸಿದ್ಧಿ ಹೊಂದಿದ 'ನವಜ್ಯೋತಿ ಸ್ಟುಡಿಯೋ'ದಲ್ಲಿ ಕಲಾ ದಿಗ್ದರ್ಶಕರಾದರು. ಇತರ ರಾಜ್ಯಗಳ ಕಲಾವಿದರೊಡನೆ ಸ್ಟುಡಿಯೋ ಸೆಟ್ ನಿರ್ಮಾಣ ಮಾಡಿದರು.

1950ರಲ್ಲಿ ಪ್ರಥಮ ಗಣರಾಜ್ಯೋತ್ಸವಕ್ಕಾಗಿ ದೆಹಲಿಯಲ್ಲಿ ನಡೆದ ಮೆರವಣಿಗೆಗೆ 'ಮಹಿಷಾಸುರ ಮರ್ದಿನಿ' ಸ್ತಬ್ಧ ಚಿತ್ರವನ್ನೂ, 1952ರಲ್ಲಿ ಗುಬ್ಬಿ ನಾಟಕ ಕಂಪನಿಯ ವಜ್ರ ಮಹೋತ್ಸವಕ್ಕೆ 'ರಷ್ಯನ್ ಬ್ಯಾಲೆ', ಚೆಕ್‌ಮೇಟ್, (ಲಂಡನ್) ಜಾವಾ ಮತ್ತು

ಜಪಾನ್ ನೃತ್ಯಕಲೆಯ ಎರಡು ಘಟಕಗಳಿಗೆ ಭಾವಚಿತ್ರ ಮತ್ತು ಸಂಯೋಗ ಚಿತ್ರ. ರಚಿಸಿದರು.

1954ರಲ್ಲಿ ಜೀವನದಲ್ಲಿ ಹೊಸ ತಿರುವು. ವಾಣಿಜ್ಯ ಕಲೆಯಿಂದ ವಿದ್ಯಾದಾನಕ್ಕಾಗಿ ನಿಶ್ಚಯ. ಮೈಸೂರಿನಲ್ಲಿ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಹೆಸರಿನ ಸಂಸ್ಥೆಯ ಸ್ಥಾಪನೆ. 1960ರಲ್ಲಿ ಸರ್ಕಾರಿ ಮಾನ್ಯತೆ. ಇಲ್ಲಿಂದ ನೂರಾರು ವಿದ್ಯಾರ್ಥಿಗಳಿಗೆ ಚಿತ್ರ ಕಲಾಭ್ಯಾಸದ ಅನುಕೂಲಗಳು. ಈ ಶಾಲೆಯ ಕಡೆಯಿಂದ 'ಆರ್ಟ್ ಮಾಸ್ಟರ್' ಪರೀಕ್ಷೆಗಳಿಗೂ ತರಬೇತಿಯನ್ನು ಅನೇಕರು ಪಡೆದರು.

ಶ್ರೀ ಕಾಳಪ್ಪನವರು ಸಾರ್ವಜನಿಕ ಸಂಘ–ಸಂಸ್ಥೆಗಳಲ್ಲೂ ದುಡಿದವರು.

1969–75ರ ತನಕ ಕರ್ನಾಟಕ ಲಲಿತಕಲಾ ಅಕಾಡೆಮಿಯ ಜನರಲ್ ಕೌನ್ಸಿಲ್ ಮತ್ತು ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿ, ಅದರ ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸಲು 1972–78ರಲ್ಲಿ ಲಲಿತಕಲಾ ಅಕಾಡೆಮಿಯ ನೆರವಿನಿಂದ ಶ್ರವಣ ಬೆಳಗೊಳದ ಜೈನ ಬಸದಿಯ ಭಿತ್ತಿಚಿತ್ರದ ಪುನರ‍್ರಚನೆ. ಕೆಲವು ಕಾಲ ಮೈಸೂರಿನ ಚಿತ್ರ ಕಲಾಸಂಘ(ರಿ.)ದ ಕೋಶಾಧ್ಯಕ್ಷರು.

1976ರಲ್ಲಿ ಲಲಿತಕಲಾ ಅಕಾಡೆಮಿಯಿಂದ ಶ್ರೀರಂಗಪಟ್ಟಣದಲ್ಲಿ ನಡೆದ ಚಿತ್ರ ಕಲಾವಿದರ ಶಿಬಿರದಲ್ಲಿ ಭಾಗವಹಿಸಿದ್ದಾರೆ.

1977ರಲ್ಲಿ ಬೆಂಗಳೂರು ಚಿತ್ರಕಲಾ ಪರಿಷತ್ತಿನಿಂದ ನಡೆದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ..

1977–78, 78–79, ಕಲೆ ಮತ್ತು ಕರಕುಶಲ ಮಂಡಳಿಯ ಕಾರ್ಯನಿರ್ವಾಹಕ ಸದಸ್ಯ.

1981ರಿಂದ ಮೈಸೂರಿನ ಶ್ರೀ ವಾಣಿ ವಿದ್ಯಾಮಂದಿರದ ವಿದ್ಯಾಸಂಸ್ಥೆಯ ಅಧ್ಯಕ್ಷರು.

ಹಿರಿಯ ಕಲಾವಿದ ಕಾಳಪ್ಪನವರು ಅನೇಕ ಕಲಾ ಪ್ರದರ್ಶನಗಳಲ್ಲಿ ಸ್ವಂತವಾಗಿಯೂ, ಸಾಮೂಹಿಕವಾಗಿಯೂ ಪಾಲುಗೊಂಡಿದ್ದಾರೆ.

1973ರಲ್ಲಿ ಮೈಸೂರು ಚಿತ್ರ ಕಲಾಸಂಘದ ಆಶ್ರಯದಲ್ಲಿ ನಡೆದ ಸಾಮೂಹಿಕ ಕಲಾ ಪ್ರದರ್ಶನದಿಂದ ಪ್ರಾರಂಭವಾಗಿ ಅನೇಕ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಇವರ ಸತತ ಕಲಾಸೇವೆಯನ್ನು ಮನ್ನಿಸಿ ಅನೇಕ ಸನ್ಮಾನಗಳು ದೊರೆತಿವೆ. ಅದರಲ್ಲಿ ಮುಖ್ಯವಾದವು :

1985ರಲ್ಲಿ 'ಅಖಿಲಭಾರತ ಫೈನ್ ಆರ್ಟ್ಸ್ ಅಂಡ್ ಕ್ರಾಫ್ಟ್ ಸೊಸೈಟಿ' ನವದೆಹಲಿಯಿಂದ ಸನ್ಮಾನ.

1987, 1986–87ನೇ ಸಾಲಿನ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿ.

ಇವರ ಕೃತಿಗಳು ಮೈಸೂರಿನ 'ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿ', ಬೆಂಗಳೂರಿನ ಸರ್ಕಾರಿ ಸಂಗ್ರಹಾಲಯ, ಪ್ಯಾರಿಸ್‌ನ ಮಿಸ್. ಮೇರಿ ಕ್ಯಾನಿಸ್ ಟ್ಯಾಲಿನೆಕ್ ಹಾಗೂ ನೈಜೀರಿಯಾ ಮತ್ತು ರಷ್ಯಾದ ಕೆಲವು ಗಣ್ಯರಲ್ಲಿ ಸಂಗ್ರಹವಾಗಿವೆ.

ಇಷ್ಟೆಲ್ಲ ಸಾಧನೆಯಿದ್ದರೂ ಕಾಳಪ್ಪನವರು ನಿರಾಡಂಬರ ವ್ಯಕ್ತಿ.


ಎಚ್. ಎಸ್. ಘಾಟಕ್

ಎಸ್. ಕಾಳಪ್ಪ



ಅರಳಿ ಮರ – ಗಂಗೋತ್ರಿ

ಎಸ್. ಎಸ್. ಕುಕ್ಕೆ



ಸುಂದರ ಪ್ರಕೃತಿಯ ಶಿವಮೊಗ್ಗಾ ಶಾಲೆಯಲ್ಲಿ ಬಾಲಕನೊಬ್ಬ ಪಾಠ ಮರೆತು ರೇಖೆಗಳಲ್ಲಿ ತನಗೆ ಸುಂದರವೆನಿಸಿದವನ್ನು ಸೆರೆ ಹಿಡಿಯಲು ಪ್ರಯತ್ನಿಸುತ್ತಿದ್ದಾನೆ. ಕಾಲ ಕಳೆದು ರಾಜ ರವಿ ವರ್ಮನ ಚಿತ್ರಗಳನ್ನು ನಕಲು ಮಾಡಲಾರಂಭಿಸಿದ. ಇದು ಡ್ರಾಯಿಂಗ್ ಶಿಕ್ಷಕರೊಬ್ಬರ ಗಮನ ಸೆಳೆಯಿತು. ಅಪನನ್ನು ಕ್ರಮವಾಗಿ ತರಬೇತು ಮಾಡಲಾರಂಭಿಸಿದರು. ಅವರಿಂದ ಒಂದು ವರ್ಷಕಾಲ ಚಿತ್ರಕಲಾಭ್ಯಾಸ ಮಾಡಿದ ನಂತರ ಈ ಬಾಲಕ ಮದರಾಸು ಸರ್ಕಾರಿ ಪ್ರಥಮ ಕಲಾ ಪರೀಕ್ಷೆಗೆ ಕುಳಿತು ಪ್ರಥಮ ಶ್ರೇಣಿಯಲ್ಲಿಯೇ ಉತ್ತೀರ್ಣನಾದ. ಅನಂತರದ ತನ್ನ ಬೆಳವಣಿಗೆಯಿಂದ ಚಿತ್ರಕಲಾ ಗುರುವಿಗೆ ಸಂತೋಷ ಉಂಟು ಮಾಡಿದ ಈ ಕಲಾವಿದನೇ ಇಂದು 'ಕುಕ್ಕೆ' ಎಂದೇ ಖ್ಯಾತರಾದ ಎಸ್.ಎಸ್.ಕುಕ್ಕೆ. ವರ ಕವಿ ದಿ.ದ.ರಾ.ಬೇಂದ್ರೆಯವರಿಂದ "ಒಳ್ಳೆಯ ಕಲಾವಂತ, ಪೌರಾಣಿಕ ಚಿತ್ರ ಬರೆಯುವುದರಲ್ಲಿ ಎತ್ತಿದ ಕೈ" ಎಂಬ ಹೊಗಳಿಕೆಗೆ ಪಾತ್ರರಾದ ಕುಕ್ಕೆಯವರು— ಸಂಸ್ಕಾರ, ಪಾಂಡಿತ್ಯ ಪ್ರತಿಭೆಗೆ ಹೆಸರಾದ ಪಂಡಿತರತ್ನ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಯವರ ಮಗ. ಸಹಜವಾಗಿಯೇ ಕುಕ್ಕೆಯವರಲ್ಲಿ ಬಾಲ್ಯದಿಂದಲೂ ಕಲಾತ್ಮಕ ಅಭಿವ್ಯಕ್ತಿ ಗಣನೀಯವಾಗಿ ಬೆಳವಣಿಗೆಯಾದುದನ್ನು ಗಮನಿಸಬಹುದು. 1918ರಲ್ಲಿ ಜನಿಸಿದ ಕುಕ್ಕೆ ತಮ್ಮ ಪ್ರತಿಭೆಯಿಂದ 9ರ ಬಾಲ್ಯದಲ್ಲಿಯೇ ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತಿ ಸ್ವಾಮಿಗಳ ಗಮನ ಸೆಳೆವರು.

1933ರಲ್ಲಿ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯನ್ನು ಸೇರಿ, ಐದು ವರ್ಷಗಳ ಲಲಿತ ಕಲೆಗಳ ಜಿ.ಡಿ. ವ್ಯಾಸಂಗವನ್ನು ಎರಡೇ ವರ್ಷಗಳಲ್ಲಿ ಸಾಧಿಸಿದರು. ಪೂರ್ಣ ಶ್ರದ್ಧೆಯಿಂದ ಕಲೆಯ ತಂತ್ರ ಹಾಗೂ ವಿಧಾನಗಳನ್ನು ಈ ಅವಧಿಯಲ್ಲಿ ಕಲಿತ ಕುಕ್ಕೆ ಅಂದಿನ ಖ್ಯಾತ ಕಲಾಶಿಕ್ಷಕರಾಗಿದ್ದ ದಿ. ಪಾವಂಜೆ, ಟಂಕಸಾಲೆ, ಕೇಶವಯ್ಯ, ಎಸ್. ರಾಮಕೃಷ್ಣರಾಯರು ಮೊದಲಾದವರಲ್ಲಿ ಕಲಿಯುವ ಅದೃಷ್ಟ ಪಡೆದಿದ್ದರು. ಆದರೆ ನಂತರ ಅವರ ಬದುಕಿನಲ್ಲಿ ಒಂದು ಬದಲಾವಣೆಯನ್ನು ನಾವು ಕಾಣುತ್ತೇವೆ. ಶಿವಮೊಗ್ಗೆಯ ಸರ್ಕಸ್ ಪ್ರದರ್ಶನವೊಂದನ್ನು ಕಂಡ ಕುಕ್ಕೆಯವರು ತಮ್ಮ ಈ ಹಿಂದಿನ ಧಾರ್ಮಿಕ, ಕಲಾತ್ಮಕ ಚಿಂತನೆಗಳಿಂದ ವಿಮುಖರಾಗಿ, ದೈಹಿಕ ಸಂಪತ್ತಿನ ಬೆಳವಣಿಗೆಗೆ ಗಮನಹರಿಸಿ, ವ್ಯಾಯಾಮ ಹಾಗೂ ಹಲವಾರು ಕ್ರೀಡೆಗಳ ಅಭ್ಯಾಸದಲ್ಲಿ ತೊಡಗಿ, ಅಗಾಧ ದೈಹಿಕ ಶಕ್ತಿ ಗಳಿಸಿದರು. ದೈಹಿಕ ಶಕ್ತಿಯ ಚಮತ್ಕಾರಯುತ ಸಾರ್ವಜನಿಕ ಪ್ರದರ್ಶನಗಳನ್ನೂ ನೀಡುತ್ತಿದ್ದುದು ರೋಮಾಂಚಕಾರಿ ವ್ಯಾಯಾಮದ ಶಾಲೆಯೊಂದನ್ನೂ ನಡೆಸಿದರು.

ತಂದೆಯವರ ನಿಧನದ ನಂತರ ಬದಲಾದ ಕುಕ್ಕೆಯವರ ಬಾಳಚಕ್ರ ಸಂಸಾರ ಬಂಧನದಲ್ಲಿ ಸಿಲುಕಿ ಬೆಂಗಳೂರಿಗೆ ಚಲಿಸಿ, ಸ್ಥಿರವಾಯಿತು. ಬೆಂಗಳೂರಿನಲ್ಲಿ ನೆಲೆಸಿದ ಕೂಡಲೇ ಜೀವನ ದುಗುಡ ಮರೆಯಲು ಪುನಃ ಮನಸ್ಸು ಚಿತ್ರಕಲೆ ಭರಿಸಲು ಚಿಕ್ಕಪೇಟೆಯ ಒಂದು ಸುಂದರ ಸೌಧದ ಮಹಡಿಯ 'ಶ್ರೀ ಕುಕ್ಕೆ ಆರ್ಟ್ ಅಂಡ್ ಫೋಟೋ ಸ್ಟುಡಿಯೋ' ಎಂಬ ನಾಮಫಲಕ ಹೊತ್ತ ಇವರ ಕಲಾಗಾರ ಸುಮಾರು 25 ವರ್ಷ ಕಲಾಸೃಷ್ಟಿಯ

ಜೊತೆಜೊತೆಗೇ ಅಭ್ಯಾಸಿಗಳ ಗುರುಕುಲವಾಗಿ, ಬಗೆ ಬಗೆಯ ಕಲಾವಿದರ ಮೇಳವಾಗಿ ಬೆಳಗಿತು. ಅಷ್ಟು ಹೊತ್ತಿಗಾಗಲೇ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಖ್ಯಾತ ಕಟ್ಟಡ ಶಿಲ್ಪಿ ಯು.ಜಿ. ಎಕ್ಸ್‌ಹೆನೆರ್‌ರವರ ಬಳಿ ಕಲಾವಿದರಾಗಿ ಕೆಲಸ ಮಾಡಿದ ಅನುಭವವಿತ್ತಲ್ಲದೆ, ರಾಜಾಸ್ತಾನದ ಬನಸ್ಥಲಿ ವಿದ್ಯಾಪೀಠದಲ್ಲಿ ಭಿತ್ತಿಚಿತ್ರ ರಚನಾ ತರಬೇತಿಯನ್ನೂ ಪಡೆದರು. ನಂತರ ಮೈಸೂರು ಪ್ರದೇಶ ಚಿತ್ರಕಲಾ ವಿದ್ಯಾಲಯ (ಇಂದಿನ ಚಿತ್ರಕಲಾ ಪರಿಷತ್ತು) ಹಾಗೂ ಕಲಾಮಂದಿರಗಳಲ್ಲಿ ಕಲಾ ಶಿಕ್ಷಕರಾಗಿದ್ದರು. ಚಲನಚಿತ್ರಗಳಾದ 'ಮಹಾಕವಿ ಕಾಳಿದಾಸ' ಮತ್ತು 'ಕೈವಾರ ಮಹಾತ್ಮೆ'ಗಳಿಗೆ ಕಲಾನಿರ್ದೇಶಕರಾಗಿಯೂ ದುಡಿದಿದ್ದಾರೆ.

ಚಿತ್ರಕಲೆಯ ಎಲ್ಲ ಪ್ರಕಾರಗಳನ್ನೂ ಬಲ್ಲ ಕುಕ್ಕೆಯವರು ವ್ಯಕ್ತಿ ಚಿತ್ರಣದಲ್ಲಿ ಅದ್ವಿತೀಯರು. ಇವರು ರಚಿಸಿರುವ ಗಾಂಧಿ, ನೆಹರು ಹಾಗೂ ಭಾರತದ ಮಹಾನ್ ಪುರುಷರ ವ್ಯಕ್ತಿಚಿತ್ರಗಳು ಆಕರ್ಷಕ ಜೀವಂತಿಕೆಯಿಂದ ಕೂಡಿವೆ. ಇವರ ಸಂಯೋಗ ಚಿತ್ರಗಳೂ ಜನಪ್ರಿಯವಾಗಿವೆ. ಪುರಾಣ ಕಾವ್ಯಕ್ಕೆ ಅನುಸರಿಸಿ ರಚಿಸಿರುವ ನೂರಾರು ಚಿತ್ರಗಳು ಇಂದಿಗೂ ಜನಮನವನ್ನು ತಣಿಸುತ್ತಿವೆ. ತೈಲ ಹಾಗೂ ಜಲವರ್ಣಗಳೆರಡರ ಮಾಧ್ಯಮದಲ್ಲೂ ಸಿದ್ಧಿ ಪಡೆದಿದ್ದಾರೆ. 1946ರಲ್ಲಿ ದಸರಾ ಕಲಾ ಪ್ರದರ್ಶನದಲ್ಲಿ ಅತ್ಯುತ್ತಮ ಬಹುಮಾನ ಪಡೆದ 'ಬರ್ನಿಂಗ್ ದಿ ಮಿಡ್‌ನೈಟ್ ಆಯಿಲ್' – ತೈಲ ವರ್ಣ ಕೃತಿ ಬಹುಜನರನ್ನು ಆಕರ್ಷಿಸಿ, ತನ್ನ ಮುಂದೆ ನಿಲ್ಲುವಂತೆ ಮಾಡಿಕೊಂಡ ಕೃತಿ. ವರ್ಣ ಹಾಗೂ ನೆರಳು ಬೆಳಕಿನ ಸುಂದರ ಸಂಯೋಜನೆ ಆ ಕಾಲಕ್ಕೆ ಉತ್ತಮವಾಗಿ ನಿರೂಪಿಸಲ್ಪಟ್ಟಿತ್ತು. ಜೊತೆಗೆ 'ನ್ಯೂಡ್ ನಟ್' ಕೃತಿಯೂ ಜನಪ್ರಿಯತೆ ಗಳಿಸಿತು. 1940ರಿಂದ ರಾಜ್ಯದ ಬಹುತೇಕ ಎಲ್ಲ ಪ್ರಮುಖ ಪ್ರದರ್ಶನಗಳಲ್ಲೂ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ. ಇವರ 'ಮೈ ಆಂಟ್', 'ಸೆಲ್ಫ್ ಪೋರ್ಟ್ರೈಟ್', 'ಬ್ರೋಕನ್ ಬ್ಯೂಟಿ', 'ರಾಜಾಸ್ತಾನ್ ಚೌಕೀದಾರ್', 'ಮೌಲ್ವಿ'– ಮೊದಲಾದ ಕೃತಿಗಳು ರಾಜ್ಯ, ರಾಷ್ಟ್ರಮಟ್ಟದ ಪ್ರದರ್ಶನಗಳಲ್ಲಿ ಬಹುಮಾನಿತವಾದ ಕೃತಿಗಳೇ ಆಗಿವೆ. ಇವರ ಕೃತಿಗಳಲ್ಲಿ ಅಪಾರ ಶ್ರಮದ ಕುಸುರಿಯ ಕೆಲಸ ಕಾಣಿಸುತ್ತದೆ. ಪಾದದಿಂದಲೂ ಚಿತ್ರಿಸಬಲ್ಲ ಕುಕ್ಕೆಯವರು ಬ್ಲೇಡು, ದಾರ ಇತ್ಯಾದಿಗಳಿಂದಲೂ ಚಿತ್ರಿಸಬಲ್ಲರು.

ಭಾರತೀಯ ಸಾಂಪ್ರದಾಯಿಕ ಕಲೆಯ ವಿಧೇಯ ಕಲಾವಿದರಾದ ಕುಕ್ಕೆ ಆತ್ಮಸಂತೋಷಕ್ಕಾಗಿ ಚಿತ್ರಿಸುತ್ತಾರೆ. ಕೃತಿಗಳಲ್ಲಿ ತಮ್ಮತನದ ಕಲ್ಪನೆಯನ್ನು ತುಂಬುತ್ತಾರೆ. ಪ್ರಸ್ತುತ ಬೆಂಗಳೂರಿನ ಜಯನಗರದಲ್ಲಿ ತಮ್ಮ ಸ್ವಂತ 'ಷಣ್ಮುಖ ಪ್ರಿಯ' ಆರ್ಟ್ ಗ್ಯಾಲರಿಯನ್ನು ಮನೆಯ ಮಹಡಿಯ ಮೇಲೆ ನಿರ್ಮಿಸಿಕೊಂಡಿದ್ದು ತಮ್ಮ ಸೃಷ್ಟಿಯ ಆಂತರಿಕ ಒಳನೋಟದ ಪರಿಚಯ ನೀಡುವಂಥ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ನೈಜಶೈಲಿಯ ಧಾರ್ಮಿಕ ವ್ಯಕ್ತಿಗಳ ಭಾವಚಿತ್ರಗಳಲ್ಲದೆ ಹಲವಾರು ರಾಷ್ಟ್ರನಾಯಕರ ಚಿತ್ರಗಳೂ, ಶಿಲ್ಪಗಳೂ ಇವೆ. ಪುರಾಣ ಹಾಗೂ ಕಾವ್ಯಗಳ ಕಲ್ಪನೆಗೆ ತಕ್ಕ ರೀತಿಯಲ್ಲಿ ಚಿತ್ರಿಸಿರುವ 'ಋಷ್ಯಶೃಂಗ', 'ಮಾಳವಿಕಾಗ್ನಿ ಮಿತ್ರ', 'ವಿಶ್ವಾಮಿತ್ರ ಮತ್ತು ಮೇನಕೆ', 'ಸ್ವಪ್ನವಾಸವದತ್ತ', 'ಮೇಘಸಂದೇಶ', 'ಕಾಮಧೇನು', 'ಕೃಷ್ಣ ಕುಚೇಲ', 'ವಿಶ್ವರೂಪ ದರ್ಶನ' ಇತ್ಯಾದಿ ಕೃತಿಗಳಲ್ಲಿ ಬಹುತೇಕ ಜಲವರ್ಣಗಳಲ್ಲಿ ಚಿತ್ರಿಸಿದ್ದಾರೆ. ಗೀತೋಪದೇಶ ತೈಲವರ್ಣ ಕೃತಿಯೂ ತನ್ನ ಆಕಾರದಿಂದ ಗಮನಾರ್ಹ. ಆಗುಂಬೆ, ಶೃಂಗೇರಿ, ಬೇಲೂರು, ಹಳೇಬೀಡುಗಳ ನೂರಾರು ಭೂ ದೃಶ್ಯಗಳು ಕಲಾವಿದನ ಸ್ವಂತ ಸಂಗ್ರಹದಲ್ಲಿವೆ.

ಇವರ ಕೃತಿಗಳು ಸಾಗರೋತ್ತರ ದೇಶಗಳಲ್ಲೂ ಜನಪ್ರಿಯವಾಗಿವೆ. ಬೆಂಗಳೂರಿನ ರಾಜಭವನ, ಕಾಸರಗೋಡಿನ ಪದ್ಮನಾಭಸ್ವಾಮಿ ದೇವಾಲಯ ಮೊದಲಾದೆಡೆಗಳಲ್ಲಿ ಇವರ ಕೃತಿಗಳ ಸಂಗ್ರಹವಿದೆ. 1973ರಲ್ಲಿ ಚಿತ್ರಕಲಾಪರಿಷತ್ತು ಸನ್ಮಾನಿಸಿದರೆ, 1981ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯೂ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನೂ ಕುಕ್ಕೆಯವರು ಪಡೆದಿದ್ದಾರೆ.

ಕೆ. ವಿ. ಸುಬ್ರಹ್ಮಣ್ಯ



ಶ್ರೀ ಲಲಿತಾ

ಕೃಷ್ಣ ಕ್ಷತ್ರಿ



ಸಂಸ್ಕಾರ ಸಾಧನೆಗಳ ಸಾಕಾರ ಕೃಷ್ಣಕ್ಷತ್ರಿ. ಚಿತ್ರಕಲಾ ಪ್ರಪಂಚಕ್ಕೆ ಉತ್ತರ ಕರ್ನಾಟಕದ ಇನ್ನೊಂದು ಕೊಡುಗೆ. ಹುಬ್ಬಳ್ಳಿ ಮಹಾನಗರ ಬೆಳೆದಂತೆ ಆದರೊಂದಿಗೆ ಬೆಳೆದ ಪ್ರಮುಖ ಕಲಾವಿದರ ಮನೆತನ ಕ್ಷತ್ರಿಯವರದು. ಕ್ಷತ್ರಿ ಮನೆತನದಲ್ಲಿ ತ್ರಿಮೂರ್ತಿಗಳೆಂದು ಹೆಸರಿಸಲ್ಪಡುವ ಸಹೋದರರ ಪೈಕಿ ಚಿತ್ರಕಾರನಾಗಿ ತನ್ನನ್ನು ಗುರುತಿಸಿಕೊಂಡವನು ಶ್ರೀ ಕೃಷ್ಣ ಕ್ಷತ್ರಿ, ಇನ್ನುಳಿದ ಸಹೋದರರು ಫೋಟೋಗ್ರಫಿ, ನಾಟಕ, ಮನೆತನದ ಕಸುಬು ನೇಕಾರಿಕೆಯಲ್ಲಿ ಹೆಚ್ಚು ಗಮನಹರಿಸಿ ಹೆಸರು ಪಡೆದಿದ್ದಾರೆ.

ಬಾಲ್ಯ – ವಿದ್ಯಾಬ್ಯಾಸ

ಹುಬ್ಬಳ್ಳಿಯ ಚಿತ್ರಕಲಾ ಪ್ರಪಂಚದ ಪ್ರಸಿದ್ಧ ವ್ಯಕ್ತಿ ಕೃಷ್ಣಕ್ಷತ್ರಿ 1921ರಲ್ಲಿ ಜನಿಸಿದರು. ತಾಯಿ ಯಲ್ಲುಬಾಯಿ, ತಂದೆ ಓಂಕಾರಸಾ. ಕೃಷ್ಣಕ್ಷತ್ರಿ ಉತ್ತಮ ಚಿತ್ರಕಲಾವಿದನಾಗಿ ಬೆಳೆಯಲು ಕುಟುಂಬದ ಸಾಂಸ್ಕೃತಿಕ ವಾತಾವರಣ ಮತ್ತು ವ್ಯೂಹ ಮುಖ್ಯ ಕಾರಣ. ಎಲ್ಲರೂ ಒಂದಲ್ಲ ಒಂದು ಕಲಾರಂಗಗಳಲ್ಲಿ ಪ್ರೌಢಿಮೆ ಗಳಿಸಿದವರಾಗಿದ್ದುದು, ಒತ್ತಾಸೆಯಾಗಿ ನಿಂತ ವರು ಅಣ್ಣಾ ಲಕ್ಷ್ಮಣಸಾಕ್ಷತ್ರಿ, ಮನೆತನದ ಕಸುಬಾದ ನೇಕಾರಿಕೆಯನ್ನು ಮಾಡುತ್ತ ಇವರಿಗೆ ವಿದ್ಯಾಭ್ಯಾಸಕ್ಕೂ ಅನುವು ಮಾಡಿಕೊಡುತ್ತಿದ್ದರು. ''ಕೃಷ್ಣ ಆಗ ಮೂರನೇ ಕ್ಲಾಸ್ ಓದುತ್ತಿದ್ದ. ಆಗ ಆತ ಬಿಡಿಸಿದ ಚಿತ್ರಗಳನ್ನು ನೋಡಿ ಅವರ ಗುರುಗಳಾದ ಗೋಡಚಿ ಮಾಸ್ತರ್ರಿಗೆ ಭಾರಿ ಖುಷಿ! ಆತಗ ಶಿವಾಜಿ, ಚೆನ್ನಮ್ಮ ಇಂತಹ ಐತಿಹಾಸಿಕ ಮಹಾಪುರುಷರ ಚಿತ್ರಾ ಬರಿಸಲಿಕ್ಕೆ ಸುರು ಮಾಡಿದರು. ಹಿಂಗ ಸುರುವಾತು ಆತನ ಚಿತ್ರಕಲಾದ ಓನಾಮ....'' ಎಂದು ನೆನೆಯುತ್ತಾರೆ ಅಣ್ಣಾ ಲಕ್ಷ್ಮಣಸಾಕ್ಷತ್ರಿ.

ಕೃಷ್ಣಕ್ಷತ್ರಿಯವರ ಆಸಕ್ತಿಯನ್ನು ಗಮನಿಸಿ ಮನೆಯವರು ಸೋದರಮಾವ ಚಿತ್ರಕಲಾವಿದ ಹೀರಾಲಾಲ್ ಖತ್ರಿಯವರ ಕಡೆ ಹೆಚ್ಚಿನ ವ್ಯಾಸಂಗಕ್ಕಾಗಿ ಅಹಮದಾಬಾದಿಗೆ ಕಳುಹಿಸಿದರು. ಅಹಮದಾಬಾದಿನಲ್ಲಿ ಚಿತ್ರಕಲೆ, ಛಾಯಾಚಿತ್ರಕಲೆಗೆ 1920 ರಿಂದ ಪ್ರಸಿದ್ಧರು. ಹೀರಾಲಾಲ್ ಖತ್ರಿ ಎ.ವಿ.ಅಲಮೇಲಕರ, ಶಾಂತಿಲಾಲ ಸೋನಿ, ಚಂದೂಲಾಲ ಶಹಾ ಮೊದಲಾದ ಚಿತ್ರಕಲಾವಿದರ ಸಾನ್ನಿಧ್ಯದಲ್ಲಿ 12 ವರ್ಷ ಕಾಲ ತರಪೇತಿ ಹೊಂದಿ ಕೃಷ್ಣಕ್ಷತ್ರಿ ಒಳ್ಳೆಯ ಕಲಾವಿದರಾಗಿ ಅರಳಿದರು.

ಮರಳಿ ತಾಯ್ನಾಡಿಗೆ

ಭಾರತ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕೃಷ್ಣಕ್ಷತ್ರಿ ಕೆಲಸ ಮಾಡುತ್ತಿದ್ದ ಸ್ಟುಡಿಯೋ ಭಿತ್ತಿ ಚಿತ್ರ ರಚನಾಗಾರವು ಆಯಿತು. 1945ರಲ್ಲಿ ಸ್ಟುಡಿಯೋ ಸುಟ್ಟು ಭಸ್ಮವಾಯಿತು. ವಿವಿಧ ಮಾಧ್ಯಮಗಳೇ ಅಲ್ಲದೆ ಫೋಟೋಗ್ರಫಿಯಲ್ಲಿಯೂ ಸಹ ಒಳ್ಳೆಯ ಮಾರ್ಗದರ್ಶನ ಮತ್ತು ಶಾಸ್ತ್ರಿಯ ಶಿಕ್ಷಣ ಪಡೆದ ಕೃಷ್ಣಕ್ಷತ್ರಿ ಮರಳಿ ಹುಬ್ಬಳ್ಳಿಗೆ ಬಂದರು.

ಫೋಟೋ ಸ್ಟುಡಿಯೋ ಸ್ಥಾಪನೆ

ಉಪಜೀವನದ ಒಂದು ವೃತ್ತಿಗಾಗಿ 1948 ರಲ್ಲಿ ಕ್ಷತ್ರಿ ಆರ್ಟ್ ಸ್ಟುಡಿಯೋ ಸ್ಥಾಪನೆ ಮಾಡಿದ. ಕೃಷ್ಣಕ್ಷತ್ರಿ ಕ್ಯಾಮರಾದೊಂದಿಗೆ ಹಳ್ಳಿ–ಹಳ್ಳಿಗಳನ್ನು ಸುತ್ತುತ್ತ ಅನೇಕ ಐತಿಹಾಸಿಕ ಸ್ಥಳಗಳ ನಿಸರ್ಗ ಚಿತ್ರ

ಗಳನ್ನು ರಚಿಸಿದುದೇ ಅಲ್ಲದೆ, ಇಲ್ಲಿ ಹಂಪೆಯನ್ನು ಪ್ರಮುಖವಾಗಿಟ್ಟುಕೊಂಡರು.

ಕಲಾಕೃತಿಗಳ ನಿರ್ಮಾಣ

ಹಂಪೆಯ ಶಿಲ್ಪ ವೈಭವದಿಂದ ಸ್ಫೂರ್ತಿ ಹೊಂದಿದ ಕೃಷ್ಣಕ್ಷತ್ರಿ ಒಬ್ಬರು ಆತ್ಮೀಯ ಗೆಳೆಯರನ್ನು ಕೂಡಿಸಿಕೊಂಡು ಕಮಲಾಪುರದಲ್ಲಿದ್ದುಕೊಂಡು ದಿನಂಪ್ರತಿ ಮುಂಜಾನೆ, ಸಂಜೆ ಕ್ಯಾನವಾಸಿನೊಂದಿಗೆ ಸುತ್ತಾಡಿ ಸುತ್ತಾಡಿ ಚಿತ್ರ ರಚಿಸಿದರು. ಹಂಪೆಯ ಮೂಲೆ ಮೂಲೆಯನ್ನು ತಿರುಗಾಡಿ ಅಪರೂಪದ ವಿವಿಧ ಭಂಗಿಯ ನೃತ್ಯದ ಚಿತ್ರಗಳನ್ನು, ನಿಸರ್ಗದ ರಮಣೀಯ ದೃಶ್ಯಗಳನ್ನು, ರಾಮಾಯಣ, ಮಹಾಭಾರತದ ಚಿತ್ರ ಕಥಾನಕಗಳನ್ನು, ವಿವಿಧ ರೀತಿಯ ಉಡಿಗೆ–ತೊಡಿಗೆಗಳು, ಪ್ರಸಾಧನಗಳು–ಹೀಗೆ ಪ್ರತಿಯೊಂದನ್ನು ವಿಶೇಷವಾಗಿ ಆಸ್ವಾದಿಸಿ, ರೇಖಾಚಿತ್ರ, ಅಲ್ಲದೆ ಜಲ, ತೈಲವರ್ಣದ ಕಲಾಕೃತಿಗಳನ್ನು ರಚಿಸಿದರು. ಹೀಗೆ ತಿಂಗಳಾನುಗಟ್ಟಲೆ ನಡೆಯಿತು. ನನ್ನ ಜೀವಮಾನವನ್ನೆಲ್ಲಾ ಅಲ್ಲಿ ಕಳೆದರೂ ಸಾಕಾಗದಷ್ಟು ಕಲಾಕೃತಿಗಳು ಅಲ್ಲಿವೆ. ಅಲ್ಲಿಯ ಸೃಷ್ಟಿಯ ಸೊಬಗು ವಿಶಿಷ್ಟವಾಗಿದೆ ಎನ್ನುತ್ತಾರೆ ಕೃಷ್ಣಕ್ಷತ್ರಿ.

ಸಾಹಿತಿಗಳ ಸಂಪರ್ಕ

1945ರಿಂದ 1948ರ ಅವಧಿಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ನಡೆಸಿ, ಅನೇಕ ಸಾಹಿತಿಗಳ, ಕಲಾವಿದರ ಸಂಪರ್ಕವನ್ನು ಪಡೆದರು. ಕ್ಷತ್ರಿ ಕನ್ನಡದ ಆಚಾರ್ಯ ಪುರುಷರಾದ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಬಿ.ಎಂ.ಶ್ರೀಕಂಠಯ್ಯನವರು, ಬಸವನಾಳರು, ಶಂ.ಬಾ. ಜೋಶಿ, ಆರ್.ಎಸ್.ಪಂಚಮುಖಿ, ದ.ರಾ.ಬೇಂದ್ರೆ, ಡಾ.ಶಿವರಾಮ ಕಾರಂತ, ವಿ.ಕೃ.ಗೋಕಾಕ್, ಅ.ನ.ಕೃ. ಮೊದಲಾದ ಹಿರಿಯ ಸಾಹಿತಿಗಳು ಇವರ ಕಲಾಕೃತಿಗಳನ್ನು ಕುರಿತು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಇಂಗ್ಲಿಷ್ ಕವಿ ಪ್ರೊ.ಆರ್ಮಾಂಡೋ ಮೆನ್‌ರ್ಝಿಸ್‌ರು ಕೃಷ್ಣರ ಚಿತ್ರವೊಂದರಿಂದ ಸ್ಫೂರ್ತಿ ಪಡೆದು ಕವನ ರಚಿಸಿದ್ದಾರೆ. ಕವಿ ವಿ.ಕೃ.ಗೋಕಾಕ್ ಅವರು ತಮ್ಮ 'ಹೂಬಳ್ಳಿ ಹೂಗಾರ' ಕವನಕ್ಕೆ ಕ್ಷತ್ರಿಯವರ ಚಿತ್ರವೊಂದು ಸ್ಫೂರ್ತಿಯೆಂದು ಅವರೇ ಹೇಳಿದ್ದಾರೆ. ಹೀಗೆ ಅನೇಕರಿಗೆ ಸ್ಫೂರ್ತಿಯ ಸೆಲೆಯಾಗಿ ಕಷ್ಣಕ್ಷತ್ರಿ ತಮ್ಮ ಸೃಜನಶೀಲ ಪ್ರತಿಭೆಯಿಂದ ಮುಂದೆ ಬಂದಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳು

1948–49ರಲ್ಲಿ ಕೃಷ್ಣಕ್ಷತ್ರಿ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗಿಯಾಗುವುದರೊಂದಿಗೆ, ಅನೇಕ ಪುಣ್ಯಪುರುಷ ಹೋರಾಟಗಾರರ ರೇಖಾಚಿತ್ರಗಳನ್ನು ಚಿತ್ರಿಸಿ, ಪ್ರದರ್ಶನಗೈಯುವುದರೊಂದಿಗೆ ಅವುಗಳನ್ನು ಅಚ್ಚು ಹಾಕಿಸಿ ಜನಸಾಮಾನ್ಯರಿಗೆ ಹಂಚಿದರು. ಕೃಷ್ಣಕ್ಷತ್ರಿಯವರ ಕೃತಿಗಳು ಅನೇಕರಿಂದ ಸಂಗ್ರಹಿಸಲ್ಪಟ್ಟಿವೆ. ಅದರಲ್ಲಿ ಗಮನಾರ್ಹವಾದುದು – ಜಿಂಧ್ ಅರಮನೆ ಕರ್ನಾಟಕ ವಿಶ್ವವಿದ್ಯಾಲಯ ಮ್ಯೂಸಿಯಂ ಮುಂತಾದುವು.

ಕಲಾಪ್ರದರ್ಶನ, ಸಂಗ್ರಹ, ಪುರಸ್ಕಾರ ಇತ್ಯಾದಿ

ಸ್ವಾತಂತ್ರ್ಯ ನಂತರ 1954ರಲ್ಲಿ ದೆಹಲಿಗೆ ಭೇಟಿ ಇತ್ತು ತಮ್ಮ ಕಲಾಕೃತಿಗಳಿಂದ ಪಂಡಿತ ಜವಾಹರಲಾಲ ನೆಹರು, ಡಾ.ಕೇಸಕರಂಥವರ ಮೆಚ್ಚುಗೆ ಪಡೆದರು. ಹಾಗೆಯೇ ಕಾಶ್ಮೀರಕ್ಕೆ ಹೋಗಿ ಅಲ್ಲಿನ ಸೃಷ್ಟಿ ಸೊಬಗನ್ನು ಚಿತ್ರಿಸಿದರು. ಆ ಚಿತ್ರಗಳಲ್ಲಿ ಕೆಲವು ಡಾ. ಕರಣಸಿಂಗರ ಅರಮನೆಯಲ್ಲಿ ತೂಗು ಹಾಕಲಾಗಿದೆ.


ಅನೇಕ ಸನ್ಮಾನ, ಪ್ರಶಸ್ತಿ ಗಳಿಸಿದ ಕೃಷ್ಣಕ್ಷತ್ರಿಯವರ ಕೃತಿಗಳು ಕಾಶ್ಮೀರ, ಮಹಾರಾಷ್ಟ್ರದ ಜಿಂದ್, ಅಹಮದಾಬಾದ್, ಹಂಪೆ, ಧಾರವಾಡ, ರಾಮದುರ್ಗ ಹೀಗೆ ನಾಡಿನ ಅನೇಕ ಭಾಗಗಳಲ್ಲಿ ಸಂಗ್ರಹಿಸಲ್ಪಟ್ಟಿವೆ.

ಕ್ಷತ್ರಿಯವರ ಕಲಾಸೇವೆಯನ್ನು ಮನ್ನಿಸಿ, ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯು 1985ರ ವಾರ್ಷಿಕ ಪ್ರಶಸ್ತಿಯನ್ನಿತ್ತು, ಗೌರವಿಸಿದೆ.

ಸರಳವಾದ ಉಡುಪು, ಅಷ್ಟೇ ಸರಳವಾದ ಸ್ವಭಾವದ ಕೃಷ್ಣಕ್ಷತ್ರಿ ಯಾವ ಪ್ರಚಾರದ ಗದ್ದಲಕ್ಕೆ ಹೋದವರಲ್ಲ. 'ಕಸ್ತೂರಿ' ಮಾಸಪತ್ರಿಕೆಯಿಂದ ಜನರಿಗೆ ಪರಿಚಿತರಾದ ಇವರು ಕರ್ನಾಟಕದ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ, ರಾಷ್ಟ್ರೀಯ ಭಾವೈಕ್ಯದ ಉದ್ದೀಪನಕ್ಕಾಗಿ ತಮ್ಮ ಕಲೆಯನ್ನು ವಿನಿಯೋಗಿಸಿದ್ದಾರೆ. ಸತ್ವಶಾಲಿಯಾದ ರೇಖೆಗಳು, ಹಿತ–ಮಿತವಾದ ವರ್ಣ ವಿನ್ಯಾಸ ಇವರ ಶೈಲಿಯ ಹೆಗ್ಗುರುತುಗಳಾಗಿವೆ.

ಎಸ್. ಪಿ. ಪಾಟೀಲ

ಕೃಷ್ಣಕ್ಷತ್ರಿ



ವ್ಯಾಮೋಹ

ಎಸ್. ಜಿ. ಚಿನ್ನಣ್ಣವರ



ಚಿತ್ರಕಲಾ ಪ್ರಪಂಚಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಮೂಲ್ಯವಾದುದು. ಅನೇಕ ಸೃಜನಶೀಲ ಕಲಾವಿದರು ಕರ್ನಾಟಕದ ಹೆಸರನ್ನು ಬೆಳಗಿದ್ದಾರೆ. ಅಂಥ ಕಲಾವಿದರ ಸಾಲಿನಲ್ಲಿ ಶ್ರೀಶೈಲ ಗುರುಪಾದಪ್ಪ ಚಿನ್ನಣ್ಣವರ ಹೆಸರು ಪ್ರಸಿದ್ಧವಾಗಿದೆ.

ಜನನ – ಬಾಲ್ಯ – ವಿದ್ಯಾಭ್ಯಾಸ :

ಎಸ್.ಜಿ.ಚಿನ್ನಣ್ಣವರ ಹುಟ್ಟಿದುದು 1–9–1923 ರಲ್ಲಿ, ಅಂಕಲಗಿಯಲ್ಲಿ. ತಂದೆ ಗುರುಪಾದಪ್ಪ, ತಾಯಿ ಗಂಗವ್ವ. ಇವರದು ಮೂಲತಃ ವ್ಯಾಪಾರಸ್ಥರ ಮನೆತನ. ಆ ಕಾಲದಲ್ಲಿ ತುಂಬ ಪ್ರಸಿದ್ಧವಾಗಿತ್ತು. ಸ್ಥಿತಿವಂತ ಕುಟುಂಬದ ಇವರು ತಮ್ಮ ಮಕ್ಕಳೆಲ್ಲರನ್ನು ವಿದ್ಯಾವಂತರನ್ನಾಗಿ ಮಾಡುವ ಸಹಜ ಬಯಕೆ ಅವರದು. ಪ್ರಾಥಮಿಕ ಶಾಲೆ ಅಂಕಲಗಿಯಲ್ಲಿ ಮುಗಿಸಿ ಮುಂದೆ ಮಾಧ್ಯಮಿಕ ಶಾಲೆಗೆ ಧಾರವಾಡಕ್ಕೆ ಬಂದು ಆರ್.ಎಲ್.ಎಸ್. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಕಲಾವಿದ ಡಿ.ವ್ಹಿ.ಹಾಲಬಾವಿಯವರ ಸಂಪರ್ಕ ದೊರೆಯಿತು. ಅವರು ಚಿನ್ನಣ್ಣನವರನ್ನು ತಮ್ಮ ಚಿತ್ರಕಲಾ ಕ್ಲಾಸಿಗೆ ಸೇರಿಸಿಕೊಂಡು ಒಬ್ಬ ಒಳ್ಳೆಯ ಕಲಾವಿದನಾಗುವಂತೆ ಮಾರ್ಗದರ್ಶಕರಾದರು. ಚಿನ್ನಣ್ಣವರೂ ತುಂಬ ಪ್ರಗತಿ ಹಾಗೂ ಪರಿಣತಿಯನ್ನು ತೋರಿಸಿ ಮುಂಬೈಯಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ಉತ್ತಮ ಫಲಿತಾಂಶ ಪಡೆದರು.

ಮುಂದೆ ಹೆಚ್ಚಿನ ಕಲಾಭ್ಯಾಸಕ್ಕಾಗಿ ಮುಂಬೈನ 'ಸರ್. ಜೆ.ಜೆ.ಸ್ಕೂಲ್ ಆಫ್ ಆರ್ಟ್'ಗೆ ಸೇರಿ ಅಲ್ಲಿ 1944ರಲ್ಲಿ ಡಿಪ್ಲೋಮಾ ಪೇಂಟಿಂಗ್ ಪದವಿ (ಜಿ.ಡಿ.ಆರ್ಟ್ ಪೇಂಟಿಂಗ್) ಪಡೆದರು. ನಾಲ್ಕನೆಯ ವರ್ಷದ ಪರೀಕ್ಷೆಯಲ್ಲಿ ಮುಂಬೈ ಪ್ರಾಂತಕ್ಕೆ ಪ್ರಥಮವಾಗಿ ಬಂದದ್ದು ಇವರ ಸಾಧನೆ.

ಉದ್ಯೋಗಕ್ಕಾಗಿ ಅಲೆದಾಟ

ಪರೀಕ್ಷೆ ಮುಗಿಯುತ್ತಿದ್ದಂತೆ ನೌಕರಿಗಾಗಿ ಅಲೆದಾಟ ಪ್ರಾರಂಭ. ಕಲಾವಿದ ದಂಡಾವತಿಮಠ ಅವರ ಮಾರ್ಗದರ್ಶನದಂತೆ ಮುಂಬಯಿಯಲ್ಲಿಯೇ ನೆಲೆಸಿ ಪ್ರಸಿದ್ಧ ಕೈಮೀರ್ (Keymer & Company) ಸಂಸ್ಥೆಯಲ್ಲಿ ಕಲಾವಿದರಾಗಿ ನೌಕರಿ ಪ್ರಾರಂಭಿಸಿದರು. ಆಗ ಅವರಿಗೆ ತಿಂಗಳಿಗೆ 86 ರೂಪಾಯಿ ಸಂಬಳ. ವಾಣಿಜ್ಯ ಕಲೆಗೆ ತುಂಬಾ ಬೇಡಿಕೆ ಇದ್ದ ಕಾಲವದು. ತಾವು ವಾಣಿಜ್ಯ ಕಲಾವಿದರಾಗಿ ಏಕೆ ಸೇರಬಾರದೆಂದು ಅರ್ಜಿ ಕೂಡ ಹಾಕಿದ್ದರಂತೆ. ಆದರೆ ಆ ಕಂಪನಿಯವರು ಟೆಸ್ಟಿನಲ್ಲಿ ಇವರಿಗೆ ಕಡಿಮೆ ಅಂಕಗಳು ಬಂದಿದ್ದರಿಂದ ನೀವು ವಾಣಿಜ್ಯ ಕಲಾವಿದರಾಗಿ ಮುಂದುವರೆಯಲು ಸಾಧ್ಯವಿಲ್ಲವೆಂದು ತಿರಸ್ಕಾರ ಮಾಡಿದರಂತೆ. ಮುಂದೆ ಇವರು ಸಾಕಷ್ಟು ಶ್ರಮವಹಿಸಿ ತರಬೇತಿ ಪಡೆದು ಅದೇ ಸಂಸ್ಥೆಯಲ್ಲಿ ವಾಣಿಜ್ಯ ವಿಭಾಗದ ಕಲಾವಿದರಾಗಿ ನೇಮಿತರಾದರು.

ಮರಳಿ ತಾಯ್ನಾಡಿಗೆ

ಉತ್ತಮವಾದ ಸ್ಥಿತಿಯಲ್ಲಿ ಕಲಾಕೃತಿ ನಿರ್ಮಾಣ ಮಾಡುತ್ತ ಮುಂಬೈಯಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಗಳಿಸುತ್ತಿರುವ ಸಂದರ್ಭದಲ್ಲಿ ಮನೆಯಲ್ಲಿನ ವಿಶೇಷ ಪರಿಸ್ಥಿತಿಯಿಂದ ಊರಿಗೆ ಹಿಂತಿರುಗಬೇಕಾಯಿತು. ಮನೆತನದ ಸೇಂಗಾದ ಫ್ಯಾಕ್ಟರಿಯನ್ನು ನೋಡಿಕೊಳ್ಳುತ್ತ ಹುಕ್ಕೇರಿಯಲ್ಲಿ ನೆಲೆಸಲು ನಿರ್ಧರಿಸಿದರು.

ತಮ್ಮ ಕಲಾ ಸಾಧನೆಯನ್ನು ಮರೆಯದೆ ಮನೆಯ ಉದ್ಯೋಗದಲ್ಲೂ ಬಿಡುವು ಮಾಡಿಕೊಂಡು ಒಮ್ಮೊಮ್ಮೆ ಇಡೀ ರಾತ್ರಿಯುದ್ದಕ್ಕೂ ಕಲಾಕೃತಿ ನಿರ್ಮಾಣ ಮಾಡಿದ್ದರಂತೆ.

ಕಲಾಕೃತಿಗಳು :

ಎಸ್.ಜಿ.ಚೆನ್ನಣ್ಣವರ ಅವರು ರಚಿಸಿದ ಕಲಾಕೃತಿಗಳ ಸಂಖ್ಯೆ ಸಾವಿರಕ್ಕೂ ಮೀರಿ ಹೋಗುತ್ತದೆ. ನಿಸರ್ಗ ಚಿತ್ರಗಳನ್ನು ಜಲ, ತೈಲವರ್ಣಗಳಲ್ಲಿ ರಚಿಸಿದ್ದಾರೆ. ಇದಕ್ಕಾಗಿ ಕಾರವಾರ, ಗೋಕರ್ಣ, ಹಂಪೆ, ಬಿಜಾಪುರ, ಗೋಕಾಕ್, ಬಾಂಬೆ ಮುಂತಾದ ಕಡೆಯ ದೃಶ್ಯಗಳು ಇವರ ಕುಂಚದಲ್ಲಿ ಸೆರೆ ಸಿಕ್ಕಿವೆ. ಪೋರ್ಟ್ರೈಟ್, ಲೈಫ್ ಸೈಜ್ ಚಿತ್ರಗಳು, ಇವರೊಬ್ಬ ಅತ್ಯುತ್ತಮ ಕಲಾವಿದನೆಂಬುದನ್ನು ರುಜುವಾತು ಮಾಡುತ್ತವೆ. ಪಾಶ್ಚಾತ್ಯ ಕಲಾವಿದರಾದ ವರ್ಮಿರ್, ರೂಬಿನ್ಸ್, ರೆಂಬ್ರಾಂಟ್‌ರ, ವರ್ಣ ಛಾಯೆಯ ಪ್ರಭಾವವನ್ನು ಇವರ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

ಇವರು ರಚಿಸಿದ ಪೂರ್ಣಗಾತ್ರದ ಚಿತ್ರಗಳು ಅಪಾರ ಜನಪ್ರಿಯತೆಯನ್ನು ಗಳಿಸಿವೆ. ಹಾಗೆಯೇ ಈ ಕಲಾವಿದನಿಗೆ ತಕ್ಕಮಟ್ಟಿನ ಆರ್ಥಿಕ ಸ್ಥಿತಿ–ಗತಿಯನ್ನು ಸುಧಾರಿಸಿವೆಯಂತೆ. ಇವರ ಚಿತ್ರಗಳಲ್ಲಿ ಕಾಣುವ ತೆಳುವಾದ ವರ್ಣ ಸಂಯೋಜನೆ ಸ್ಪಷ್ಟ ನೆಳಲು–ಬೆಳಕು ಇವರದೇ ಆದ ವೈಶಿಷ್ಟ್ಯವನ್ನು ಕಾಣಬಹುದಾಗಿದೆ. ವಿದೇಶೀ ಕಲಾವಿದರ ಚಿತ್ರತಂತ್ರವನ್ನು ಸಹ ಇವರು ರೂಢಿಸಿಕೊಂಡಿರುವುದು ಈ ಚಿತ್ರಗಳಿಂದ ಮನಗಾಣಬಹುದು. ಉತ್ತರ ಕರ್ನಾಟಕದ ಪ್ರಸಿದ್ಧ ಪ್ರಕೃತಿ ಚಿತ್ರಕಾರರೆಂದು ಹೆಸರು ಗಳಿಸಿದ್ದಾರೆ. ಆದರೆ ವ್ಯಕ್ತಿ ಚಿತ್ರಣಕಾರರಲ್ಲಿ ಇವರ ಪ್ರತಿಭೆ ಹೆಚ್ಚು ಶ್ರಮಿಸಿದೆ ಎನಿಸುತ್ತದೆ. ಕಳೆದ 15–20 ವರ್ಷಗಳಿಂದ ತಮ್ಮ ಮನೆಯ ವೃತ್ತಿಯಿಂದ ದೂರ ಸರಿದು ಚಿತ್ರ ರಚನೆಯ ಕಾರ್ಯದಲ್ಲಿಯೇ ತಮ್ಮ ಬದುಕಿನ ಬಹುಪಾಲು ವೇಳೆಯನ್ನು ಸವೆಸುತ್ತಿದ್ದಾರೆ.

ಅಂತಾರಾಷ್ಟ್ರೀಯ ಖ್ಯಾತಿ

ಶ್ರೀಶೈಲ ಗುರುಪಾದಪ್ಪ ಚೆನ್ನಣ್ಣವರ ಕೀರ್ತಿ ದೇಶ ವಿದೇಶಗಳಲ್ಲಿ ಹಬ್ಬಲು ಅವರು ಸಾಕಷ್ಟು ಶ್ರಮ ವಹಿಸಿ ದುಡಿದಿದ್ದಾರೆ. 'ಟೈಮ್ಸ್ ಆಫ್ ಇಂಡಿಯಾ' ದಲ್ಲಿ ಇವರ ಅನೇಕ ಕಲಾಕೃತಿಗಳು ಪ್ರಿಂಟಾಗಿ ನಾಡಿನಾದ್ಯಂತ ಹರಡಲು ಸಹಾಯವಾಗಿವೆ. 'ಇಲಸ್ಟ್ರೇಟೆಡ್ ವೀಕ್ಲಿ', 'ಧರ್ಮಯುಗ್' ಪತ್ರಿಕೆಗಳಲ್ಲಿ ಇವರ ಬಗ್ಗೆ ಬರಹಗಳು ಕಲಾಕೃತಿಗಳು ಅಚ್ಚಾಗಿವೆ. ಹೀಗಾಗಿ ಪತ್ರಿಕಾ ಪ್ರಚಾರವು ಇವರಿಗೆ ಸಹಜವಾಗಿ ಲಭಿಸಿದ್ದರಿಂದ ಬಹು ಬೇಗನೆ ಕಲಾವಿದರನೇಕರ ಗಮನ ಸೆಳೆಯಲು ಸಹಾಯವಾಯಿತು. ಕಲೆಗೆ ವಿದೇಶದವರ ಪುರಸ್ಕಾರ ಲಭಿಸಿದೆ. ಸ್ವದೇಶದಲ್ಲಿ ಅನೇಕ ಸಭೆ–ಸಮಾರಂಭಗಳಲ್ಲಿ ಸನ್ಮಾನಿತರಾಗಿದ್ದಾರೆ.

1983ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಇವರ ಸಾಧನೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿ ಇತ್ತು ಇವರನ್ನು ಗೌರವಿಸಿದೆ.

ಕಲಾಕೃತಿಗಳ ಸಂಗ್ರಹ

ಬೆಳಗಾವಿ, ಅಂಕಲಗಿ, ಸಂಕೇಶ್ವರ, ನಿಡಸೂಸಿ, ಹುಕ್ಕೇರಿ, ಗೋಕಾಕ, ಧಾರವಾಡ, ಬಾಂಬೆ, ಬೆಂಗಳೂರು, ಹುಬ್ಬಳ್ಳಿ ಇತ್ಯಾದಿ ಕಡೆ ಚೆನ್ನಣ್ಣವರ ಕೃತಿಗಳು ಸಂಗ್ರಹಗೊಂಡಿವೆ. ಪಾಶ್ಚಿಮಾತ್ಯರಿಗೆ ಅನೇಕ ಚಿತ್ರಗಳನ್ನು ಕೊಟ್ಟಿದ್ದೇವೆ. ಅವು ಯಾವ ದೇಶದಲ್ಲಿ ಸಂಗ್ರಹವಾಗಿವೆಯೋ ನನಗೆ ಗೊತ್ತಿಲ್ಲವೆಂದು ಹೇಳುವರು ಚೆನ್ನಣ್ಣವರು. "ನನ್ನ ಜೀವನದುದ್ದಕ್ಕೂ ಇದೇ ಉದ್ಯೋಗವಾಗಿದೆ. ವಾರಕ್ಕೆ ಒಂದೆರಡು ಚಿತ್ರಗಳನ್ನಾದರೂ ನಾನು ಜನರಿಗೆ ಮಾಡಿಕೊಡಲೇಬೇಕು. ಇದರಲ್ಲಿ ನನಗೆ ನಿಜವಾಗಿಯೂ ತೃಪ್ತಿ ಇದೆ'' ಎನ್ನುತ್ತಾರೆ.

ಸಂಗೀತದ ಹವ್ಯಾಸ

ಚೆನ್ನಣ್ಣವರ ಅವರ ಇತರ ಹವ್ಯಾಸಗಳಲ್ಲಿ ಸಂಗೀತದ ಹುಚ್ಚು ಅಪಾರವಾಗಿದೆ. ಸ್ವತಃ ಹಾಡುಗಾರರಾದ ಇವರು ಅನೇಕ ಕಡೆ ಹಾಡಿ ಜನಪ್ರಿಯರಾಗಿದ್ದಾರೆ. ಇವರ ಹತ್ತಿರ ಈಗಲೂ ನಾಲ್ಕು ನೂರಕ್ಕೂ ಮಿಕ್ಕಿ ಪ್ರಖ್ಯಾತ ಸಂಗೀತಗಾರರ ಹಾಡುಗಳನ್ನು ಕ್ಯಾಸೆಟ್ಟುಗಳಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದಾರೆ. ದಿನಾಲು ಬೇಜಾರಾದಾಗ ಅವುಗಳನ್ನು ಹಾಕಿ ಕೇಳಿ ಸಂತೋಷ ಪಡುತ್ತಾರಂತೆ.

ಫೋಟೋಗ್ರಫಿಯಲ್ಲಿ ಪರಿಣತಿ

ಚೆನ್ನಣ್ಣವರು ಮುಂಬೈಯಲ್ಲಿ ಇದ್ದಾಗಲೇ ಫೋಟೋಗ್ರಫಿಯತ್ತ ಒಲವು ಹೊಂದಿ ಅದರ ಬಗ್ಗೆ ತರಬೇತಿ ಪಡೆದು ಬರುವಾಗ ಕ್ಯಾಮರಾ ಒಂದನ್ನು ಜೊತೆಗೆ ತಂದು ಹವ್ಯಾಸವಾಗಿ ಅದನ್ನು ಬಳಸಿಕೊಂಡಿದ್ದಾರೆ. ಅನೇಕ ಛಾಯಾಚಿತ್ರಗಳನ್ನು ತೆಗೆದ ಸಂತೃಪ್ತಿ ಇವರದಾಗಿದೆ. ಅವರ ಸಂಗ್ರಹದಲ್ಲಿ ಅನೇಕ ಛಾಯಾಚಿತ್ರಗಳಿವೆ.

ಕಲೆಯ ವಿಷಯ ಕುರಿತು ಅನೇಕ ದೇಶ 'ವಿದೇಶಗಳ ಲೇಖಕರ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ.

ಹಾಗೆಯೇ ಪೇಪರುಗಳಲ್ಲಿ ಬಂದಿರುವ ಕಲಾವಿದರ ಕಟಿಂಗ್ಸ್‌ಗಳಿಗೆ ಲೆಕ್ಕವೇ ಇಲ್ಲ.

ಕಲೆಯು, ಕಲಾವಿದರ ಕುರಿತು ಇವರ ವಿಚಾರಗಳು

65 ವಸಂತಗಳನ್ನು ಸವೆಸಿರುವ ಚೆನ್ನಣ್ಣನವರೊಂದಿಗೆ ಸಂದರ್ಶನವಿತ್ತಾಗ ಅವರಿಂದ ಬಂದ ವಿಚಾರಗಳು– "ನಾನು ಕಲಾವಿದ. ನನಗೆ ಮಾತಾಡಲು ಗೊತ್ತಿಲ್ಲ. ಕಲೆಯ ಬಗ್ಗೆ ಅಷ್ಟೇನು ನನಗೆ ತಿಳಿಯದು. ಆ ಶೈಲಿ, ಈ ಶೈಲಿ ಅಂತ ನಾನು ತಲೆಕೆಡಿಸಿಕೊಂಡಿಲ್ಲ. ನನಗೆ ಅನಿಸಿದಂತೆ ನಾನು ಚಿತ್ರಬಿಡಿಸಿದ್ದೇನೆ. ಕಲಾವಿದರು ಹೇಗಾದರೂ ಅರ್ಥೈಸಿಕೊಳ್ಳಲಿ."

ಆಧುನಿಕ ಕಲೆಯ ಬಗ್ಗೆ ನಿಮಗೆ ಒಲುವು ಇಲ್ಲವೆ? ಎಂದಾಗ, "ಆಧುನಿಕ ಕಲೆ ಎಂದರೆ ಈಗಿನ ಸಮಕಾಲೀನ ಕಲೆ. ಆ ತರಹದ ಚಿತ್ರ ಮಾಡಲು ಬರುವುದಿಲ್ಲ. ನನಗ ಅರ್ಥವಾಗೋಲ್ಲ. ನನಗೆ ಅದರಲ್ಲಿ ಅಷ್ಟು ತೃಪ್ತಿ ಇಲ್ಲ. ಆದರೆ ಈಗ ಜನ ನಿಗೂಢ ರೀತಿಯಲ್ಲಿ ಚಿತ್ರಿಸುತ್ತಾರೆ. ಅದು ಅವರವರ ಅಭಿರುಚಿ. ಇಂದಿನ ಹುಡುಗರು ನಮ್ಮಷ್ಟು ಕಷ್ಟಪಟ್ಟು ದುಡಿಯೋಲ್ಲ. ದಿಢೀರನೇ ಪ್ರಸಿದ್ಧ ಕಲಾವಿದರಾಗಲು ನೋಡುತ್ತಾರೆ. ಹೀಗಾಗಿ ಅವರಲ್ಲಿ ಆಳ ಕಡಿಮೆ ಇರುತ್ತದೆ. ಹಂತಹಂತವಾಗಿ, ನಿಯಮಬದ್ಧವಾಗಿ ಅಭ್ಯಾಸ ಮಾಡಿ ಮುಂದೆ ಬೇಕಾದರೆ ತಮ್ಮತನವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಿ. ಸಸಿ ಬೆಳೆಯಬೇಕು. ಸಮೃದ್ಧವಾಗಿ ಬೆಳೆದ ಮೇಲೆ ಫಲ ಬಿಡಲು ಸಾಧ್ಯ. ಹಾಗೆಯೇ ಇವತ್ತಿನ ಯುವ ಕಲಾವಿದರು ಪ್ರಯತ್ನದಿಂದ ಮುಂದೆ ಬರಬೇಕು."

ಈಗಿನ ಕಲಾಕೃತಿಗಳನ್ನು ಕಂಡಾಗ ಏನನ್ನಿಸುತ್ತೆ?

ಒಬ್ಬ ಕಲಾವಿದನ ಕೃತಿಯ ಕುರಿತು ಹೇಳುವುದು ಕಠಿಣ, ಅವರವರ ಅಭಿರುಚಿ ಅವರು ಕಂಡ–ಉಂಡ ಅನುಭವ ಕಲಾಮಾಧ್ಯಮದಲ್ಲಿ ಆಕಾರ ಪಡೆಯುತ್ತವೆ. ಇಂದಿನ ಸಮಕಾಲೀನ ಕಲೆ ವಾಸ್ತವ ಬದುಕಿನ ವಿಷಯವನ್ನು ಕುರಿತಾದವುಗಳಾಗಿವೆ. ನಮಗೆ ಹೀಗೆ ಚಿತ್ರಿಸಲು ಆಗಲಿಲ್ಲ ಎಂಬುದನ್ನು ಒಪ್ಪಿಕೊಳ್ಳುವ ಅವರು ಇಂದಿನ ಹುಡುಗರು ನಿಜವಾಗಿಯೂ ಕೆಲವು ಸಂದರ್ಭದಲ್ಲಿ ನಮಗಿಂತ ಜಾಣರಿದ್ದಾರೆ ಎಂದು ಅವರ ಮಾತಿನಿಂದ ವ್ಯಕ್ತವಾಗುತ್ತದೆ. ಚೆನ್ನಣ್ಣನವರ ಕಲಾಸೇವೆಯನ್ನು ಮಾನ್ಯಮಾಡಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ 1983ನೇ ಸಾಲಿನ ಪ್ರಶಸ್ತಿ ಇತ್ತು ಗೌರವಿಸಿದೆ.

ಎಸ್. ಸಿ. ಪಾಟೀಲ

ಪಿ. ಆರ್. ತಿಪ್ಪೇಸ್ವಾಮಿ



"ಕಲಾ ಸಾಧಕ'' ಎಂಬುದು ಕಲಾವಿದ ತಿಪ್ಪೇಸ್ವಾಮಿಯವರನ್ನು ಕುರಿತು ಶ್ರೀಯುತ ಜೀ.ಶಂ. ಪರಮಶಿವಯ್ಯ ಅವರು ರಚಿಸಿದ ಕಿರು ಹೊತ್ತಿಗೆ. ಅದರ ಕೊನೆಯಲ್ಲಿ ತಿಪ್ಪೇಸ್ವಾಮಿಯವರನ್ನು ಕುರಿತ ಮುಖ್ಯ ವಿವರ (ಬಯೋಡೇಟಾ)ಗಳು ಇವೆ. ಅದನ್ನು ಹಾಗೆಯೇ ಅಚ್ಚಿಸಿದರೂ ಮೂರು ಪುಟಗಳಿಗೂ ಹೆಚ್ಚಾಗುತ್ತದೆ. (ಪ್ರಸ್ತುತ ಲೇಖನದ ಮಿತಿ ಮೂರು ಪುಟಗಳು) ಅವರ ಅರವತ್ತಾರು ವರ್ಷಗಳ ಬಹುಮುಖ ಕಲಾ ಸೇವೆಯನ್ನು ವಿವರವಾಗಿ ಗುರುತಿಸಿದರೆ ಒಂದು ಹೆಬ್ಬೊತ್ತಿಗೆಯೇ ಆದೀತು. ಚದುರಿ ಹೋಗಿರುವ ನೂರಾರು ಲೇಖನಗಳು ಇದ್ದರೆ ವಾಚಕ ವಾಣಿಗೆ ಬರೆದ ಪತ್ರಗಳೇ ಒಂದು ಸಂಪುಟಕ್ಕಾಗುವಷ್ಟು ಆದೀತು. ತಿಪ್ಪೇಸ್ವಾಮಿಯೊಂದಿಗೆ ಒಂದೆರಡು ವಾರ ಇದ್ದವರೂ ಅವರ ಬಗ್ಗೆ ಒಂದು ಲೇಖನ ಬರೆಯುವಷ್ಟು ಸಾಮಗ್ರಿ ಸಂಗ್ರಹಿಸಿಯಾರು.

ಈಗಾಗಲೇ ಅವರನ್ನು ಗುರುತಿಸಿರುವಂತೆ, ನಿಸರ್ಗ ಚಿತ್ರ ರಚನೆ, ಜನಪದ ವಸ್ತುಸಂಗ್ರಹಾಲಯ ಹಾಗೂ ಕಲೆಯ ಕಲಾವಿದರ ಬಗ್ಗೆ ಲೇಖನಗಳು ಇವುಗಳು ತಿಪ್ಪೇಸ್ವಾಮಿಯವರ ಹೆಸರಿನೊಂದಿಗೇ ಸೇರಿರುವ ಅವಿಭಾಜ್ಯ ಅಂಗಗಳು. ದೇಶಪ್ರೇಮ ಎಂಬುದು ಸ್ವಾತಂತ್ರ್ಯ ಹೋರಾಟದೊಂದಿಗೇ ಬಂದುದು. ದೇಶಪ್ರೇಮದಿಂದ ಕೆಲವರು ಸಕ್ರಿಯವಾಗಿ ಹೋರಾಟಕ್ಕೆ ಇಳಿದರು. ಅಂತೆಯೇ ಕವಿಗಳು, ಕಲಾವಿದರು ತಮ್ಮ ತಮ್ಮ ಮಾಧ್ಯಮದಲ್ಲಿ ಇರಿಸಿದರು. ಚಳವಳಿಯಲ್ಲೂ ಗುಪ್ತಕಾರ್ಯಾಚರಣೆಯನ್ನು ಮಾಡಿದ್ದರೂ ತಿಪ್ಪೇಸ್ವಾಮಿಯವರ ಭಾರತದ ಉದ್ದಗಲದ ಗುಡಿ – ಗೋಪುರಗಳ ಸಾವಿರಾರು ಚಿತ್ರಗಳು ರಾಷ್ಟ್ರ ಪ್ರೇಮದ ದ್ಯೋತಕವೇ ಆಗಿವೆ.

ತಿಪ್ಪೇಸ್ವಾಮಿಯವರ ಬಾಲ್ಯ, ವಿದ್ಯಾಭ್ಯಾಸ, ಸಾಧನೆಗಳನ್ನು ತಿಳಿಸುವ ಹಲವಾರು ಲೇಖನಗಳು ಬಂದಿವೆ. ತಮ್ಮ ಚಿಕ್ಕಂದಿನ ವೈಭವದ ದಿನಗಳನ್ನು ಸ್ವತಃ ಅವರೇ ಕೆಲವೆಡೆ ಬರೆದಿದ್ದಾರೆ. ಹಿರಿಯೂರು ಬಳಿಯ ಹರ್ತಿಕೋಟೆಯ ಪಟೇಲ್ ರುದ್ರಪ್ಪ ಹಾಗೂ ಪತ್ನಿ ಲಕ್ಷ್ಮಮ್ಮ ಅವರ ಹಿರಿಯ ಮಗನಾಗಿ 12–8–1922ರಲ್ಲಿ ಜನಿಸಿದ ಇವರಿಗೆ ಪ್ರಾಥಮಿಕ ಶಾಲೆಯಲ್ಲಿಯೇ ಚಿತ್ರಕಲೆಯತ್ತ ಒಲವು ಬಂದಿತು. ಆಗಲೇ ಉಪಾಧ್ಯಾಯರು ಬರೆದಿದ್ದ, ತಾವೆಂದೂ ನೋಡಿರದ ರೈಲಿನ ಚಿತ್ರ ನಕಲು ಮಾಡಿ ಮೆಚ್ಚುಗೆ ಪಡೆದಿದ್ದ ಶ್ರೀಯುತರು ಮಾಧ್ಯಮಿಕ ಶಾಲೆಗೆ ದಾವಣಗೆರೆಗೆ ಬಂದರು. ಅಲ್ಲಿ ಡ್ರಾಯಿಂಗ್ ಉಪಾಧ್ಯಾಯರಾಗಿದ್ದ ಗುರುಬಸಪ್ಪನವರ ಪ್ರಭಾವಕ್ಕೆ ಒಳಗಾದರು. ಚಿತ್ರದುರ್ಗದಲ್ಲಿ ಕವಿ ಹೊಯ್ಸಳರ ಪ್ರಭಾವದಿಂದ ಚಿತ್ರಕಲೆಯನ್ನು ತಮ್ಮ ಕ್ಷೇತ್ರವಾಗಿಸಿಕೊಳ್ಳಬಯಸಿದರು. ನಿಜಲಿಂಗಪ್ಪನವರ ಶಿಫಾರಸು ಪತ್ರದೊಂದಿಗೆ ಮೈಸೂರಿನ ಚಾಮರಾಜೇಂದ್ರ ಚಿತ್ರಕಲಾ ಶಾಲೆಯಲ್ಲಿ ಎರಡು ವರ್ಷ ವೈ.ಸುಬ್ರಹ್ಮಣ್ಯರಾಜು, ಎಸ್.ನಂಜುಂಡಸ್ವಾಮಿ ಇವರುಗಳ ಬಳಿ ಕಲಿತರು. ನಂತರ ಮಹಾರಾಜಾ ಕಾಲೇಜಿನಲ್ಲಿ ಸ್ನಾತಕ ಪದವಿಯನ್ನು ಪಡೆದರು. ಸ್ವಭಾವತಃ ತೀರಾ ಸ್ನೇಹಜೀವಿಯಾದ ಇವರಿಗೆ ಸ್ವಾತಂತ್ರ್ಯ ಹೋರಾಟಗಾರರು, ಕವಿಗಳು, ಕಲಾವಿದರುಗಳ ಪರಿಚಯವಾಗಿ ಅವರುಗಳಿಂದ ತಮ್ಮ ಕಲೆಗೆ ಪ್ರೋತ್ಸಾಹ, ಮೆಚ್ಚುಗೆ ಪಡೆದು ಚಿತ್ರಕಲೆಯನ್ನೇ

ತಮ್ಮ ಜೀವನ ಸಂಗಾತಿಯಾಗಿರಿಸಿಕೊಂಡರು.

ಬೆಂಗಳೂರಿನಲ್ಲಿ 1939ರಲ್ಲಿ ನಡೆದ ಸ್ಕೌಟ್ ರ್‍ಯಾಲಿಯಲ್ಲಿ ದುರ್ಗದ ಪರವಾಗಿ ಪ್ರವೇಶದ್ವಾರ ರಚನೆಗೂ ಹಾಗೂ ಅಲ್ಲಿಯ ವಸ್ತುಪ್ರದರ್ಶನದಲ್ಲಿಯೂ ಬಹುಮಾನ ಗಳಿಸಿದಂದಿನಿಂದ ಅವರ ಕಲಾ ಚಟುವಟಿಕೆಯನ್ನು ಗುರುತಿಸಬಹುದು. ಆ ವೇಳೆಗಾಗಲೇ ಅವರು ಚಿತ್ರಕಲೆಯ ವ್ಯಾಕರಣವನ್ನು ತಿಳಿದಿದ್ದರು. ಮೊದಲ ಚಿತ್ರ 'ಬೆಳಕು' ಪತ್ರಿಕೆಯಲ್ಲಿ ಪ್ರಕಟಗೊಂಡ ನಂತರ ಅವರ ಅನೇಕ ಚಿತ್ರಗಳು ಪ್ರಬುದ್ಧ ಕರ್ನಾಟಕ, ಸುಧಾ ಹಾಗೂ ತೆಲುಗು, ತಮಿಳು ವಾರಪತ್ರಿಕೆ, ದೀಪಾವಳಿ ಇತ್ಯಾದಿ ವಿಶೇಷ ಸಂಚಿಕೆಗಳಲ್ಲಿ ಪ್ರಕಟವಾಗಿವೆ ಹಾಗೂ ಪ್ರಕಟವಾಗುತ್ತಿವೆ. ಭೂ ದೃಶ್ಯಗಳಷ್ಟೇ ಅಲ್ಲ, ರೇಖಾಚಿತ್ರಗಳು, ಪುಸ್ತಕದ ಹೊದಿಕೆಗಳು, ಭಾವಚಿತ್ರ ಹಾಗೂ ಸಂಯೋಜಿತ ಚಿತ್ರಗಳನ್ನು ರಚಿಸಿದ್ದಾರೆ.

ತಿಪ್ಪೇಸ್ವಾಮಿಯವರು 1961 ರಿಂದ 1974ರ ಒಳಗೆ ಸುಮಾರು ಒಂಬತ್ತು ಏಕವ್ಯಕ್ತಿ ಪ್ರದರ್ಶನಗಳನ್ನು ಚಿತ್ರದುರ್ಗ, ಮೈಸೂರು, ಬೆಂಗಳೂರು, ಚಳ್ಳಕೆರೆ, ಚಿಕ್ಕಬಳ್ಳಾಪುರ, ಯಳನಾಡುಗಳಲ್ಲಿ ಮಾಡಿರುವಂತೆ ತಿಳಿದುಬರುತ್ತದೆ. ಸಾಮೂಹಿಕ ಕಲಾಪ್ರದರ್ಶನಗಳಲ್ಲಿ ಇವರ ಕೃತಿಗಳನ್ನು ಇಂದಿಗೂ ಕಾಣಬಹುದು. ಸಾಮಾನ್ಯವಾಗಿ ತಾವು ರಚಿಸಿದ ಜಲವರ್ಣ ಭೂ ದೃಶ್ಯವನ್ನು ಅವರು ಮಾರಾಟ ಮಾಡುವವರಲ್ಲ. ಬಯಸಿದವರಿಗೆ ಉಚಿತವಾಗಿಯೇ ನೀಡಿಯಾರು. ಹಾಗಾಗಿ ಅನೇಕ ಸಹೃದಯರ ಮನೆಗಳಲ್ಲಿ ಇವರ ಕೃತಿಗಳು ಸೇರಿಹೋಗಿವೆ.

ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳೊಂದಿಗೆ ಇವರಿಗೆ ಸಂಪರ್ಕವಾಗಿದ್ದು, ಪರಿಷತ್ತು ಇತ್ಯಾದಿ ಸಂಘಸಂಸ್ಥೆಗಳು ಸಾಹಿತ್ಯ ಕುರಿತ ಸಮ್ಮೇಳನಗಳನ್ನು ಮಾಡಿದಾಗ ಅಲ್ಲಿಯ ಯಾವುದಾದರೂ ಒಂದು ವಿಭಾಗ ಇವರ ಉಸ್ತುವಾರಿಯಲ್ಲಿ ಇರುತ್ತವೆ. ಏನಿಲ್ಲವೆಂದರೂ ಕಲಾಪ್ರದರ್ಶನಕ್ಕಾದರೂ ಇವರ ಸಲಹೆ, ಸೂಚನೆಗಳು ಬೇಕಾಗುತ್ತವೆ. ದಸರಾ ಪ್ರದರ್ಶನ ದಾರಿ ತಪ್ಪುತ್ತಿದ್ದಾಗ ಖಂಡಿಸಿ ಲೇಖನ ಬರೆದ ಇವರಿಗೆ ಮುಂದೆ – ಇಂದಿಗೂ ಅದರ ಲಲಿತಕಲಾ ವಿಭಾಗ ಬೆನ್ನು ಹತ್ತಿಯೇ ಇದೆ. ಇನ್ನು ಜನಪದ ಕಲೆ, ಕ್ಷೇತ್ರಕಾರ್ಯ, ವಸ್ತುಸಂಗ್ರಹಾಲಯ, ಸಮ್ಮೇಳನಗಳಲ್ಲಿ ಇವರ ಕಾಣಿಕೆ ಕುರಿತು ಬೇರೆಯದೇ ಲೇಖನ ಬರೆಯಬಹುದು. ಇದೀಗ ಧರ್ಮಸ್ಥಳದ ಹೆಗಡೆಯವರ ಖಾಸಗಿ ಸಂಗ್ರಹಾಲಯವನ್ನು ಒಪ್ಪಮಾಡುವ ಕೆಲಸದಲ್ಲಿ ಕಳೆದ ಆರು ತಿಂಗಳಿನಿಂದ ಅಲ್ಲೇ ನೆಲಸಿ ದುಡಿಯುತ್ತಿದ್ದಾರೆ.

ಪಾರದರ್ಶಕ ಜಲವರ್ಣದಲ್ಲಿ ಭೂ ದೃಶ್ಯ ರಚನೆ ಅಷ್ಟು ಸುಲಭವಲ್ಲ. ತಿಪ್ಪೇಸ್ವಾಮಿಯವರು ತಮ್ಮ ಕೃತಿಗಳಿಗೆ ಸಾಮಾನ್ಯವಾಗಿ ಭಗ್ನವಾದ ಹಳೆಯ ದೇವಾಲಯಗಳು, ಕೋಟೆ–ಕೊತ್ತಲಗಳು, ಮಹಾದ್ವಾರಗಳು, ರಥದ ಬೀದಿ ಇತ್ಯಾದಿಗಳನ್ನೇ ಆರಿಸಿಕೊಳ್ಳುತ್ತಾರೆ. ಅರ್ಧ ಇಂಪೀರಿಯಲ್ ಅಳತೆಯ ಕೈಕಾಗದದಲ್ಲಿ ಅಡ್ಡವಾಗಿ ಅಥವಾ ಅದಕ್ಕೂ ಅರ್ಧದಲ್ಲಿ ಉದ್ದಕ್ಕೆ ರಚಿಸುವುದನ್ನು ಕಾಣಬಹುದು. ಕೊತ್ತಲಗಳ, ದೇವಾಲಯಗಳ ಗೋಪುರ, ರಥದ ಕಳಶ ಇತ್ಯಾದಿಗಳು ಮುಖ್ಯವಾಗಿ ಮಧ್ಯೆ ಬರುವಂತೆ ಉಳಿದೆಲ್ಲ ಅಲ್ಲಿಂದ ಹರಡಿಕೊಂಡಂತೆ ಹಿನ್ನೆಲೆಯಲ್ಲಿ ಆಕಾಶ, ಅಥವಾ ಗಿಡ–ಮರಗಳು ಮುನ್ನೆಡೆಗೆ ಒಂದಿಷ್ಟು ನೆಲದ ಭಾಗವಿರುವಂತೆ ಸಂಯೋಜಿಸಿಕೊಳ್ಳುತ್ತಾರೆ. ಈ ರೀತಿ ಸ್ಥಳಗಳನ್ನು ಆರಿಸಿಕೊಳ್ಳಲು ಕಲಾವಿದನದೇ ಆದ ಹುಡುಕು ನೋಟವಿರಬೇಕು. ಅಲ್ಲದೆ ಆ ಜಾಗದಲ್ಲಿ 2–3 ಗಂಟೆಗಳ ಕಾಲ ಕುಳಿತು ರಚಿಸಲು ಅನುಕೂಲವಿರಬೇಕು. ಎಲ್ಲಕ್ಕಿಂತ ನೆಳಲು–ಬೆಳಕುಗಳ ಅಭ್ಯಾಸ ಬೇಕು. ಕ್ಯಾಮರಾದಂತೆ ನಿಷ್ಠುರವಾಗಿ ಕಣ್ಣಿಗೆ ಬಿದ್ದುದೆಲ್ಲ ಚಿತ್ರಿಸುವಂತಿಲ್ಲ. ಬೇಡ ಎನ್ನಿಸಿದ್ದು ಬಿಡಬೇಕಾಗುತ್ತದೆ. ಗ್ರಾಮೀಣ ದೃಶ್ಯಕ್ಕೆ ಪೂರಕವಾಗಿ ಕೆಲವು ರೈತರೋ, ಹಳ್ಳಿಯ ಹೆಂಗಳೆಯರೋ, ಪಶುಪ್ರಾಣಿಗಳೋ ಅಲ್ಲಿ ಇಲ್ಲದಿದ್ದರೂ ಬಿಡಿಸುವುದುಂಟು. ಹೀಗೆ ಬಿಡುವ, ಹಾಕುವ ಅಂಶಗಳು ಇಡೀ ಚಿತ್ರಕ್ಕೆ ಪೂರಕವಾಗುವಂತೆ ಇರಬೇಕು. ಈ ಸಮತೋಲನ ಸ್ಥಿತಿ (ಬ್ಯಾಲೆನ್ಸ್) ತರುವುದು ಸ್ವಲ್ಪ ಕಷ್ಟದ ಕೆಲಸವೇ. ನಿಜಜೀವನದಲ್ಲಿ ತಿಪ್ಪೇಸ್ವಾಮಿಯವರು ಎಂತಹ ಸಮಸ್ಯೆಗಳನ್ನೂ ಸಮಚಿತ್ತದಿಂದ ನಿರ್ವಹಿಸುತ್ತಾರೆಂದು ಜೀ.ಶಂ.ಪ.ರವರು ಹೇಳುತ್ತಾರೆ. ಈ ಸಮತೋಲನವನ್ನು ಅವರ ಚಿತ್ರಗಳಲ್ಲಿಯೂ ಕಾಣಬಹುದು.

ತಿಪ್ಪೇಸ್ವಾಮಿಯವರು 1945ರಲ್ಲಿ ಮೈಸೂರಿಗೆ ಬಂದವರು. ಪ್ರಾಯಶಃ ಆಗಿನಿಂದಲೇ ಅವರು ಕಲೆ – ಕಲಾವಿದರ ಬಗ್ಗೆ ಬರೆಯಲು ಆರಂಭಿಸಿರಬೇಕು. ಅಂದಿನಿಂದ ಇಂದಿಗೂ ಶ್ರೀಯುತರು ಬರೆದ ನೂರಾರು ಲೇಖನಗಳು ಅದಕ್ಕೂ ಹೆಚ್ಚಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕಲೆ – ಕಲಾವಿದರುಗಳಲ್ಲದೆ ಬೇರೆಯ ಲೇಖನಗಳೂ ಇವೆ. ಅವರು ಚಿತ್ರಕಲೆ ಕುರಿತು ಪುಸ್ತಕ

ರೂಪದಲ್ಲಿ ತಂದಿರುವುದು ಮೂರೆಂದು ತೋರುತ್ತದೆ. 'ಕನ್ನಡ ಚಿತ್ರಕಲೆಯ ಇತಿಹಾಸ', 'ಬೆಳೆದು ಬಂದ ಭಾರತದ ಚಿತ್ರಕಲೆ' ಹಾಗೂ 'ಕಲೋಪಾಸಕರು' ಕನ್ನಡ ನಾಡಿನ ಕಲಾಸಾಹಿತ್ಯದ ಇತಿಹಾಸದಲ್ಲಿ ಈ ಪುಸ್ತಕಗಳಿಗೆ ಅವುಗಳದೇ ಆದ ಸ್ಥಾನವಿದೆ. 'ಬೆಳೆದು ಬಂದ ಭಾರತೀಯ ಚಿತ್ರಕಲೆ'ಯಲ್ಲಿ (1) ಪ್ರಾಚೀನ ಭಾರತದ ಭಿತ್ತಿಚಿತ್ರಗಳು, (2) ಆಧುನಿಕ ಚಿತ್ರಕಲೆ ಹರಿದ ದಾರಿ, (3) ದಸರಾ ಚಿತ್ರಕಲಾ ಪ್ರದರ್ಶನ ಪ್ರಗತಿ ಪಥದಲ್ಲಿದೆಯೆ? (4) ಕಲಾಪ್ರೋತ್ಸಾಹದ ಹಿರಿಯ ಆದರ್ಶ ಹಂಗೇರಿ ಹಾಗೂ ಬೆಳೆದು ಬಂದ ಭಾರತದ ಚಿತ್ರಕಲೆ ಎಂಬ ಲೇಖನಗಳಿದ್ದು, ಅವುಗಳ ತಲೆಯ ಬರಹದಿಂದಲೇ ಅವುಗಳ ವೈವಿಧ್ಯ ಮತ್ತು ವಸ್ತುವನ್ನು ಗುರುತಿಸಬಹುದು.

ಚಿತ್ರಕಲಾ ಶಿಕ್ಷಕರ ದ್ವಿತೀಯ ಸಮ್ಮೇಳನದಲ್ಲಿ ಮಾಡಿದ ಭಾಷಣವೊಂದರ ಪುಸ್ತಕ ರೂಪ 'ಕನ್ನಡ ಚಿತ್ರಕಲೆಯ ಇತಿಹಾಸ' ಆದರೆ ಕನ್ನಡ ನಾಡಿನ ಚಿತ್ರಕಲೆಯ ಇತಿಹಾಸದ ದೃಷ್ಟಿಯಿಂದ ತಿಪ್ಪೇಸ್ವಾಮಿಯವರು 'ಕಲೋಪಾಸಕರು' ತೀರಾ ಮುಖ್ಯವಾದುದು. ಇದರಲ್ಲಿ ನಲವತ್ತಾರು ಕಲಾವಿದರ ಬಗ್ಗೆ ಚಿಕ್ಕದಾದ, ಚೊಕ್ಕದಾದ ಮಾಹಿತಿಪೂರ್ಣವಾದ ಶಬ್ದಚಿತ್ರಗಳಿವೆ. ಮೈಸೂರಿನ ಹಳೆಯ ತಲೆಮಾರಿನ ಕಲಾವಿದರು, ಚಾಮರಾಜ ಕಲಾಶಾಲೆ, ಅರಮನೆ – ರಾಜಾಶ್ರಯ ಜೆ.ಜೆ.ಶಾಲೆ ಇತ್ಯಾದಿಗಳಿಂದ ಹಿಡಿದು ಕಲಾವಿದರ ವೈಯಕ್ತಿಕ ಜೀವನ, ಕಲಿತ ಶಾಲೆ ಗುರುಗಳು, ಹುಟ್ಟಿ ಬೆಳೆದ ಪರಿಸರ, ಮನೋಭಾವ, ಕಷ್ಟ–ನಷ್ಟಗಳು, ವೈಚಾರಿಕತೆಗಳು, ನಿಂದನೆ, ಪ್ರಶಸ್ತಿಗಳು ಇತ್ಯಾದಿಗಳ ಬಗ್ಗೆ ಪ್ರಥಮ ವಿಶ್ವಸನೀಯ ಮಾಹಿತಿ ಇಲ್ಲಿ ದೊರೆಯುತ್ತದೆ. ನವ್ಯಕಲೆ ಕರ್ನಾಟಕಕ್ಕೂ ಕಾಲಿರಿಸುತ್ತಿದ್ದಾಗ ಅದರ ಬಗ್ಗೆ ಇದ್ದ ತಿರಸ್ಕಾರ, ಸ್ವಾಗತಗಳನ್ನು ಇಲ್ಲಿ ದಾಖಲುಗೊಳಿಸಿದೆ. ಕಾರಣಾಂತರಗಳಿಂದ ಹಲವಾರು ಪ್ರತಿಷ್ಠಿತ ಕಲಾವಿದರ ದಾಖಲೆ ಇಲ್ಲಿ ಬಿಟ್ಟುಹೋಗಿದೆಯಾದರೂ, ಕೆಲವು (ಈಗಿಲ್ಲದ) ಕಲಾವಿದರ ಬಗ್ಗೆ ಇಲ್ಲಿಯೂ ದಾಖಲಾಗಿಲ್ಲದೇ ಹೋಗಿದ್ದರೆ ಅವರು ಇತಿಹಾಸದಿಂದಲೇ ಕಣ್ಮರೆಯಾಗಿಬಿಡುತ್ತಿದ್ದರು.

"ಚಿತ್ರಕಲಾಕೋವಿದ", "ಚಿತ್ರಲೇಖನ ಚದುರ", "ಚಿತ್ರ ಕಲಾರತ್ನ", "ಚಿತ್ರ ಕಲಾ ಪ್ರವೀಣ" ಇತ್ಯಾದಿ ಬಿರುದುಗಳನ್ನು ಕರ್ನಾಟಕ ರಾಜ್ಯ ಹಾಗೂ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳನ್ನೂ ಪಡೆದಿರುವ ಶ್ರೀಯುತ ತಿಪ್ಪೇಸ್ವಾಮಿಯವರಿಗೆ ಹತ್ತಕ್ಕೂ ಹೆಚ್ಚು ಮಠ, ಸಂಸ್ಥೆ, ಶಾಲೆ ಇತ್ಯಾದಿಗಳು ಸನ್ಮಾನ ಮಾಡಿದೆಯಲ್ಲದೆ ಇನ್ನೂ ಹತ್ತು ಸಂಸ್ಥೆಗಳು ಬಿನ್ನವತ್ತಳೆ ಅರ್ಪಿಸಿದೆ.


ಒಬ್ಬ ಕಲಾವಿದ, ಕಲಾವಿಮರ್ಶಕ, ಸಹೃದಯರಾಗಿ ಇಷ್ಟೊಂದು ಜನಪ್ರಿಯರಾಗಿರುವ ತಿಪ್ಪೇಸ್ವಾಮಿಯವರ ಕೃತಿಗಳನ್ನು ಒಂದೆಡೆ ತರುವುದು ತೀರಾ ಅಗತ್ಯವಾಗಿದೆ.

ಅ. ಲ. ನರಸಿಂಹನ್



ಅರುವಿನ ಮನೆ – ಬಸವ ಕಲ್ಯಾಣ

ಎಸ್. ನರಸಿಂಹಾಚಾರ್



ಕರ್ನಾಟಕದ ಪ್ರಸಿದ್ಧ ಶಿಲ್ಪಿಗಳಾದ ಮೈಸೂರಿನ ಸಿದ್ಧಲಿಂಗಸ್ವಾಮಿಗಳಲ್ಲಿ ಕಲಿತು ಖ್ಯಾತರಾದ ಪ್ರತಿಭಾವಂತ ಶಿಲ್ಪಿಗಳಲ್ಲಿ ಎಸ್.ನರಸಿಂಹಚಾರ್ ಒಬ್ಬರು. 1915ರಲ್ಲಿ ಮೈಸೂರಿನಲ್ಲಿ ಜನಿಸಿದ ನರಸಿಂಹಾಚಾರ್ಯರ ತಂದೆ ಸೋಮಾಚಾರ್ ಚಿನ್ನ, ಬೆಳ್ಳಿಯ ಕೆಲಸದಲ್ಲಿ ಕುಶಲಿ. ಬಡತನದ ಬೇಗುದಿಗೆ ಸಿಕ್ಕಿದ, ಕುಟುಂಬದ ನಿರ್ವಹಣೆಗಾಗಿ, ತಿಂಗಳಿಗೆ ಕೇವಲ ಎರಡು ರೂಪಾಯಿ ಕೂಲಿಗೆ ಕಷ್ಟದ ಕೆಲಸ ಮಾಡಬೇಕಿತ್ತು. ಎಳೆಯ ವಯಸ್ಸಿನಲ್ಲಿಯೇ ಇಟ್ಟಿಗೆ ಗಾರೆ ಹೊರಲಾರಂಭಿಸಿದ ನರಸಿಂಹಚಾರ್‌ರವರಿಗೆ ಬದುಕಿನ ಕರಾಳ ಮುಖದ ಪರಿಚಯವೂ ಆಗಿ, ಪಕ್ವ ಮನಃಸ್ಥಿತಿಯನ್ನು ಹೊಂದಲು ಸಾಧ್ಯವಾಯಿತು.

ತಂದೆಯಿಂದ ಬಳುವಳಿಯಾಗಿ ಬಂದಿದ್ದ ಕಲಾಸಂಸ್ಕಾರದ ಫಲವಾಗಿ ಶಿಲ್ಪ ಕಲೆಯನ್ನೇ ಮನಸ್ಸು ಚಿಂತಿಸುತ್ತಿತ್ತು. ದಿನನಿತ್ಯದ ಕಷ್ಟದ ಬದುಕಿನಿಂದ ಪಾರಾಗಿ, ಶಿಲ್ಪಕಲೆ ಕಲಿಯುವ ತೀವ್ರ ಹಂಬಲ. ತಾಯಿಯಲ್ಲಿ ಅದನ್ನು ತೋಡಿಕೊಂಡು ಹನ್ನೊಂದನೆಯ ವಯಸ್ಸಿನಲ್ಲಿ ಚಾಮರಾಜೇಂದ್ರ ಕಲಾಶಾಲೆ ಪ್ರವೇಶಿಸಿದರು. ಅಲ್ಲಿ ಮರಗೆತ್ತನೆ ವಿಭಾಗದ ಉಪಾಧ್ಯಾಯರಾಗಿದ್ದ ಜವರಾಯಾಚಾರ್ಯರಲ್ಲಿ ಕಲಿಯಲಾರಂಭಿಸಿ, ಅಲ್ಪ ಸಮಯದಲ್ಲಿಯೇ ಅವರ ಅಭಿಮಾನಕ್ಕೆ ಪಾತ್ರರಾದರು.

ಮರದ ಮೂರ್ತಿ ಶಿಲ್ಪಕ್ಕೆ ಮೂಲಭೂತ ಅಂಶವಾಗಿದ್ದ ರೇಖಾಭ್ಯಾಸವನ್ನು ಸುಪ್ರಸಿದ್ಧ ಕಲಾವಿದರಾಗಿದ್ದ ಲಕ್ಷ್ಮಣ ಕೃಷ್ಣರಾಯರಲ್ಲಿ ಕಲಿತರು. ಗುರುವಿನ ಮನೆಯಲ್ಲಿ ಗುರುಗಳ ಕೈಚಳಕ, ಅದರಲ್ಲಿ ಮೂಡುತ್ತಿದ್ದ ಭಾವ–ಭಂಗಿಗಳು, ರೇಖಾವಿನ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಸತತ ಪರಿಶ್ರಮ, ಜನ್ಮದತ್ತ ಪ್ರತಿಭೆಗಳ ಫಲವಾಗಿ ಕಲಾಪ್ರೌಢಿಮೆ ಬೆಳೆಸಿಕೊಂಡ ನರಸಿಂಹಾಚಾರ್‌ರವರು ತಮಗೆ ರೇಖಾಚಿತ್ರ ಜ್ಞಾನ ಕಲಿಸುತ್ತಿದ್ದ ಗುರು ಮಲಗಿದ ಮೇಲೆ, ತಾವು ಹಣತೆಯ ಮುಂದೆ ಕುಳಿತು ವಿಗ್ರಹಗಳ ರೇಖೆಗಳನ್ನು ನಕಲು ಮಾಡುವುದರಲ್ಲಿ ತಲ್ಲೀನರಾಗುತ್ತಿದ್ದರು. ಮುಂದೆ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಹಂಗಾಮಿ ಕೆಲಸಗಾರರಾಗಿ ಸೇರಿಕೊಂಡರು. ಅಲ್ಲಿ ಇವರ ಕೃತಿಗಳು ಶಿಕ್ಷಕರಾಗಿದ್ದ ಮುಖ್ಯೋಪಾಧ್ಯಾಯ ರಾಮಸ್ವಾಮಿ ಅಯ್ಯಂಗಾರ್ ಮತ್ತು ಖ್ಯಾತ ಕಲಾವಿದ ಪಾವಂಜೆಯವರುಗಳಿಂದ ಮೆಚ್ಚುಗೆಗೆ ಪಾತ್ರವಾದುವು. ಕೆತ್ತನೆ ವಿಭಾಗದ ಗುರು· ಜವರಾಯಾಚಾರ್ಯರು ನಿವೃತ್ತರಾದ ನಂತರ, ಆ ವೇಳೆಗಾಗಲೇ ತೃಪ್ತಿಕರ ಮಟ್ಟಮುಟ್ಟಿದ್ದ ನರಸಿಂಹಾಚಾರ್‌ರವರು ಅವರ ಸ್ಥಾನವನ್ನು ತುಂಬಿದರು.

ಬಾಲ್ಯದಲ್ಲಿ ಇಟ್ಟಿಗೆ ಹೊತ್ತ ನರಸಿಂಹಾಚಾರ್‌ರವರ ತಲೆ ಕಟ್ಟಿಗೆಯ ಮೂರ್ತಿಯನ್ನು ಕಲ್ಪಿಸಿದರೆ, ಗಾರೆ ಹಿಡಿತಕ್ಕೆ ಸುಂದರ ಶಿಲ್ಪ ಮೂಡಲು ಕಾರಣವಾಯಿತು. ಒರಟು ತುಂಡುಗಳಲ್ಲೂ ನಯವಾದ ಮೋಹಕ ಶಿಲ್ಪಗಳ ಸೃಷ್ಟಿಯಲ್ಲಿ ಖ್ಯಾತರೆನ್ನಿಸಿದರು. ಮರದ ಕೆತ್ತನೆ ಅನುಭವ ಶಿಲಾ ಶಿಲ್ಪದತ್ತ ಅವರನ್ನು ಸೆಳೆಯಿತು. ಅಂದಿನ ಖ್ಯಾತ ವ್ಯಕ್ತಿ ಶಿಲ್ಪಿ ಸಿದ್ಧಾಂತಿ ಸಿದ್ಧಾಲಿಂಗಸ್ವಾಮಿಗಳ ಬಳಿ ಕಲಿತು ಆಶ್ಚರ್ಯವೆನ್ನಿಸುವಂತಹ ಬೆಳವಣಿಗೆಯನ್ನು ಪ್ರದರ್ಶಿಸಿದರು. ಹೊಯ್ಸಳ ಶೈಲಿಯ ಶಿಲ್ಪ ಸೃಷ್ಟಿ ಅವ್ಯಾಹತವಾಗಿ

ಸಾಗಿತು. ಈ ಶೈಲಿಯ 'ಶಂಕರಾಚಾರ್ಯ' ವಿಗ್ರಹ ಮತ್ತು ಹುಣಸೂರು ದೇವಾಲಯದಲ್ಲಿರುವ ನವಗ್ರಹ ಮೂರ್ತಿಗಳು ಅಪೂರ್ವ ಕೃತಿಗಳು ನಜರ್‌ಬಾದಿನಲ್ಲಿದೆ (ಮೈಸೂರು). ನಜರ್‌ಬಾದಿನಲ್ಲಿರುವ ಇವರ ಹಲವಾರು ಕೃತಿಗಳಿಗೆ ಬಹುಮಾನಗಳೂ ಸಂದಿವೆ. ಇವರ ಶಿಲ್ಪಗಳು ದೇಶ–ವಿದೇಶಗಳಲ್ಲಿ ಸಂಗ್ರಹವಾಗಿವೆ. ದೆಹಲಿಯ ಕರ್ನಾಟಕ ಭವನದ ಮರದ ಬಾಗಿಲವಾದ ಹೊಯ್ಸಳ ಶೈಲಿಯಲ್ಲಿದ್ದು ಆಕರ್ಷಕವಾಗಿದೆ. ಹೆಗ್ಗಡದೇವನಕೋಟೆಯ ಸಾಲಿನಲ್ಲಿ ಹಂಪಾಪುರ, ಮದ್ದೂರುಗಳ ಬಳಿ ಸಿಗುವ ಕೃಷ್ಣಶಿಲೆಯನ್ನು ತಮ್ಮ ಶಿಲ್ಪ ಸೃಷ್ಟಿಗೆ ಹೆಚ್ಚಾಗಿ ಬಳಸುವ ನರಸಿಂಹಾಚಾರ್‌ರವರು ಆಧುನಿಕ ಶಿಲ್ಪಕಲಾ ಪ್ರವಾಹದ ಪರಿಚಯವಿಲ್ಲ, ಅಭಿರುಚಿಯೂ ಇಲ್ಲವೆನ್ನುತ್ತಾರೆ.

1980ರಲ್ಲಿ ರಾಷ್ಟ್ರಪ್ರಶಸ್ತಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳನ್ನು ಪಡೆದಿರುವ ನರಸಿಂಹಾಚಾರ್ ಇಂದಿಗೂ ಹೊಯ್ಸಳ ಶಿಲ್ಪಕಲೆಯ ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನು ತುಂಬುತ್ತಿದ್ದಾರೆ.


ಕೆ. ವಿ. ಸುಬ್ರಹ್ಮಣ್ಯ

ಎಸ್. ನರಸಿಂಹಾಚಾರ್



ಗಣೇಶ

ಆರ್. ಎಸ್. ನಾಯ್ಡು



ಅಸಾಧಾರಣ ಪ್ರತಿಭಾಶಾಲಿ, ಕಲಾ ಸಾಧಕ, ಕ್ರಾಂತಿಯ ಕಾವಿನಿಂದ ಕೂಡಿದ ಕಲಾವಿದ, ಸ್ವಾತಂತ್ರ್ಯಯೋಧ, ವಿಚಾರವಾದಿ, ಜ್ಞಾನಿ, ಬುದ್ಧಿಜೀವಿ ಎಂಬ ಹಲವಾರು ವಿಶೇಷಣಗಳಿಗೆ ಸರಿಹೊಂದುವ ರಂಗಸ್ವಾಮಿ ಸೀತಾಪತಿ ನಾಯ್ಡು, ಆರ್.ಎಸ್.ಎನ್. ಎಂದೇ ಕಲಾವಲಯಗಳಲ್ಲಿ ಖ್ಯಾತರಾಗಿದ್ದವರು. ನಾಯ್ಡು ಎಂದರೆ ಚಿತ್ರ ಹಾಗೂ ಶಿಲ್ಪಕಲೆ ಸಂಗಮವೆಂದೇ ಹೇಳಬಹುದು. ಅವರದೇ ಆದ ಪ್ರತ್ಯೇಕತೆಯೊಂದನ್ನು ಚಿತ್ರಶಿಲ್ಪಗಳಲ್ಲಿ ಕಾಯ್ದುಕೊಂಡು ಬಂದವರಲ್ಲದೆ, ವೈವಿಧ್ಯಮಯವಾಗಿ ಅಭಿವ್ಯಕ್ತಿಸುವ, ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದವರಾಗಿ ಇಂದು ಗಮನಾರ್ಹವೆನಿಸುತ್ತಾರೆ.

1906ರಲ್ಲಿ ನಾಯ್ಡು ಬೆಂಗಳೂರಿನಲ್ಲಿ ಹುಟ್ಟಿದರಾದರೂ, ವೇಲೂರು, ತಿರುಚಿನಾಪಳ್ಳಿ, ಧಾರವಾಡ, ಪೂನಾ ನಗರಗಳ ಜೊತೆ ಬೆಂಗಳೂರಿನಲ್ಲೂ ವಿದ್ಯಾಭ್ಯಾಸ ಮಾಡಿದರು. ವಿದ್ಯಾರ್ಥಿ ಜೀವನದಲ್ಲಿ ಉತ್ತಮ ವಾಗ್ಮಿ, ಕ್ರೀಡಾಪಟು ಮತ್ತು ಉತ್ಸಾಹೀ ವಿದ್ಯಾರ್ಥಿ ನಾಯಕನಾಗಿದ್ದರು. ಪೂನಾ ಫರ್ಗೂಸನ್ ಕಾಲೇಜಿನ ವ್ಯಾಸಂಗದ ಅವಧಿಯಲ್ಲಿ ಯುವ ಕಾಂಗ್ರೆಸ್ ಸಂಸ್ಥೆ ಕಟ್ಟಿದರಲ್ಲದೆ 1931ರಲ್ಲಿ ಸ್ವಾತಂತ್ರ್ಯ ಸಮರದಲ್ಲಿ ಯೋಧನಾಗಿ ಪ್ರವೇಶಿಸಿ 15 ತಿಂಗಳು ಜೇಲು ವಾಸ ಅನುಭವಿಸಿದರು. ಮತ್ತೆರಡು ಬಾರಿ ಇದೇ ಶಿಕ್ಷೆ ಅನುಭವಿಸಿದರು. 1939ರಲ್ಲಿ ಯರವಾಡ ಜೇಲಿನಲ್ಲಿದ್ದ ನಾಯ್ಡು ಅಲ್ಲಿನ ಪಕ್ಷಪಾತಗಳನ್ನು ಪ್ರತಿಭಟಿಸಿ, ಅದೇ ಜೇಲಿನಲ್ಲಿದ್ದ ಗಾಂಧೀಜಿಯವರಿಂದ ಶಾಂತಿ ಉಪದೇಶ ಪಡೆದದ್ದೂ ಉಂಟು.

ಆದರೂ ಅಲ್ಲಿದ್ದ ಜರ್ಮನ್ ಪತ್ರಿಕೋದ್ಯಮ ಮಿತ್ರರ ಸ್ನೇಹದಿಂದ ಸದಾ ಚುಟ್ಟಾ ಸೇದುವುದರಲ್ಲಿ ಅಗ್ರಗಣ್ಯರಾದರು.

ನಂತರ ವಾಮಪಂಥದವರ ನಿಕಟ ಸಂಪರ್ಕ ಮತ್ತು ದೀನದಲಿತರ ಬಗೆಗೆ ಅನುಕಂಪ ಇವುಗಳಿಂದ ಹುಟ್ಟಿದ ಅನುಭೂತಿಯು ಶಿಲ್ಪ ಮತ್ತು ಚಿತ್ರಗಳ ಮೂಲಕ ಅರಳಲಾರಂಭಿಸಿತು. ಜೇಲಿನಿಂದ ಹೊರಬಂದ ಕಾಲದಲ್ಲಿಯೇ ಬದಲಾಗಿದ್ದ ನಾಯ್ಡು ಮುಂಬಯಿಯಲ್ಲಿ ಭಗ್ನಪ್ರೇಮಿಯಾಗಿ ಮನದ ತಳಮಳಗಳನ್ನು ಮರೆಯಲು ಪುಸ್ತಕಗಳ ಮೊರೆಹೊಕ್ಕರು. ಕ್ರಾಂತಿಕಾರಿಗಳ ಸಹವಾಸ–ನಡವಳಿಕೆಗಳಿಂದ ಭೂಗತ ಚಳವಳಿಗಳಲ್ಲಿ ಸೇರಿ ಕ್ರಾಂತಿವೀರರ ಚರಿತ್ರೆಯ ಅಧ್ಯಯನ ಮಾಡಿದ್ದು ಸಾಕಷ್ಟು ಪ್ರಭಾವ ಬೀರಿತು. ಜೇಲು ಶಿಕ್ಷೆ, ಏಕಾಂತ ಜೀವನ, ಪ್ರೀತಿಯ ಜೊತೆ ಏಕ ಪ್ರಕಾರ ಕೃತಿ ರಚನೆಯಾಗತೊಡಗಿತು.

ನಾಸಿಕದ ಬಂದೀಖಾನೆಯಲ್ಲಿ ನಾಯ್ಡು ರಚಿಸಿದ ಆಳೆತ್ತರದ ಲೆನಿನ್ ಮೂರ್ತಿಯನ್ನು ಜೇಡಿಮಣ್ಣಿನಲ್ಲಿ ರಾತ್ರಿಯೆಲ್ಲಾ ನಿದ್ದೆಗೆಟ್ಟು ಸೃಷ್ಟಿಸಿದಾಗ ಅಂಕುರಾರ್ಪಣವಾಗಿ, ಅವರಲ್ಲಿ ಸುಪ್ತವಾಗಿದ್ದ ಕಲಾ ಪ್ರತಿಭೆ ನಂತರ ನೂರಾರು ಶಿಲ್ಪ, ಸಾವಿರಾರು ರೇಖಾ ಚಿತ್ರ ಹಾಗೂ ವರ್ಣ ಚಿತ್ರಗಳಲ್ಲಿ ಮೂರ್ತೀಭವಿಸಿದೆ. ಅವರು ರಚಿಸಿದ ಪ್ಲಾಸ್ಟರ್ ಮಾಧ್ಯಮದ ಉಬ್ಬಚ್ಚಿನ ಭಾವ ಚಿತ್ರಗಳಾಗಲೀ, ಶಿಲ್ಪಗಳಾಗಲೀ, ಜೀವಂತವಾಗಿರುವಂತೆ ಭಾಸವಾಗುತ್ತವೆ. ಲೆನಿನ್, ಗಾರ್ಕಿ, ಮುಸಲೋನಿ, ಗಾಂಧಿ, ಬುದ್ಧ, ಶಿವ, ಕ್ರಿಸ್ತ, ಬೇಂದ್ರೆ, ಕುವೆಂಪು, ಕೈಲಾಸಂ, ಷಾ ಮೊದಲಾದವರ ಕೃತಿಗಳು


ಈ ಮಾತುಗಳಿಗೆ ಉದಾಹರಣೆಗಳಂತಿವೆ. ಯಾವ ಕಲಾ ಶಾಲೆಯಲ್ಲೂ, ಯಾವ ಗುರುವಿನಲ್ಲೂ ಅಭ್ಯಾಸ ಮಾಡದೆ ಸ್ವಶಕ್ತಿಯಿಂದ ರೂಢಿಸಿಕೊಂಡ ಕಲೆ ಇವರದಾಗಿದೆ.

ಸರಳ ವ್ಯಕ್ತಿತ್ವದ ತೀವ್ರ ಕ್ರಾಂತಿಕಾರೀ ಮನೋಭಾವದ ನಾಯ್ಡುರವರ ಚಿತ್ರಗಳಲ್ಲಿ ತೀಕ್ಷ್ಣತೆ ಇದೆ, ಬದುಕಿನ ವಿಡಂಬನೆ, ವೇದನೆಗಳಿವೆ, ಶೈಲಿಗಳ ಬಾಹುಳ್ಯವಿದೆ. ಅವರ ರೇಖೆಗಳು ಅವರ ಮನೋಭಾವದ ಪ್ರತಿರೂಪದಂತೆ ಕ್ರಾಂತಿಗಾಗಿ ಬಾರಿಸಿದ ಚಂಡೆ–ಮದ್ದಲೆಗಳ ಬಡಿತದ ವೀರ್ಯವಂತಿಕೆಯನ್ನು ಹೊಂದಿವೆ; ಕೆಲವೊಮ್ಮೆ ತಲ್ಲಣಗೊಂಡ ಕವಿಯೊಬ್ಬನ ಕಾವ್ಯಮಯ ಭಾವವನ್ನೂ ಅಭಿವ್ಯಕ್ತಿಸುತ್ತವೆ. ಅದ್ಭುತ ನಿರೂಪಣೆ, ಗತಿ, ವಿನ್ಯಾಸಗಳನ್ನು ಸೂಚಿಸುವ ಮಿತವ್ಯಯದ ನೂತನ ಶೈಲಿಯ ಉತ್ತಮ ಸಾಮರಸ್ಯ ಕಂಡುಬರುತ್ತದೆ. ಅವರ ವ್ಯಂಗ್ಯ ಚಿತ್ರಗಳ ವಿಡಂಬನೆ ಅಪರೂಪ. ಸಮಾಜದ ಪ್ರೀತಿಯಿಂದ ಸರ್ಕಾರವನ್ನು ಟೀಕಿಸಲು ಈ ಮಾಧ್ಯಮವನ್ನವರು ಯಶಸ್ವಿಯಾಗಿ ದುಡಿಸಿಕೊಂಡರು. ಕೆಲವೇ ರೇಖೆಗಳಲ್ಲಿ, ತುಟಿ ಹಾಗೂ ಕಣ್ಣಂಚಿನಲ್ಲಿ, ಹಣೆಯ ನೆರಿಗೆಯಲ್ಲಿ ರೇಖಿಸುತ್ತಿದ್ದ ಒಂದೆರಡು ಕೊಂಕುಗಳು, ಗೆರೆ, ಬಿಂದುಗಳು ಇಡೀ ಚಿತ್ರಕ್ಕೆ ಒಂದು ರೀತಿಯ ಶಕ್ತಿಯನ್ನು ನೀಡುತ್ತಿತ್ತು. ವಿದೇಶಗಳಲ್ಲೂ ಪ್ರಶಂಸೆ ಗಳಿಸಿದ್ದ 'ವಿಕ್ಟೋರಿಯಲ್ ಎಕನಾಮಿಕ್ಸ್' ಪ್ರಕಟಣೆಗಳಲ್ಲಿ ನಾಯ್ಡುರವರ ವ್ಯಂಗ್ಯ ಚಿತ್ರಗಳ ಪಾತ್ರ ಅಮೂಲ್ಯ. ಅವರ ಕ್ರಾಂತಿಕಾರಿ ಚಿತ್ರಗಳು 'ಭಾರತ ಜ್ಯೋತಿ', 'ಹಿಂದೂ' ಮೊದಲಾದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದ ನಂತರ ಅವು ವಿದೇಶೀ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯಲ್ಲಿ ಮರು ಮುದ್ರಣ ಕಾಣುತ್ತಿದ್ದುವಲ್ಲದೆ ಭಾರತದ ಇತರ ಭಾಷಾ ಪತ್ರಿಕೆಗಳಲ್ಲೂ ಕಾಣಿಸಿಕೊಳ್ಳುತ್ತಿದ್ದವು. ಬೆಂಗಳೂರಿನಲ್ಲಿ ವಾಸವಾಗಿದ್ದಾಗ ಇವರ ವ್ಯಂಗ್ಯ ಚಿತ್ರಗಳು 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳಲ್ಲೂ ಪ್ರಕಟವಾದವು.

1956ರ ವೇಳೆಗೆ ಮೈಸೂರಿಗೆ ಧಾವಿಸಿದ ನಾಯ್ಡು, ಅಲ್ಲಿಯ ಕಾರ್ಮಿಕರ ನಡುವೆ ಸರಳ ಜೀವನ ನಡೆಸಲಾರಂಭಿಸಿದರು. ದಿನಾಂಕ 6–10–1985ರಲ್ಲಿ ಇಹಲೋಕ ತ್ಯಜಿಸುವವರೆಗೆ ತಮ್ಮ 80 ವರ್ಷಗಳ ಬ್ರಹ್ಮಚಾರಿ ಜೀವನದಲ್ಲಿ ಯಾರೊಬ್ಬರ ಹಂಗನ್ನೂ ಅವಲಂಬಿಸದೆ ಸರಳ, ಪ್ರಾಮಾಣಿಕ ಜೀವನ ನಡೆಸುತ್ತ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದ ನಾಯ್ಡು ಪ್ರಶಸ್ತಿಗಳನ್ನು ಎಂದೂ ಬಯಸಿದವರಲ್ಲ. ಕಲಾವಿದರನ್ನು, ಕಲೆಯನ್ನು ಪ್ರೀತಿಸುತ್ತಿದ್ದ ಇವರ ಬಳಿಗೇ ಸಾಹಿತ್ಯ ಪರಿಷತ್ತು, ವ್ಯಂಗ್ಯ ಚಿತ್ರಕಾರರ ಸಂಸ್ಥೆಗಳು ಬಂದು ಸನ್ಮಾನಿಸಿದುವಲ್ಲದೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿಗಳೂ ದೊರೆತವು. ನಾಯ್ಡುರವರ ಕೃತಿಗಳು ಅವರ ಗಾಢ ರಾಷ್ಟ್ರ ಪ್ರೇಮ, ವಾಮಪಂಥದ ಬಗ್ಗೆ ಇದ್ದ ಒಲವು, ಸಂಸ್ಕೃತಿಯ ಅಭಿಮಾನ ಪ್ರಗತಿಶೀಲ ದೃಷ್ಟಿ–ಮಿಗಿಲಾಗಿ ಸಾಮಾನ್ಯರು ಅದರಲ್ಲಿಯೂ ದಲಿತ ವರ್ಗದ ಬಗೆಗೆ ಅನುಕಂಪಗಳ ಪ್ರತೀಕದಂತಿವೆ.

ಕೆ. ವಿ. ಸುಬ್ರಹ್ಮಣ್ಯ

ಆರ್.ಎಸ್. ನಾಯ್ಡು



ಸ್ವ ವ್ಯಂಗ್ಯಚಿತ್ರ

ಸಿ. ಎನ್. ಪಾಟೀಲ್



ಕರ್ನಾಟಕದ ಹಿರಿಯ ಕಲಾಚಾರ್ಯ ಸಿ.ಎನ್. ಪಾಟೀಲ್ ಹುಟ್ಟಿದುದು ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ನಿಟ್ಟೂರು. ತಂದೆ ನಿಂಗನಗೌಡರು ನಿಟ್ಟೂರಿನ ಪ್ರಮುಖರೂ ವತನದಾರರೂ ಆಗಿದ್ದವರು. 1923ರಲ್ಲಿ ಹುಟ್ಟಿದ ಸಿ.ಎನ್. ಬಾಲ್ಯಾವಸ್ಥೆಯಲ್ಲಿಯೇ ಚಿತ್ರಕಲೆಯ ಗೀಳಿಗಂಟಿಕೊಂಡವರಾಗಿದ್ದರು.

ಅಸಾಮಾನ್ಯ ವಾಕ್ಚಾತುರ್ಯವುಳ್ಳ ಶ್ರೀ ಪಾಟೀಲ ಅಂದು ರಾಜಕೀಯ ಕ್ಷೇತ್ರಕ್ಕಿಳಿದಿದ್ದರೆ ಇಂದೊಬ್ಬ ಪ್ರಭಾವೀ ಮುಖಂಡರಾಗುತ್ತಿದ್ದರೇನೋ. ಆದರೆ ಕಲಾಲಕ್ಷ್ಮಿ ಅವರನ್ನು ತನ್ನ ಸೇವೆಗೆ ಸೆಳೆದುಕೊಂಡಳು; ಕನ್ನಡಕ್ಕೊಬ್ಬ ಕಲಾವಿದನನ್ನು ನೀಡಿದಳು.

ನಾಲ್ಕನೇ ತರಗತಿಯ ಬಾಲಕನಾಗಿದ್ದ ಮಾತುಗಾರ ಸಿ.ಎನ್. ಅಂದಿನ ಮುಂಬಯಿ ಪ್ರಾಂತದ ಶಿಕ್ಷಣ ಸಚಿವರಾಗಿದ್ದ ಸರ್. ಸಿದ್ಧಪ್ಪ ಕಂಬಳಿ ಅವರ ಭಾವಚಿತ್ರವನ್ನು ರಚಿಸಿ ಅವರಿಂದ ಶಹಭಾಷ್‌ಗಿರಿಯನ್ನೂ, ಪಾರಿತೋಷಕವನ್ನೂ ಪಡೆದರು. ಈ ಪ್ರಶಂಸೆಯಿಂದ ಉತ್ತೇಜಿತರಾದ ಸಿ.ಎನ್. “ನಾನೊಬ್ಬ ಕಲಾವಿದನೇ ಆಗಬೇಕು” ಎಂದು ಮನಸ್ಸು ಗಟ್ಟಿ ಮಾಡಿಕೊಂಡು ಕಲಾಭ್ಯಾಸಕ್ಕಾಗಿ ಗುರುವನ್ನು ಅರಸಿಕೊಂಡು ಗದುಗಿಗೆ ಬಂದರು. ಅಂದು ಕಲಾಶಾಲೆಯಿರಲಿಲ್ಲ. ಆದರೆ ಅಕ್ಕಿ ಅವರಿದ್ದರು. ಅಕ್ಕಿ ಅವರು ಸಿ.ಎನ್. ಪಾಟೀಲರನ್ನು, ಇಂದು ಪ್ರಖ್ಯಾತ ಚಲನಚಿತ್ರ ನಟರಾದ ವಸಂತ ಸಾಕೋಡ ಅವರನ್ನೂ ರಾಯಲ್ ಏರ್‌ಫೋರ್ಸ್ ತರಬೇತಿಗಾಗಿ ಬೆಂಗಳೂರಿನ ಜಾಲಹಳ್ಳಿ ಕ್ಯಾಂಪಿಗೆ ಕಳುಹಿಸಿದರು. ಕ್ಯಾಂಪಿನಲ್ಲಿ ಸಿ.ಎನ್. ಅವರು ಚಿತ್ರಿಸುತ್ತಿದ್ದ ಚಿತ್ರಗಳನ್ನು ಕಂಡ ಉಚ್ಚ ಅಧಿಕಾರಿಗಳು ಈತನಿಗೆ ಯುಕ್ತವಾದುದು ಸೇನೆಯ ಕ್ಷೇತ್ರವಲ್ಲ ಎಂದು ಸಿ.ಎನ್. ಅವರನ್ನು ಸೇನಾ ಸೇವೆಯಿಂದ ಬಿಡುಗಡೆ ಮಾಡಿ ಕಳುಹಿಸಿದರು. ನಿರುಪಾಯರಾದ ಸಿ.ಎನ್. ಅಕ್ಕಿಯವರಲ್ಲಿಗೇ ಮರಳಿ ಬಂದರು. ‘ಇವನು ಕಲಾವಿದನೇ ಆಗಬೇಕೆಂದು ದೈವ ಸಂಕಲ್ಪವಿದ್ದಂತಿದೆ’ ಎಂಬ ನಿರ್ಧಾರಕ್ಕೆ ಬಂದ ಅಕ್ಕಿಯವರು ಸಿ.ಎನ್. ಪಾಟೀಲರಿಗೆ “ಶಿರಸಂಗಿ ಲಿಂಗರಾಜ ಫಂಡ್” ದೊರೆಯುವಂತೆ ಮಾಡಿ ಮುಂಬಯಿಯ ಸರ್. ಜೆ.ಜೆ. ಕಲಾಶಾಲೆಗೆ ಕಳಿಸಿದರು; ಸಿ.ಎನ್. ಪಾಟೀಲರ ಪಾಲಕರೂ ಆಗಿ ಪೋಷಿಸುವ ಭಾರವನ್ನೂ ಹೊತ್ತರು. ಸಿ.ಎನ್. ಪಾಟೀಲರು ತಮ್ಮ ಸೃಜನಶೀಲ ಪ್ರತಿಭೆಯಿಂದ 1949ರಲ್ಲಿ ಜೆ.ಜೆ. ಕಲಾಶಾಲೆಯ ಉನ್ನತ ಕಲಾವ್ಯಾಸಂಗದ ಅಡ್ವಾನ್ಸ್ ಪರೀಕ್ಷೆಯನ್ನೂ, ಚಿತ್ರಕಲಾ ಶಿಕ್ಷಕ ತರಬೇತಿಯನ್ನೂ ಉಚ್ಚ ಶ್ರೇಣಿಯಲ್ಲಿ ಪಾಸಾಗಿ ಗದುಗಿಗೆ ವಾಪಾಸಾದರು. ಈ ವೇಳೆಗಾಗಲೇ ಅಕ್ಕಿಯವರು ಗದಗಿನಲ್ಲಿ ವಿಜಯ ಕಲಾಮಂದಿರವನ್ನು ಪ್ರಾರಂಭಿಸಿದ್ದ ಪ್ರಯುಕ್ತ ಈ ನೂತನ ಕಲಾಶಾಲೆಯ ಪ್ರಾಚಾರ್ಯ ಪಟ್ಟವನ್ನು ಪಾಟೀಲರಿಗೇ ಕಟ್ಟಿದರು. 1950ರಲ್ಲಿ “ಆರ್ಟ್ ಮಾಸ್ಟರ್” ಮತ್ತು 1951ರಲ್ಲಿ “ಡಿಪ್ಲೋಮಾ ಪೇಂಟಿಂಗ್” ಪರೀಕ್ಷೆಗಳನ್ನು ಉಚ್ಚ ಶ್ರೇಣಿಯಲ್ಲಿ ಪಾಸಾದ ಸಿ.ಎನ್. ಪಾಟೀಲರು 1964ರವರೆಗೆ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರಲ್ಲದೇ, ವಿ.ಟಿ. ಕಾಳೆ, ಕೆ.ಪಿ. ರಾಘುಪ್ಪನವರ, ಬಿ.ಕೆ. ಹಿರೇಮಠ್, ಆರ್.ಎಂ. ಹಡಪದ ಮುಂತಾದ ಕಲಾವಿದರಿಗೆ ಮಾರ್ಗದರ್ಶಕರೂ

ಆಗಿದ್ದರು; ಅಸಂಖ್ಯ ಚಿತ್ರಕಲಾ ಶಿಕ್ಷಕರ ಗುರುಗಳೂ ಆಗಿ, ಚಿತ್ರಕಲಾ ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದರು.

"ಟಿ.ಸಿ.ಎಚ್" ಹಾಗೂ ಕನ್ನಡ "ಸಾಹಿತ್ಯ ರತ್ನ" ಹಿಂದೀ ರಾಷ್ಟ್ರಭಾಷ ಪರೀಕ್ಷೆಗಳನ್ನೂ ಉಚ್ಛ ಶ್ರೇಣಿಯಲ್ಲಿಯೇ ಪಾಸಾದ ಸಿ.ಎನ್. ವಿಖ್ಯಾತ ಚಿತ್ರ ಕಲಾವಿದರಾದ ವಿ.ಬಿ. ಪರಬ, ರಹಾ, ಪೋಪಳೆ, ಅಕಬರ ಪದಂಸೆ, ಸ್ವಸ್ತಿಕ್, ಭಾವೆ ಮುಂತಾದವರ ಸಹಪಾಠಿ ಗಳಾಗಿ ವರ್ಗಗಳಲ್ಲಿ ಅವರೆಲ್ಲರಿಂದಲೂ ಮೆಚ್ಚುಗೆ ಗಳಿಸಿದ ಒಡನಾಡಿಗಳಾಗಿದ್ದರು. ದಿ. ಎಸ್.ಬಿ. ಪಳ್ಸೀಕರ್, ಲಕ್ಷ್ಮಣ ಪೈ ಮೊದಲಾದ ಪ್ರಭೃತಿಗಳು ಸಿ.ಎನ್. ಪಾಟೀಲರಿಗಿಂತ ಮೇಲಿನ ವರ್ಗಗಳಲ್ಲಿ ಕಲಿಯುತ್ತಿದ್ದರೂ ಅವರ ಕಲಾ ವೈಖರಿಗೆ ಪ್ರಭಾವಿತ ರಾಗಿ ಅವರ ಮಿತ್ರರಾಗಿದ್ದರು.

ಸಿ.ಎನ್. ಪಾಟೀಲ ಅವರ ಹಿರಿಯ ಸಮ ಕಾಲೀನ ಕಲಾವಿದರಲ್ಲಿ ಎಂ.ಎಸ್. ಜೋಶಿ, ದಿ. ಎ.ಎ. ಆಲಮೇಕರ, ಕೆ.ಕೆ. ಹೆಬ್ಬಾರ್, ಕೆ.ಎಚ್. ಅರಾ, ಶಿವಾಕ್ಷ ಚಾವಡಾ, ದಿ. ಎಂ.ಆರ್. ಅಚರೇಕರ್ ಮುಂತಾದವರು ವಿಶ್ವವಿಖ್ಯಾತ ಕಲಾವಿದರಾಗಿ ಸಿ.ಎನ್. ಪಾಟೀಲರ ಮೇಲೆ ಪ್ರಭಾವ ಬೀರಿದ ಮಹಾ ಶಕ್ತಿಗಳೇ ಆಗಿದ್ದರು. ಜಲವರ್ಣಗಳಲ್ಲಿ ವ್ಯಕ್ತಿ ಚಿತ್ರಗಳನ್ನು ರಚಿಸುತ್ತಿದ್ದ ದಿ. ಅಚರೇಕರ ಹಾಗೂ ಪ್ರಕೃತಿ ಚಿತ್ರ ಗಳನ್ನು ರಚಿಸುತ್ತಿದ್ದ ಶ್ರೀಯುತರ ಗುರುಗಳಾದ ಡಾ. ವಿ.ಎ. ಧೋಂಡ ಅವರ ಅಪ್ಪಾದ್ಯೂಕ ಪ್ರಭಾವಶಾಲೀ ಶೈಲಿಯಿಂದ ಉತ್ತೇಜಿತರಾದ ಸಿ.ಎನ್. ಜಲವರ್ಣ ಚಿತ್ರ ರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಳ್ಳಲು ಶಕ್ತರಾದರು. ಸರ್. ಜೆ.ಜೆ. ಕಲಾ ಶಾಲೆಯ ವ್ಯಾಸಂಗ ಕಾಲದಲ್ಲಿ ಜಗನ್ನಾಥ ಅಹಿವಾಸಿ, ಎ.ಎ. ಭೋನ್ಸ್ಲೆ ಮೊದಲಾದ ಪ್ರತಿಭಾ ಸಂಪನ್ನರೂ, ವಿಖ್ಯಾತ ಕಲಾವಿದರೂ ಆದ ಮಹಾ ವ್ಯಕ್ತಿಗಳು ಸಿ.ಎನ್. ಪಾಟೀಲರ ಗುರುಗಳಾಗಿದ್ದರೆಂಬುದೊಂದು ಪಾಟೀಲರ ಭಾಗ್ಯ ವಿಶೇಷ. ಅಹಿವಾಸಿ, ಧೋಪೇಶ್ವರಕರ ಅವರು ಭಾರತೀಯ ಚಿತ್ರಕಲಾ ಸಂಪ್ರದಾಯದ ಅಧ್ವರ್ಯುಗಳಾಗಿದ್ದರೆ ಎ.ಎ. ಭೋನ್ಸ್ಲೆ ಅವರು ಪಾಶ್ಚಿಮಾತ್ಯ ಶೈಲಿಯ ವ್ಯಕ್ತಿಚಿತ್ರ ಚಿತ್ರಣದಲ್ಲಿ ಅಸಮಾನ್ಯರಾಗಿದ್ದರು. ಈ ಕಾರಣವಾಗಿ ಸಿ.ಎನ್. ಪಾಟೀಲರು "ವರ್ಣಚಿತ್ರ ಸಂಯೋಜನೆ"ಯಲ್ಲಿ ಭಾರತೀಯತೆಯನ್ನೂ, ವ್ಯಕಿ ್ತಚಿತ್ರಣದಲ್ಲಿ ಪಾಶ್ಚಿ ಮಾತ್ಯ ಶೈಲಿಯನ್ನೂ "ತಮ್ಮತನ"ಕ್ಕೆ ಅಳವಡಿಸಿ ಕೊಳ್ಳಲು ಸಾಧ್ಯವಾಯಿತು. ಅಜಂತಾ ಭಿತ್ತಿ ಚಿತ್ರಗಳು, ಮೊಗಲ್, ರಜಪೂತ್ ಮುಂತಾದ ಭಾರತೀಯ ಕಲಾ ಸಂಪ್ರದಾಯಗಳ ವ್ಯಾಪಕವಾದ ಅಭ್ಯಾಸ ಸಿ.ಎನ್. ಪಾಟೀಲರನ್ನು ಒಬ್ಬ 'ಸಿದ್ಧ ಕಲಾವಿದ'ನನ್ನಾಗಿ ರೂಪಿಸಿತು. ಸಿ.ಎನ್. ಅವರ ಕಲಾಕೃತಿಗಳಲ್ಲಿ ಭಾರತೀಯತೆಯ ವರ್ಣ ಸಂಯೋಜನೆ, ಸೂಕ್ಷ್ಮರೇಖೆ ಗಳ ಎಳೆತಗಳನ್ನು ಧಾರಾಳವಾಗಿ ಕಾಣಬಹುದಾಗಿದೆ.

ಸಿ.ಎನ್. ಪಾಟೀಲರ ಕಲಾಕೃತಿಗಳ ಸಂಖ್ಯೆ ಏಳು ಸಾವಿರಕ್ಕೂ ಮಿಕ್ಕಿದ್ದು, ಅವುಗಳಲ್ಲಿ "ಕರ್ನಾಟಕ ರಾಜರಾಜೇಶ್ವರಿ ಭುವನೇಶ್ವರಿ" ದೇವಿಯ ಚಿತ್ರ ಅಂದಿನ ಮೈಸೂರು ರಾಜ್ಯದ ಮಾನ್ಯ ಸಚಿವರೂ, ಕರ್ನಾಟಕ ಏಕೀಕರಣ ಹೋರಾಟದ ಅಧ್ವರ್ಯುಗಳೂ ಆದ ದಿ. ದೊಡ್ಡಮೇಟಿ ಅಂದಾನಪ್ಪನವರ ಆದೇಶದ ಮೇರೆಗೆ ಭವ್ಯ ಗಾತ್ರದಲ್ಲಿ ಚಿತ್ರಿತವಾಗಿದ್ದು, ಎಲ್ಲ ಕನ್ನಡಿಗರಿಂದ ಮೆಚ್ಚುಗೆ ಪಡೆದ ಚಿತ್ರವಾಗಿದೆ. ಅವರು ಚಿತ್ರಿಸಿದ ರಾಗಮಾಲಾ ಚಿತ್ರಗಳಲ್ಲಿ "ಶ್ರೀರಾಗ" ಚಿತ್ರವು ಮೈಸೂರು ದಸರಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನು ಪಾಟೀಲರಿಗೆ ತಂದುಕೊಟ್ಟ ಕಲಾ ಕೃತಿಯಾಗಿದೆ. ಪುರುಷರಾಗವೆಂದೇ ಪರಿಗಣಿಸಲ್ಪಟ್ಟ "ಶ್ರೀ" ರಾಗವನ್ನು "ಸ್ತ್ರೀ" ರಾಗವೆಂದು ಚಿತ್ರಿಸಿದ ಪಾಟೀಲರ ಕಲ್ಪನೆ ಮನೋಜ್ಞವಾಗಿದೆ, ಚೇತೋ ಹಾರಿಯೂ ಆಗಿದೆ. ಸಿ.ಎನ್. ಅವರ ಕಲಾಕೃತಿಗಳು ಒಂದೊಂದೂ ವೈಶಿಷ್ಟ್ಯಪೂರ್ಣವಾದ ಕಲಾಕೃತಿ ಗಳಾಗಿದ್ದು, ಸಿ.ಎನ್. ಅವರ ಕಲ್ಪನಾ ವಿಲಾಸದ ವೈವಿಧ್ಯತೆಗೆ ಕನ್ನಡಿಗಳಾಗಿವೆ. ಗದಗ, ಬೆಟಗೇರಿ ನಗರ ಸಭಾ ಭವನದಲ್ಲಿರುವ ಒಟ್ಟು 16 ಚಿತ್ರಗಳಲ್ಲಿ ಶ್ರೀಯುತರ 9 ಚಿತ್ರಗಳು ಭವನವನ್ನು ಅಲಂಕರಿಸಿವೆ ಯಲ್ಲದೇ, ದಿಲ್ಲಿ, ಕಲ್ಕತ್ತಾ, ಮುಂಬಯಿ, ಮೈಸೂರು, ಬೆಂಗಳೂರು, ಧರ್ಮಸ್ಥಳ, ದಾವಣಗೆರೆ, ಚಿತ್ರದುರ್ಗ, ವಿಜಾಪುರ, ಧಾರವಾಡಗಳಲ್ಲಿಯೂ ಅಮೆರಿಕಾ, ಕೆನಡಾ ಮುಂತಾದ ಪರ ರಾಷ್ಟ್ರ ಗಳಲ್ಲಿಯೂ ಸಿ.ಎನ್. ಅವರ ಕಲಾಕೃತಿಗಳು ಕಲಾ ಪ್ರೇಮಿಗಳು, ವಿಖ್ಯಾತ ವ್ಯಕ್ತಿಗಳ ಸಂಗ್ರಹಗಳಲ್ಲಿ ಸೇರಿ ಹೋಗಿವೆ. ಸಿ.ಎನ್. ಪಾಟೀಲರು ತೈಲವರ್ಣ, ಜಲ ವರ್ಣ, ಪೇಸ್ಟಲ್, ಪೋಸ್ಟರ್ ಕಲರ್ಸ್, ಪೆನ್ಸಿಲ್, ಪೆನ್ ಮತ್ತು ಇಂಕ್ ಹೀಗೆ ಹತ್ತಾರು ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುವಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದಾರೆ. ಒಮ್ಮೆ ಮಾತ್ರ ನೋಡಿದ ವ್ಯಕ್ತಿ ಭಾವಚಿತ್ರವನ್ನು ಕೇವಲ ಐದಾರು ನಿಮಿಷಗಳಲ್ಲಿ ನೆನಪು ಮಾತ್ರದಿಂದಲೇ ತದ್ರೂಪವಾಗಿ ಚಿತ್ರಿಸುವ

ಶ್ರೀಯುತರ ಕೈಚಳಕದ ವೈಖರಿ ವಿಸ್ಮಯಕರವಾಗಿದೆ. ದಿ. ಡಾ. ರಾಧಾಕೃಷ್ಣನ್, ದಿ. ಕೆ. ಹನುಮಂತಯ್ಯ, ಧರ್ಮವೀರ ಮುಂತಾದ ದೇಶದ ಮುಖಂಡರ ಭಾವಚಿತ್ರಗಳು ಇದೇ ರೀತಿಯಲ್ಲಿ ಚಿತ್ರಿತವಾಗಿದ್ದು, ಅವು ಮುಖಂಡರ ಹಾಗೂ ಸಾರ್ವಜನಿಕರ ಮನ್ನಣೆ ಗಳಿಸಿದವುಗಳಾಗಿವೆ. ಸಮಾಜ ಸುಧಾರಕ, ಜಗಜ್ಯೋತಿ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮುಂತಾದ ಶಿವಶರಣರ ಜೀವನ ಚರಿತ್ರೆಯನ್ನು ರೂಪಿಸುವ ಅಸಂಖ್ಯ ಕಲಾಕೃತಿಗಳನ್ನು ರಚಿಸಿದ ಕೀರ್ತಿ ಸಿ.ಎನ್. ಪಾಟೀಲರದು. ಸಂಪೂರ್ಣ ಭಾರತೀಯ ಸಾಂಪ್ರದಾಯಿಕ ಚಿತ್ರಕಲಾ ಶೈಲಿಯಲ್ಲಿಯೇ ತಮ್ಮ ಕಲಾ ಜೀವನವನ್ನು ನಡೆಸಿಕೊಂಡು ಬಂದ ಸಿ.ಎನ್. ಪಾಟೀಲರು "ನವ್ಯ ಕಲೆ"ಯನ್ನು ತಿರಸ್ಕರಿಸುವುದಿಲ್ಲ. "ಕಲೆಗೆ ಹೊಸ ತಿರುವು ಬೇಕೇಬೇಕು; ಅದಕ್ಕಿರುವ ಚೌಕಟ್ಟನ್ನು ಕಲಾವಿದ ಮೀರಿ ವರ್ತಿಸಬಾರದು" ಎಂಬ ಮನೋಭಾವನೆಯ ಸಿ.ಎನ್. ಸಹ ನವ್ಯ ಶೈಲಿಯಲ್ಲಿ ಕಲಾಕೃತಿಗಳ ರಚನೆಯನ್ನು ಮಾಡುತ್ತಾರೆ.

ಸಿ.ಎನ್. ಪಾಟೀಲರವರ ಈ ತಪಸ್ಸು ನಾಡಿನ ಮಠಮಾನ್ಯಗಳಿಂದ ಅವರಿಗೆ ಅನೇಕ ಬಿರುದುಗಳನ್ನು ತಂದಿವೆ. ರಾಜ್ಯದ ಪಠ್ಯಪುಸ್ತಕ ರಚನಾ ಸಮಿತಿಯ ಚಿತ್ರಕಲಾ ವಿಭಾಗದ ಸದಸ್ಯರಾಗಿ, ಪಠ್ಯ–ಪುಸ್ತಕ ಸಮಿತಿಯ ರಾಜ್ಯಮಟ್ಟದ ಸಮ್ಮೇಳನದ ಕಲಾ ವಿಭಾಗದ ಸದಸ್ಯರಾಗಿ, ರಾಜ್ಯದ ಪಠ್ಯ–ಪುಸ್ತಕಗಳ ಆಕರ್ಷಣೆಗೆ ಹಲವಾರು ಅಮೂಲ್ಯವಾದ ಸಲಹೆ–ಸೂಚನೆಗಳನ್ನು ನೀಡುವುದರ ಮೂಲಕ ಸೇವೆ ಸಲ್ಲಿಸಿದ ಸಿ.ಎನ್. ಪಾಟೀಲರು ಮೈಸೂರು ದಸರಾ ಕಲಾ ಪ್ರದರ್ಶನ ಸಮಿತಿಯ ಸದಸ್ಯರಾಗಿ ಧಾರವಾಡದ ಕರ್ನಾಟಕ ಆರ್ಟ್ ಸೊಸೈಟಿ, ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ಮುಂತಾದ ಹಲವಾರು ಸಂಘ–ಸಂಸ್ಥೆಗಳ ಸದಸ್ಯನಾಗಿ, ಪದಾಧಿಕಾರಿಯಾಗಿ, ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅಲ್ಲದೆ ಗದಗ್ ವಿಭಾಗದ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದಾಗ ಅವರಿಂದ ಸಂಘಟಿತವಾದ ಕಲಾ ಪ್ರದರ್ಶನ 60 ಸಾವಿರ ಜನರಿಂದ ವೀಕ್ಷಿಸಲ್ಪಟ್ಟು ಜನಾದರಣೀಯ ವಿಕ್ರಮ ವನ್ನೇ ಸ್ಥಾಪಿಸಿತು.

"ಸಾಹಿತ್ಯರತ್ನ"ಪದವೀಧರರಾದ ಶ್ರೀ ಸಿ.ಎನ್. ಪಾಟೀಲರು ಕಲೆಯ ಬಗೆಗೆ ಹಲವಾರು ಲೇಖನಗಳನ್ನೂ ಬರೆದಿರುವರಲ್ಲದೇ, ಎರಡು ನೂರಕ್ಕೂ ಮಿಕ್ಕಿ ಕಲೆಯ ವಿಷಯವಾಗಿ ಉಪನ್ಯಾಸಗಳನ್ನು ನೀಡಿದ್ದಾರೆ. ಗದುಗಿನ ಮಾಡೆಲ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಸಿ.ಎನ್. ಆದರ್ಶ ಶಿಕ್ಷಕನೆಂದು ಹೆಸರು ಪಡೆದವರಾಗಿದ್ದಾರೆ. "ಜನಪದ" ಕಲಾಪ್ರೇಮಿಗಳಾದ ಸಿ.ಎನ್. ಜನಪದ ಕಲೆ ಹಾಗೂ ಕಲಾವಿದರ ವಿಷಯದಲ್ಲಿ ಅಪಾರವಾದ ಅನುಕಂಪವುಳ್ಳವರಾಗಿದ್ದಾರೆ. ಅದರ ಸರ್ವತೋಮುಖ ಅಭಿವೃದ್ಧಿಗಾಗಿ ಸರಕಾರದ ಸಹಾಯ–ಸಹಕಾರಗಳು ಅವಶ್ಯವಾಗಿ ಬೇಕು ಎಂಬುದು ಅವರ ಚಿಂತನೆಯಾಗಿದೆ. ಚಿತ್ರಕಲಾ ಕೃತಿಗಳಂತೆ, ಸಾಹಿತ್ಯ ರಚನೆಯೂ ಅವರ ಒಂದು ಹವ್ಯಾಸ. ತತ್ಫಲವಾಗಿ ಅನೇಕ ಲೇಖನಗಳು, ಕವನಗಳು, ನಾಟಕಗಳ ಸೃಷ್ಟಿ. ಅವರಿಂದ ರಚಿತವಾದ "ರಾಷ್ಟ್ರ ವೀರ" ನಾಟಕ ನಾಡಿನಾದ್ಯಂತ ಸಂಚರಿಸಿ, ಕೇಂದ್ರ ಸರಕಾರದ ಸಹಾಯದಿಂದ ಐವತ್ತಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿದೆ.

ಚಿತ್ರ ಕಲಾವಿದ, ಚಿತ್ರಕಲಾ ಶಿಕ್ಷಕ, ಲೇಖಕ, ಜಾನಪದ ಸಾಹಿತ್ಯ ಸೃಜನಕಾರ, ಭಾಷಣಕಾರ, ಸಂಘಟಕ, ನಿರ್ದೇಶಕ, ನಟ, ಸಮಾಜ ಸೇವಕ ಹೀಗೆ ಹತ್ತಾರು ಮುಖಗಳಿಂದ ಸೇವೆ ಸಲ್ಲಿಸಿದ ಶ್ರೀ ಸಿ.ಎನ್. ಅವರು ದಾವಣಗೆರೆಯ ಸರಕಾರೀ ಕಲಾ ಶಾಲೆಯ 1979–80ನೆಯ ವರ್ಷದ ಗೌರವ ಸಂದರ್ಶಕ ಪ್ರಾಧ್ಯಾಪಕನೆಂದೂ, ಅದೇ ವರ್ಷ ವಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಯ ಪರವಾಗಿ ಶ್ರೀ ಸಿದ್ಧೇಶ್ವರ ಕಲಾಮಂದಿರವನ್ನು ಸ್ಥಾಪಿಸಿ, ಅದರ ಸಂಸ್ಥಾಪಕ ನಿರ್ದೇಶಕನೆಂದೂ ಸೇವೆ ಸಲ್ಲಿಸಿದ್ದುಂಟು. ಶ್ರೀಯುತರ ಪ್ರಗಾಢ ವಿದ್ವತ್ತನ್ನು ಗಮನಿಸಿದ ರಾಜ್ಯದ ಶಿಕ್ಷಣ ಇಲಾಖೆಯು ಅವರನ್ನು ದಿಲ್ಲಿಯ 'ಶಂಕರ್ಸ್ ವೀಕ್ಲಿ' ಪತ್ರಿಕೆಯವರು ನಡೆಸುತ್ತಿದ್ದ ಅಂತಾರಾಷ್ಟ್ರೀಯ ಮಕ್ಕಳ ಚಿತ್ರಕಲಾ ಹಾಗೂ ಪ್ರದರ್ಶನಗಳನ್ನು ವೀಕ್ಷಿಸಿ, ಅದರ ಸವಿಸ್ತಾರ ವರದಿಯನ್ನು ಒಪ್ಪಿಸುವಂತೆ ನಿರ್ದೇಶಿಸಿ ದಿಲ್ಲಿಗೆ ಕಳಿಸಿತ್ತು. ಹೀಗೆ ಹಲವಾರು ವಿಧದಿಂದ ರಾಜ್ಯದ ಚಿತ್ರಕಲೆ, ಚಿತ್ರಕಲಾ ಶಿಕ್ಷಣಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟ ಶ್ರೀ ಸಿ.ಎನ್. ಪಾಟೀಲ ಅವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು 1981–82ನೇ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿತಲ್ಲದೇ, ಶ್ರೀಯುತರಿಂದ 1986ರಲ್ಲಿ ನರಗುಂದ ಬಾಬಾ ಸಾಹೇಬರ ಮನೆಯಲ್ಲಿನ ಭಿತ್ತಿ ಚಿತ್ರಗಳ ಪ್ರತಿಕೃತಿಗಳನ್ನು ಮಾಡಿಸಿ ಅಪೂರ್ವವಾದ ಕೃತಿಗಳನ್ನು ಸಂಗ್ರಹ ಮಾಡಿತು.

ಹೀಗೆ ಕಲಾಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಶ್ರೀ

ಸಿ.ಎನ್. ಪಾಟೀಲರು ಗದುಗಿನ ವಿಜಯ ಸೂಚಿ ಶಿಲ್ಪ ಕಲಾಮಂದಿರದ ಚೇರ್‌ಮನ್ನರಾಗಿ, ವಿದ್ಯಾವರ್ಧಕ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರಾಗಿ, ಭಾರತ ಸ್ಕೌಟ್ಸ್ ಹಾಗೂ ಗೈಡ್ಸ್, ಗದಗ್ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾಗಿ, ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ್ ಆಗಿ, 1971ರಲ್ಲಿ ಜನಗಣತಿಯ ಸೂಪರ್‌ವೈಸರ್ ಆಗಿ, ಸಮಾಜ ಸೇವಾಸಕ್ತರೆಂಬ ಹೆಸರು ಪಡೆದಿರುವ ರಲ್ಲದೇ ರಾಷ್ಟ್ರಮಟ್ಟದ ಪ್ರಶಸ್ತಿ ಹಾಗೂ ಪದಕ ಗಳನ್ನೂ ಪಡೆದ ಭಾಗ್ಯಶಾಲಿ ಶ್ರೀ ಸಿ.ಎನ್. ಪಾಟೀಲ.

ಭಾರತ ಸ್ಕೌಟ್ಸ್ ಹಾಗೂ ಗೈಡ್ಸ್ ಗದಗ್ ಜಿಲ್ಲಾ ಸ್ಮರಣ ಸಂಚಿಕೆ, ಕಲಾ ತಪಸ್ವಿ ಶ್ರೀ ಟಿ.ಪಿ. ಅಕ್ಕಿ ಅವರ ಸಂಭಾವನಾ ಗ್ರಂಥ "ಕಾಯಕದ ಕಲಿ" ಶ್ರೀ ಸಿ.ಎನ್. ಪಾಟೀಲ ಮುಂತಾದ ಸ್ಮರಣ ಸಂಚಿಕೆಗಳ ಸಂಪಾದಕರಾಗಿ, "ನಟರಾಜ" ಹೊತ್ತಿಗೆಯ ಸಹ ಸಂಪಾದಕರಾಗಿ ಸೇವೆ ಸಲ್ಲಿಸಿದ ಹಿರಿಮೆ ಶ್ರೀ ಸಿ.ಎನ್. ಪಾಟೀಲರದು.


ಎ. ಟಿ. ಕಾಳೆ

ಸಿ.ಎನ್. ಪಾಟೀಲ್



ಸುಗ್ಗಿಯ ಕಾಲ

ಬಿ. ಬಸವಣ್ಣ ಶಿಲ್ಪಿ



ಮೈಸೂರಿನ ಬಿ. ಬಸವಣ್ಣ ಕಲ್ಲಿನಲ್ಲಿ ಮೃದುವಾದ ಹೂವನ್ನು ಅರಳಿಸುವಂತಹ ಕಲೆ ಕರಗತ ಮಾಡಿಕೊಂಡಿರುವ ಶಿಲ್ಪಿ. ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಆಗಿನ ಪ್ರಧಾನಿಗಳಾಗಿದ್ದ ದಿ. ಜವಹರಲಾಲ್ ನೆಹರುರವರಿಗೆ ಇವರು ತಾವು ಕೆತ್ತಿದ "ಶಿಲಾಬಾಲಿಕೆ"ಯ ಮೂರ್ತಿಯನ್ನು ಅರ್ಪಿಸಿದಾಗ, ಆ ಶಿಲ್ಪದ ಸೌಂದರ್ಯಕ್ಕೆ ಮಾರುಹೋದ ನೆಹರು "ಇದರ ಬೆಲೆ ಅಮೂಲ್ಯ, ಆ ಬೆಲೆಯನ್ನು ನಾನು ಕೊಡುವುದು ಸಾಧ್ಯವಿಲ್ಲ. ನಿಮ್ಮ ಜೊತೆಯಲ್ಲಿ ನಾನು ನಿಂತು ಛಾಯಾಚಿತ್ರವೊಂದನ್ನು ತೆಗೆಸಿಕೆಳ್ಳುವೆ" – ಎಂದು ಹೇಳಿ ಫೋಟೋ ತೆಗೆಸಿಕೊಂಡು ಗೌರವಿಸಲ್ಪಟ್ಟ ಬಿ.ಬಸವಣ್ಣ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಕರ್ನಾಟಕಕ್ಕೆ ಹೆಸರು ತಂದ ಶಿಲ್ಪಿ.

ಬಸವಣ್ಣನವರಿಗೆ ವಂಶ ಪಾರಂಪರ್ಯವಾಗಿ ಬಂದ ಕಲೆ. ತಂದೆ ಬಸಪ್ಪಾಚಾರ್ಯರು ಮಗನನ್ನು ಕೇವಲ ಹತ್ತು ವರ್ಷದವನಿದ್ದಾಗಿನಿಂದಲೇ ಶಿಲ್ಪಕಲಾಭ್ಯಾಸ ಮಾಡಿಸತೊಡಗಿದರು. ಕೈ ಕುದುರುತ್ತಿದ್ದಂತೆಯೇ ಆತನಲ್ಲಿ ಹುದುಗಿದ್ದ ಕಲಾ ಕೌಶಲ್ಯವನ್ನು ಗಮನಿಸಿ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರಲ್ಲಿ ಕಳುಹಿಸಿಕೊಟ್ಟರು. ಆ ಸುಪ್ರಸಿದ್ಧ ಶಿಲ್ಪ ಕಲೋಪಾಸಕರ ನಿಷ್ಠೆಗನುಗುಣವಾಗಿ ಬಸವಣ್ಣನವರು ಗುರುಕುಲದ ಪರಿಸರದಲ್ಲಿ ಶಿಲ್ಪಕಲೆಯ ಜೊತೆ ಜೊತೆಗೇ ಸಂಸ್ಕೃತ, ಜ್ಯೋತಿಷ್ಯಗಳನ್ನು ಕಲಿತರು. ತಮ್ಮ ಇಪ್ಪತ್ತನೆಯ ವಯಸ್ಸಿನ ವೇಳೆಗೆ ಈ ಎಲ್ಲಾ ವ್ಯಾಸಂಗಗಳೂ ಮುಗಿದು ಕೈ ಸಂಪೂರ್ಣ ಪಳಗಿದ ನಂತರ ಗುರುಗಳ ನೇತೃತ್ವದಲ್ಲಿ ದೇವತಾ ಮೂರ್ತಿಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ನಿರತರಾದರು.

ತಮ್ಮ ಗುರು ಸಿದ್ಧಲಿಂಗಸ್ವಾಮಿಗಳಲ್ಲಿ ಕಲಿತ ಇನ್ನಿತರ ಶಿಲ್ಪಿ ಶಿಷ್ಯರಂತೆ ಬಸವಣ್ಣನವರು ಪ್ರತಿಪಾದಿಸಿದ್ದು ಹೊಯ್ಸಳ ಶೈಲಿಯಾದರೂ, ಅದರಲ್ಲಿ ಹಲವು ಮಾರ್ಪಾಡುಗಳನ್ನು ಮಾಡುತ್ತಾ, ತಮ್ಮದೇ ಆದ ಸ್ವಂತಿಕೆಯೊಂದನ್ನು ರೂಪಿಸಿಕೊಂಡರು. ಕೃತಿಗಳು ಕೇವಲ ನಕಲಿನಂತಿರದೆ, ಸಮಕಾಲೀನ ಅಭಿರುಚಿಗೆ, ಬೇಡಿಕೆಗಳಿಗೆ ಅನುಗುಣವಾಗಿ ರೂಪುಗೊಂಡಿರುತ್ತವೆ. ಮಾರ್ಪಟ್ಟ ಈ ಶೈಲಿಯನ್ನು ಬಸವಣ್ಣನವರ ಶೈಲಿಯೆಂದು ಕರೆಯಬಹುದು. ಈ ಶೈಲಿಗೆ ಉದಾಹರಣೆಗಳಾಗಿ ಮಧುಗಿರಿಯ ಹರಿಹರೇಶ್ವರ ದೇವಾಲಯದಲ್ಲಿ ಸ್ಥಾಪಿತವಾಗಿರುವ 'ಹರಿಹರೇಶ್ವರ', ಗುಲ್ಬರ್ಗಾದ ಆಳಂದನ 'ಮಹಿಷಾಸುರ ಮರ್ಧಿನಿ', ಹಂಸಭಾವಿಯ 'ನಟರಾಜ', ಅನಂತಪುರದಲ್ಲಿರುವ 'ಶಿವಬಾಲಯೋಗಿ' ಶಿಲ್ಪಗಳನ್ನು ಹೆಸರಿಸಬಹುದು. ಈ ಶಿಲ್ಪಗಳು ಎಂತಹ ಸಂಗ್ರಹಗಳಲ್ಲೂ ತಮ್ಮ ಸ್ವಂತಿಕೆಯಿಂದ ಎದ್ದುನಿಲ್ಲುವಂಥ ಸಾಮರ್ಥ್ಯ ಹೊಂದಿವೆ. ಇವು ಬಸವಣ್ಣನವರ ರಚನಾ ಸಂಯೋಜನೆಯ, ಕಲಾ ಕೌಶಲ್ಯಗಳ ದ್ಯೋತಕ, ಭಾವನಾಶೀಲತೆಯ ಪರಿಚಯಕ್ಕೆ ಪ್ರೇರಕ.

ಇತ್ತೀಚೆಗೆ ಅಮೆರಿಕಾದ ಮಿಚೆಗನ್ ಹಿಂದೂ ದೇವಾಲಯಕ್ಕೆ ವಿಶ್ವೇಶ್ವರಸ್ವಾಮಿ, ವಿಶಾಲಾಕ್ಷಿ, ಸಿದ್ಧ ಗಣಪತಿ, ನಂದಿ, ಚಂಡಿಕೇಶ್ವರ, ಭೈರವ ಮೂರ್ತಿಗಳನ್ನು ನಿರ್ಮಿಸಿಕೊಟ್ಟಿರುವ ಬಸವಣ್ಣ ಶಿಲ್ಪಿಯವರ ಪ್ರತಿಭೆ ಬೆಳಕಿಗೆ ಬಂದುದು ಶ್ರೀ ಜಯಚಾಮರಾಜೇಂದ್ರ

ಒಡೆಯರ ಕಾಲದಲ್ಲಿ. ಮೈಸೂರಿನ ಅರಮನೆಯ ಕೋಟೆಗಾಗಿ ನಿರ್ಮಿಸಿದ ಭುವನೇಶ್ವರಿ, ಚಾಮುಂಡೇಶ್ವರಿ, ರಾಜ ರಾಜೇಶ್ವರಿ ವಿಗ್ರಹಗಳ ಮೂಲಕ. ಈ ಶಿಲ್ಪ ಕೃತಿಗಳು ಇಂದಿಗೂ ಅವರ ಶಿಲ್ಪಕಲಾ ನೈಪುಣ್ಯವನ್ನು ಸಾರುತ್ತಿವೆ. ಮೈಸೂರಿನ ಗಾಯತ್ರಿ ದೇವಾಲಯದ ಪೂರ್ಣ ಶಿಲ್ಪ ಕೆಲಸಗಳನ್ನು ರಚಿಸಿಕೊಟ್ಟು ಮಹಾರಾಜರಿಂದ ಮೊದಲನೆಯ ದರ್ಜೆಯ ಖಿಲ್ಲತ್ತನ್ನು ಪಡೆದದ್ದೂ ಸಹ ಇವರಲ್ಲಿ ಒಂದು ಸ್ಮರಣೀಯ ಸನ್ನಿವೇಶವಾಗಿ ಉಳಿದಿದೆ. ಬೆಂಗಳೂರಿನ ದೇವಾಲಯಗಳಲ್ಲಿರುವ ಕನ್ನಿಕಾಪರಮೇಶ್ವರಿ (ಅಮೃತಶಿಲೆ–1963), ಇಂದಿರಾ ನಗರದ ಬಿರ್ಲಾ ಭವನದಲ್ಲಿರುವ ಕಾಳಿಂಗ ಮರ್ದನ (ಕೃಷ್ಣ ಶಿಲೆ) ಶಿಲ್ಪಗಳೂ ಗಮನಾರ್ಹ. ಕನಕದಾಸರ ಶತಮಾನೋತ್ಸವ ಸಂದರ್ಭದಲ್ಲಿ ಸರ್ಕಾರ ಇವರಿಂದ ಕನಕದಾಸರ ಆಳೆತ್ತರದ ಶಿಲ್ಪಗಳನ್ನು ತಯಾರಿಸಿಕೊಂಡಿತು. ಮೈಸೂರು ನಗರಸಭೆಗೆ ಡಾ. ಅಂಬೇಡ್ಕರರ ಶಿಲ್ಪವನ್ನೂ ತಯಾರಿಸಿಕೊಟ್ಟಿದ್ದಾರೆ. ಜಪಾನ್ ದೇಶದ ಕಲೆಗಾರರಿಗೆ ತೆನೊಸೆನ್, ಜಿನೋಸನ್ ಗುರುಗಳ ಹಾಗೂ ಶಿಲಾಬಾಲಿಕೆಯರ ಮೂರ್ತಿಗಳನ್ನು ರಚಿಸಿಕೊಟ್ಟು, ಜಪಾನೀಯರ ಆದರಾಭಿಮಾನಗಳಿಗೂ ಪಾತ್ರರಾಗಿದ್ದರು.

ಬಸವಣ್ಣ ಶಿಲ್ಪಿಯವರಿಗೆ ದೇಶ–ವಿದೇಶಗಳಿಂದ ಪ್ರಶಸ್ತಿ, ಬಹುಮಾನಗಳು ಸಂದಿವೆ. ಅದರಲ್ಲಿ ಮುಖ್ಯವಾದವು 1982ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1984ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಮೊದಲಾದವು. ಮೈಸೂರಿನ ತಮ್ಮ 'ಕಾಶ್ಯಪ ಶಿಲ್ಪ ಕಲಾ ಶಾಲೆ'ಯಲ್ಲಿ ಆಸಕ್ತರಿಗೆ ಶಿಲ್ಪಕಲೆಯನ್ನು ಕಲಿಸಿ, ಕಲೆ ಸಜೀವವಾಗಿ ಮುಂದುವರೆಯುವಂತೆ ಮಾಡಿದರು ಬಸವಣ್ಣ ಶಿಲ್ಪಿ.


ಕೆ. ವಿ. ಸುಬ್ರಮಣ್ಯ

ಬಿ. ಬಸವಣ್ಣ ಶಿಲ್ಪಿ



ಚಾಮುಂಡೇಶ್ವರಿ

ಬಿ. ಪಿ. ಬಾಯಿರಿ



ಸಡಿಲಾದ ಅರ್ಧ ತೋಳಿನ ಅಂಗಿ, ಬಿಳಿ ಪಂಚೆ, ಕೈಯಲ್ಲೊಂದು ಕೊಡೆ, ಕನ್ನಡಕದ ಹಿಂದಿನ ತೀಕ್ಷ್ಣ ಕಣ್ಣುಗಳು, ಅರೆ ನೆರೆತ ಕೂದಲು, ನಸು ಬಾಗಿದ ನೀಳ ಕಾಯದ ವ್ಯಕ್ತಿಯನ್ನು ಉಡುಪಿಯ ಬೀದಿಯಲ್ಲಿ ಪರಿಚಿತರು ಕಂಡರೆ ಎವೆ ಪುಳುಕಿಸದೆ ಮುಂದಕ್ಕೆ ಸರಿದಾರು. ಇವರು ಬಿ.ಪಿ. ಬಾಯಿರಿ ಎಂದು ಪರಿಚಯಿಸಿದರೂ ಹೆಚ್ಚಿನ ಮುಖಗಳಲ್ಲಿ ಪ್ರತಿಕ್ರಿಯೆ ಕಾಣಿಸಲಾರದು. "ಚಿತ್ರ ಕುಟೀರ" ಅಂದರೆ ಇವರೇ ಎಂದು ಹೇಳಿದರೆ ಕಣ್ಣರಳಬಹುದು, ಮುಖ ಹಿಗ್ಗಬಹುದು. ಹತ್ತಾರು ವರ್ಷಗಳಿಂದ 'ಸುಧಾ' ವಾರಪತ್ರಿಕೆಯಲ್ಲಿ ರಂಗವಲ್ಲಿಯ ಅಕ್ಷಯ ಪಾತ್ರೆಯನ್ನು ತೆರೆದಿಡುತ್ತಾ ಬಂದಿರುವ ಬಿ.ಪಿ. ಬಾಯಿರಿ ಕರ್ನಾಟಕದ ಉದ್ದಗಲಕ್ಕೂ ಆ ಹೆಸರಿನಲ್ಲಿ ಪರಿಚಿತರಾಗಿದ್ದಾರೆ. ಆದರೆ ಅಷ್ಟಕ್ಕೆ ಮಾತ್ರ ಅವರು ಪರಿಚಿತರು ಎನಿಸಿದರೆ ಬಾಯಿರಿ ಅವರನ್ನು ಏನೂ ತಿಳಿದುಕೊಂಡಂತಾಗುವುದಿಲ್ಲ.

ಬಾರ್ಕೂರು ಪರಮೇಶ್ವರ ಬಾಯಿರಿ ಅವರ ಕಾರ್ಯ ಕ್ಷೇತ್ರಗಳಲ್ಲಿ ರಂಗವಲ್ಲಿಯೂ ಒಂದು, ನಿಜ. ಆದರೆ ಪ್ರಧಾನವಾಗಿ ಅವರೊಬ್ಬರು ಕಲಾವಿದರು. ಸಮರ್ಥ ಕಲಾ ಶಿಕ್ಷಕರು, ಸಹೃದಯ ವಿಮರ್ಶಕರು. ನಾಲ್ಕು ದಶಕಗಳ ಕಾಲದ ತಮ್ಮ ಅಧ್ಯಾಪನದಿಂದ, ಕಲೆಯ ಕುರಿತ ಲೇಖನಗಳಿಂದ, ಚಿತ್ರಗಳಿಂದ ಬಾಯಿರಿ ಅವರು ನೂರಾರು ಕಲಾವಿದರ, ಸಹಸ್ರಾರು ಪ್ರಜ್ಞಾವಂತ ರಸಿಕರ ಬೆಳವಣಿಗೆಗೆ ಕಾರಣರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕಲಾ ಪರಂಪರೆಯನ್ನು ಗುರುತಿಸುವಾಗ ಬಾಯಿರಿ ಅವರ ಹೆಸರು ಬಲು ಎತ್ತರದಲ್ಲಿ ಕಾಣಿಸಿಕೊಳ್ಳುತ್ತದೆ.

1912ರಲ್ಲಿ ಬಾರ್ಕೂರಿನಲ್ಲಿ ಜನಿಸಿದರು. ಪರಮೇಶ್ವರರ ತಂದೆ ನಾರಾಯಣ ಬಾಯಿರಿ, ತಾಯಿ ರಾಧಮ್ಮ. ಬಾಯಿರಿಗೆ ಚಿಕ್ಕಂದಿನಿಂದಲೂ ಚಿತ್ರ ಕಲೆಯಲ್ಲಿ ವಿಶೇಷ ಆಸಕ್ತಿ. ಎಲ್ಲವನ್ನೂ ರೇಖೆಗಳಲ್ಲಿ ಸೆರೆಹಿಡಿಯುವ ಹುಮ್ಮಸ್ಸು! ಆದರೆ ಬಡತನದಿಂದಾಗಿ ತಮ್ಮ ಔಪಚಾರಿಕ ಶಿಕ್ಷಣವನ್ನು ಹೈಸ್ಕೂಲ್ ಹಂತದಲ್ಲೇ ಮುಗಿಸಬೇಕಾಗಿಬಂತು ಅವರಿಗೆ. ಆದರೆ ಜ್ಞಾನಾರ್ಜನೆ ನಾಲ್ಕು ಗೋಡೆಗಳ ನಡುವೆ ನಡೆಯಬೇಕು ಎಂದೇನಿಲ್ಲವಲ್ಲ! ಬಾಯಿರಿ ಅವರು ಖಾಸಗಿಯಾಗಿ ಇಂಟರ್ ಪಾಸು ಮಾಡಿಕೊಂಡರು. ಜೊತೆಯಲ್ಲಿ ಸಂಸ್ಕೃತ, ಹಿಂದಿ, ಕನ್ನಡ ಸಾಹಿತ್ಯಗಳ ಪರಿಚಯವನ್ನೂ ಮಾಡಿಕೊಂಡರು. ಹೀಗೆ ಕಲೆಯ ವಿಕಸನಕ್ಕೆ ಅಗತ್ಯವಾದ ಬೌದ್ಧಿಕ ನೆಲಗಟ್ಟನ್ನು ಅವರು ಆರಂಭದಲ್ಲೇ ಸಂಪಾದಿಸಿಕೊಂಡರು.

ಬಾಯಿರಿ ಅವರ ಅಭಿರುಚಿ, ಪ್ರತಿಭೆಯನ್ನು ಗಮನಿಸಿ ಚಿತ್ರಕಲೆಯಲ್ಲಿ ಅವರಿಗೆ ಕ್ರಮಬದ್ಧವಾದ ಆರಂಭಿಕ ಶಿಕ್ಷಣವನ್ನು ನೀಡಿದವರು ಉಡುಪಿಯ ಶ್ರೀನಿವಾಸರಾವ್ ಮತ್ತು ಪಾವಂಜೆ ಗೋಪಾಲಕೃಷ್ಣರಾಯರು. ಇವರ ನೆರವು ಮತ್ತು ಪ್ರೋತ್ಸಾಹದಿಂದ ಬಾಯಿರಿ ಅವರು ಮದ್ರಾಸು ಸರಕಾರ ನಡೆಸುತ್ತಿದ್ದ ಡಿಪ್ಲೋಮಾ ಕಲಾ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ತುಸು ಕಾಲ ಮುಂಬಯಿಯ ದಂಡಾವತಿ ಮಠದವರ ನೂತನ ಕಲಾಮಂದಿರದಲ್ಲಿ ಉನ್ನತ ಕಲಾ ವ್ಯಾಸಂಗ ನಡೆಸಿದ್ದರು.

1939ರಲ್ಲಿ ಬಾಯಿರಿ ಅವರು ಮುಲ್ಕಿ

ಹೈಸ್ಕೂಲಿನಲ್ಲಿ ಕಲಾ ಶಿಕ್ಷಕರಾಗಿ ನೇಮಕಗೊಂಡರು. ಅಲ್ಲಿಂದ ಮುಂದೆ ಮೂರು ದಶಕಗಳ ಕಾಲ ಅವರ ಅಧ್ಯಾಪನ ವೃತ್ತಿ ಅವಿಚ್ಛಿನ್ನವಾಗಿ ಮುಂದುವರಿಯಿತು. ತುಸು ಸಮಯ ಕುಂದಾಪುರ ಬೋರ್ಡ್ ಹೈಸ್ಕೂಲಲ್ಲಿ ಇದ್ದು, ಆ ಬಳಿಕ ಉಡುಪಿ ಬೋರ್ಡ್ ಹೈಸ್ಕೂಲಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿ, ಬಾಯಿರಿ ಅವರು 1971ರಲ್ಲಿ ನಿವೃತ್ತರಾದರು.

ಬಾಯಿರಿ ಅವರ ವಿದ್ಯಾರ್ಥಿಗಳಲ್ಲಿ ಹಲವರು ಇಂದೂ ಚಿತ್ರಕಲೆಯ ಹವ್ಯಾಸವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ತಮ್ಮಲ್ಲಿ ಕಲಾಭಿರುಚಿ ಬೆಳೆಯಲು ತಮ್ಮ ಗುರುಗಳ ವಿಶಿಷ್ಟ ಶಿಕ್ಷಣ ವಿಧಾನವೇ ಕಾರಣವೆಂದು ಅವರೆನ್ನುತ್ತಾರೆ. ಕಲಾ ಶಿಕ್ಷಕರಾಗಿ ಬಾಯಿರಿ ಅವರು ಎಂದೂ ಪಠ್ಯ ಕ್ರಮಕ್ಕಷ್ಟೆ ಅಂಟಿಕೊಂಡವರಲ್ಲ. ಅವರ ಮಟ್ಟಿಗೆ ಕಲಾ ಶಿಕ್ಷಣ ಎಂದರೆ ರೇಖೆ, ಬಣ್ಣಗಳ ವಿನ್ಯಾಸದಲ್ಲಿ ಜಾಣತನವನ್ನು ಕಲಿಸುವುದಲ್ಲ. ಅದರ ಪ್ರಕ್ರಿಯೆಯಲ್ಲಿ ವೀಕ್ಷಣೆ, ಗ್ರಹಿಕೆ, ಕ್ರಿಯಾಶೀಲತೆ ಮತ್ತು ಅಭಿವ್ಯಕ್ತಿ ಇರುತ್ತದೆ. ಇದರ ಪೂರ್ಣ ಅರಿವು ವಿದ್ಯಾರ್ಥಿಗಳಿಗೆ ಉಂಟಾಗಲು ಬಾಯಿರಿ ಅವರುಗಳನ್ನು ಸುಂದರ ಪ್ರಕೃತಿ ತಾಣಗಳಿಗೆ ಕರೆದೊಯ್ಯುತ್ತಿದ್ದರು. ಅಲ್ಲಿನ ಬಣ್ಣ, ವಿನ್ಯಾಸ, ಸಾಮರಸ್ಯ, ವೈರುಧ್ಯಗಳನ್ನು ತೋರಿಸಿ ಅವನ್ನು ತಮ್ಮ ಚಿತ್ರದಲ್ಲಿ ಪಡಿಮೂಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುತ್ತಿದ್ದರು. ಮಕ್ಕಳು ಸ್ಥಳದಲ್ಲೇ ರಚಿಸಿದ ಚಿತ್ರಗಳ ಲೋಪ–ದೋಷಗಳನ್ನೂ ಅವರಿಗೆ ಮನದಟ್ಟಾಗುವಂತೆ ವಿಶ್ಲೇಷಿಸುತ್ತಿದ್ದರು. ಹೀಗೆ ವಿದ್ಯಾರ್ಥಿಗಳು ರಚಿಸಿದ್ದ ಉಡುಪಿ ರಥೋತ್ಸವ, ತೆಪ್ಪೋತ್ಸವ, ಅಜ್ಜರ ಕಾಡು ಮೊದಲಾದ ಚಿತ್ರಗಳು ಇಂದೂ ಉಡುಪಿ ಬೋರ್ಡ್ ಹೈಸ್ಕೂಲಿನ ಕೊಠಡಿಗಳಲ್ಲಿ ತೂಗುತ್ತಿರುವುದನ್ನು ಕಾಣಬಹುದು.

ಈ ಬಗೆಯ ಚಿತ್ರಗಳ ಅನಾದರಣೆ ಇತ್ತೀಚೆಗೆ ಸರ್ವೇಸಾಧಾರಣವಾಗಿದೆ ಎಂದು ಬಾಯಿರಿ ಅವರು ವಿಷಾದದಿಂದ ನುಡಿಯುತ್ತಾರೆ. ತದ್ರೂಪ ಚಿತ್ರಣ ಚಿತ್ರಕಲೆಯ ಒಂದು ಪ್ರಮುಖ ಅಂಗ ಎಂದು ಅವರು ದೃಢವಾಗಿ ಪ್ರತಿಪಾದಿಸುತ್ತಾರೆ. ದೃಷ್ಟಿಕೋನ, ಪ್ರಮಾಣ, ಮೂರನೆಯ ಆಯಾಮ ಇವೆಲ್ಲವೂ ಕರಗತವಾಗುವುದು ಯಥಾಚಿತ್ರಣದಲ್ಲಿ. ಆದರೆ ತದ್ರೂಪ ಚಿತ್ರಣ ಕಲೆಯೇ ಅಲ್ಲ ಎನ್ನುವ ಮೊಂಡು ವಾದ ವಿದ್ಯಾರ್ಥಿಗಳನ್ನು ಈ ಪ್ರಕಾರಕ್ಕೆ ವಿಮುಖರನ್ನಾಗಿಸುತ್ತದೆ. ಇದು ನಿಜಕ್ಕೂ ದುರದೃಷ್ಟಕರ. ಪರಿಸ್ಥಿತಿ ಹೀಗೇ ಮುಂದುವರಿದರೆ ನಮ್ಮಲ್ಲಿ ಉತ್ತಮ "ಇಲ್ಲಸ್ಟ್ರೇಷನ್" ಮಾಡಬಲ್ಲ ಕಲಾವಿದರೇ ಇಲ್ಲವೆನಿಸಬಹುದು ಎನ್ನುವ ಆತಂಕ ಅವರನ್ನು ಕಾಡುತ್ತಿದೆ.

ತಮ್ಮ ಕಲಾ ಜೀವನದ ಆರಂಭ ಕಾಲದಲ್ಲಿ ಬಾಯಿರಿ ಅವರು ಗಟ್ಟಿಯಾಗಿ ನೆಚ್ಚಿಕೊಂಡದ್ದು ಭಾವಚಿತ್ರಗಳನ್ನು. ಇದಕ್ಕೆ ಅಂದಿನ ಪರಿಸರವೂ ಕಾರಣವಾಗಿತ್ತು. ಆ ಕಾಲದಲ್ಲಿ ಉತ್ತಮ ಭಾವಚಿತ್ರ ರಚಿಸಬಲ್ಲ ಕಲಾವಿದರು ಜಿಲ್ಲೆಯಲ್ಲಿ ವಿರಳವಾಗಿದ್ದರು. ಹಾಗಾಗಿ ಅಂಥವರಿಗೆ ಸಾಕಷ್ಟು ಬೇಡಿಕೆ ಇತ್ತು. ಆರ್ಥಿಕ ದೃಷ್ಟಿಯಿಂದಲೂ ಭಾವಚಿತ್ರ ರಚನೆ ಕಲಾವಿದನಿಗೆ ಹೆಚ್ಚು ಫಲಪ್ರದವಾಗಿತ್ತು. ಬಾಯಿರಿ ಅವರ ಕುಂಚದಲ್ಲಿ ಮೂಡಿಬಂದ ಸುಂದರ ಭಾವಚಿತ್ರಗಳನ್ನು ಜಿಲ್ಲೆಯ ಹೆಚ್ಚಿನ ವಿದ್ಯಾಸಂಸ್ಥೆಗಳಲ್ಲಿ ಕಾಣಬಹುದಾಗಿದೆ. ಲಾಲ್ ಬಹದ್ದೂರ್ ಶಾಸ್ತ್ರಿ, ಜವಹರಲಾಲ್ ನೆಹರು, ಮಂಜೇಶ್ವರ ಗೋವಿಂದ ಪೈ, ತೋನ್ಸೆ ಮಾಧವ ಅನಂತ ಪೈ ಮೊದಲಾದವರ ಭಾವಚಿತ್ರಗಳು ಬಾಯಿರಿ ಅವರಿಗೆ ಬಹಳಷ್ಟು ಪ್ರಸಿದ್ಧಿಯನ್ನು ತಂದುಕೊಟ್ಟವು.

ಮಹಾ ಕವಿಗಳು, ಸಂತರುಗಳ ಕಲ್ಪನಾ ಚಿತ್ರಗಳನ್ನು ರಚಿಸುವುದರಲ್ಲೂ ಬಾಯಿರಿ ಅವರು ಸಿದ್ಧಹಸ್ತರು. ಈ ಬಗೆಯ ಚಿತ್ರಗಳನ್ನು ರಚಿಸುವ ಮೊದಲು ಸಾಕಷ್ಟು ಪೂರ್ವ ತಯಾರಿ ನಡೆಸುವುದು ಬಾಯಿರಿ ಅವರ ವೈಶಿಷ್ಟ್ಯ. ಚಿತ್ರಿತಗೊಳ್ಳಬೇಕಾದ ವ್ಯಕ್ತಿಯ ಕಾಲ, ಪ್ರದೇಶ, ಸ್ವಭಾವ, ವೃತ್ತಿ ಎಲ್ಲವನ್ನೂ ಅವರು ಕೂಲಂಕಷವಾಗಿ ಅಭ್ಯಾಸ ಮಾಡುತ್ತಿದ್ದರು. ದಂಡನಾಯಕನಾಗಿದ್ದ ಪಂಪನ ಅಂಗಸೌಷ್ಠವ ಒಂದು ತೆರನಾದರೆ, ಶೃಂಗಾರ ಕವಿ ರತ್ನಾಕರ ವರ್ಣಿಯದು ಇನ್ನೊಂದು ವಿಧ. ಹೀಗೆ ಚರಿತ್ರೆಯ ಆಧಾರದಲ್ಲಿ ಕಲ್ಪನೆಯನ್ನು ಬೆಳೆಸಿ ಇವರು ಕುಮಾರವ್ಯಾಸ, ಪುರಂದರದಾಸ, ತ್ಯಾಗರಾಜ ಮೊದಲಾದ ಮಹಾಪುರುಷರ ಚಿತ್ರಗಳನ್ನು ಬರೆದಿರುತ್ತಾರೆ. ಇವುಗಳಲ್ಲಿ ಅನೇಕ ಚಿತ್ರಗಳು ಕನ್ನಡದ ನಿಯತಕಾಲಿಕಗಳ ಮುಖಪುಟದಲ್ಲಿ ಕಾಣಿಸಿಕೊಂಡಿವೆ.

ಭಾರತೀಯ ಚಿತ್ರ ಶೈಲಿಯ ಬಗೆಗೆ ಬಾಯಿರಿಯವರಲ್ಲಿ ವಿಶೇಷ ಒಲವಿದೆ. ಈ ಶೈಲಿ ನಮ್ಮ ಸಂಸ್ಕೃತಿಯ ಪ್ರತೀಕ. ಇದರಲ್ಲಷ್ಟೆ ನಮ್ಮ ತಾಜಾತನವನ್ನು ನಾವು ಗುರುತಿಸಬಹುದಾಗಿದೆ ಎನ್ನುತ್ತಾರೆ ಅವರು. ಮಧ್ವ ಪೂಜಿತ ಕೃಷ್ಣ, ಬೆಣ್ಣೆ ಕಳ್ಳ ಕೃಷ್ಣ, ಚಾಣಕ್ಯ–ಚಂದ್ರಗುಪ್ತ ಮೊದಲಾದ ಇವರ ಚಿತ್ರಗಳು ಇವರು ಕರಗತ ಮಾಡಿಕೊಂಡಿರುವ ಭಾರತೀಯ

ಚಿತ್ರಶೈಲಿಗೆ ಮಾದರಿಗಳಂತಿವೆ.

ಬಾಯಿರಿ ಅವರ ಬಲು ದೊಡ್ಡ ಸೇವೆ ಚಿತ್ರಕಲೆಗಿಂತಲೂ ಹೆಚ್ಚಾಗಿ ರಂಗವಲ್ಲಿಗೆ ಸಂದಿದೆ ಎಂದರೆ ತಪ್ಪಾಗಲಾರದು. ಒಂದು ಅಕಾಡೆಮಿಯಂಥ ಸಂಸ್ಥೆಯೇ, ವಿಶ್ವವಿದ್ಯಾನಿಲಯವು ಮಾಡಬಹುದಾದಷ್ಟು ಬೃಹತ್ತಾದ ಕೆಲಸವನ್ನು ಈ ವ್ಯಕ್ತಿ ಒಂಟಿಯಾಗಿ ಮಾಡಿರುತ್ತಾರೆ. ರಂಗವಲ್ಲಿ ಕ್ಷೇತ್ರದಲ್ಲಿ ಬಾಯಿರಿ ಅವರು ನಡೆಸಿದ ಸಂಶೋಧನೆ, ಸಂಗ್ರಹ ಮತ್ತು ಪ್ರಕಟಣೆ ಬೆರಗು ಹುಟ್ಟಿಸುವ ಮಟ್ಟದಲ್ಲಿವೆ.

ರಂಗವಲ್ಲಿ ಕುರಿತಾಗಿ ತಮ್ಮಲ್ಲಿ ಆಸಕ್ತಿ ಮೂಡುವುದಕ್ಕೆ ತಮ್ಮ ಪರಿಸರವೇ ಕಾರಣವೆನ್ನುತ್ತಾರೆ ಬಾಯಿರಿಯವರು. ಹಿಂದೆ ಬಾರ್ಕೂರಲ್ಲಿ ಪ್ರತಿ ವಾರವೂ ಸಾರ್ವಜನಿಕ ಭಜನೆ ನಡೆಯುತ್ತಿತ್ತು. ಆಗ ಸುತ್ತು ಮುತ್ತಿನ ಮನೆಗಳ ಅಂಗಳದಲ್ಲಿ ರಂಗವಲ್ಲಿ ಇಟ್ಟು ಸಿಂಗರಿಸುವುದು ಸಂಪ್ರದಾಯ. ಇದನ್ನು ಗಮನಿಸಿದ ಬಾಯಿರಿ ಅವರು ತಮ್ಮ ಮನೆಯ ಮುಂದೆ ತಾವೇ ರಂಗವಲ್ಲಿ ಬರೆಯಲಾರಂಭಿಸಿದರು. ಅವರ ರಂಗವಲ್ಲಿಗಳು ಊರಲ್ಲಿ ಪ್ರಸಿದ್ಧಿ ಪಡೆಯುತ್ತಿದ್ದಂತೆ ಇವರಿಗೆ ಆ ಕಲೆಯ ಕುರಿತ ಆಸಕ್ತಿಯೇ ಬೆಳೆಯಲಾರಂಭಿಸಿತು. ಇದಕ್ಕೆ ಒತ್ತಾಸೆ ನೀಡುವಂತೆ 'ಸುಧಾ' ವಾರಪತ್ರಿಕೆ ಪ್ರತಿ ವಾರವೂ ಇವರ ರಂಗವಲ್ಲಿ ರಚನೆಗಳನ್ನು ಪ್ರಕಟಿಸತೊಡಗಿತು.

ಕಲಾವಿದನಿಗೆ ನಿವೃತ್ತಿ ಇಲ್ಲ ಅನ್ನುವ ಬಾಯಿರಿಯವರು ರಂಗವಲ್ಲಿಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡದ್ದು ತಾವು ಉದ್ಯೋಗದಿಂದ ನಿವೃತ್ತರಾದ ಮೇಲೆ. ಬೇರೆ ಬೇರೆ ರಾಜ್ಯಗಳ ನೂರಾರು ಮಂದಿ ಆಸಕ್ತರೊಡನೆ ಅವರು ಪತ್ರ ವ್ಯವಹಾರ ಬೆಳೆಸಿದರು. ಬದುಕಿರುವ ಹಳೆ ತಲೆಗಳನ್ನು ಭೇಟಿಯಾಗಿ ಅಮೂಲ್ಯವಾದ ರಂಗವಲ್ಲಿ ಮಾದರಿಗಳನ್ನು ಸಂಗ್ರಹಿಸತೊಡಗಿದರು. ಸಾಹಿತ್ಯ ಕೃತಿಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ, ಜಾನಪದ ರಚನೆಗಳಲ್ಲಿ ರಂಗವಲ್ಲಿಯ ವಿಚಾರ ಏನಿದ್ದರೂ ಅವು ಬಾಯಿರಿಯವರ ಟಿಪ್ಪಣಿ ಪುಸ್ತಕದಲ್ಲಿ ದಾಖಲಾದವು.

ಬಾಯಿರಿ ಅವರಿಗೆ ರಂಗವಲ್ಲಿಯ ಕುರಿತು ಮಾತನಾಡಿದಷ್ಟೂ ತೃಪ್ತಿ ಇಲ್ಲ. ರಂಗವಲ್ಲಿ ಸಾಂಕೇತಿಕವೂ ಹೌದು, ಅಮೂರ್ತ ಕಲೆಯೂ ಹೌದು ಎನ್ನುತ್ತಾರೆ ಅವರು. ಶ್ರೀಚಕ್ರ, ನಾಗಮಂಡಲಗಳಲ್ಲಿ ರಂಗವಲ್ಲಿಯ ಮೂಲ ಕಾಣಬಹುದು. ಸಂತೋಷ ಕೊಡುವುದರೊಂದಿಗೆ ಕತೆ ಹೇಳುವುದೂ ಕಲೆಯ ಲಕ್ಷಣವಾದರೆ ರಂಗವಲ್ಲಿ ಅದನ್ನು ಸೊಗಸಾಗಿ ಮಾಡುತ್ತದೆ ಎನ್ನುವುದು ಬಾಯಿರಿ ಅವರ ಮತ.

ಇತರ ಕಡೆಗಳಿಗೆ ಹೋಲಿಸಿದರೆ ನಮ್ಮಲ್ಲಿ ರಂಗವಲ್ಲಿ ಕುರಿತು ನಡೆದ ಕೆಲಸ ಏನೂ ಸಾಲದು ಎಂದು ವಿಷಾದಿಸುತ್ತಾರೆ ಬಾಯಿರಿಯವರು. ಪ್ಯಾರಿಸ್, ಡೆನ್‌ಮಾರ್ಕ್, ಇಟಲಿ, ಅಮೆರಿಕಾದಿಂದ ತಮಗೆ ಬಂದಿರುವ ಪತ್ರಗಳನ್ನು ತೋರಿಸಿ ನಮಗೇಕೆ ಈ ಸುಂದರ ಕಲೆಯ ಬಗ್ಗೆ ಆಸಕ್ತಿ ಇಲ್ಲ ಎಂದು ಪ್ರಶ್ನಿಸುತ್ತಾರೆ.

ರಂಗವಲ್ಲಿಯ ಹತ್ತು ಸಂಪುಟಗಳನ್ನು ಈಗಾಗಲೇ ಹೊರ ತಂದಿರುವ ಬಾಯಿರಿ ಅವರು ಹನ್ನೊಂದನೆಯ ಸಂಪುಟದ ತಯಾರಿಯಲ್ಲಿದ್ದಾರೆ. ಮಕ್ಕಳಿಗಾಗಿ 'ಚಿತ್ರ ಪುಸ್ತಕ', 'ರಂಗವಲ್ಲಿ ಚಿತ್ರ ಶಿಕ್ಷಣ' ಮತ್ತು 'ಚಿತ್ರ ಶಿಕ್ಷಣ; ರಂಗವಲ್ಲಿ ವಿಧಾನ' ಎನ್ನುವ ಪುಸ್ತಕಗಳನ್ನು ಇವರು ಪ್ರಕಟಿಸಿರುತ್ತಾರೆ. ಕಲಾಭ್ಯಾಸಿಗಳಿಗಾಗಿ 'ಭಾರತೀಯ ಚಿತ್ರಕಲೆ', 'ಜಾಗತಿಕ ಚಿತ್ರಕಲೆ', 'ಕಲೆಗಾರರ ಕತೆಗಳು', 'ನವ್ಯ ಕಲೆ' ಹಾಗೂ 'ಕಲೆಗಾರರರು', 'ಚಿತ್ರಕಲೆಯ ಚಿಕ್ಕ ಕತೆಗಳು', 'ಚಿಕ್ಕ ಮಕ್ಕಳ ಚಿತ್ರಕಲೆ', 'ಚಿತ್ರಕಲೆಯ ಇತಿಹಾಸ ಕಿರಿಯರಿಗಾಗಿ' ಎನ್ನುವ ಪುಸ್ತಕಗಳನ್ನು ಹೊರ ತಂದಿರುತ್ತಾರೆ.

ಎಪ್ಪತ್ತಾರರ ಹರೆಯದಲ್ಲೂ ಮಕ್ಕಳ ಕುತೂಹಲವನ್ನು, ಯುವಕರ ಉತ್ಸಾಹವನ್ನು ತುಂಬಿಕೊಂಡು ಓಡಾಡುವ ಬಿ.ಪಿ. ಬಾಯಿರಿ ಅವರನ್ನು 82ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತ್ತು. ಇದಲ್ಲದೆ ಹಲವಾರು ಸಂಘ–ಸಂಸ್ಥೆಗಳೂ ಈ ಹಿರಿಯ ಕಲಾವಿದನನ್ನು ಸನ್ಮಾನಿಸಿದೆ. ಆದರೆ ಇವೆಲ್ಲವೂ ತಮಗೆ ಸಂಬಂಧಿಸಿದ್ದೇ ಅಲ್ಲ ಎಂಬಂತೆ 'ಬಾಯಿರಿ ಮಾಸ್ತರರು' ರಂಗವಲ್ಲಿ ಚುಕ್ಕಿಗಳ ಸಂಗದಲ್ಲೇ ಮಗ್ನರು.


ಎ. ಈಶ್ವರಯ್ಯ

ಬಿ.ಹಿ. ಬಾಯಿರಿ



ಚಾಣಕ್ಯ - ಚಂದ್ರಗುಪ್ತ

ಬಿ. ಜಿ. ಮಹಮದ್



ಮಂಗಳೂರಿನ ಕೊಡಿಯಾಲಬೈಲ್ ವೃತ್ತದಿಂದ ಅಲೋಶಿಯಸ್ ಕಾಲೇಜಿಗೆ ಹೋಗುವ ಕಾಲುದಾರಿಯ ಎಡ ಬದಿಯಲ್ಲಿ ಒಂದು ಹಳೆ ಕಾಲದ ಕಟ್ಟಡ. ಅದರ ಮಾಳಿಗೆಯ ಪುಟ್ಟ ಕೋಣೆಯಲ್ಲಿ ಸದಾ ಗಿಜಿಗಿಜಿ. ಬೆಳಿಗ್ಗೆ ಎಂಟು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ಎಳೆಯರು, ಹಿರಿಯರು, ಹುಡುಗಿಯರು, ಹುಡುಗರು ಬರುತ್ತಲೂ ಹೋಗುತ್ತಲೂ ಇರುತ್ತಾರೆ. ಇವರೆಲ್ಲರ ಸಮಾನ ಆಸಕ್ತಿ ಎಂದರೆ ಚಿತ್ರಕಲೆ. ಕಳೆದ ಮೂರು ದಶಕಗಳಿಂದ ನೂರಾರು ಮಂದಿ ಹವ್ಯಾಸಿ ಕಲಾವಿದರ ಆಕರ್ಷಣೆಯ ಕೇಂದ್ರವಾಗಿ ಉಳಿದಿರುವ ಆ ತಾಣವೇ ಬಿ.ಜಿ. ಮಹಮದ್ ಅವರ ಕಲಾಶಾಲೆ. "ಬಿ.ಜಿ.ಎಂ. ಫೈನ್ ಆರ್ಟ್ಸ್".

ತರಗತಿಯಲ್ಲಿ ಹತ್ತಿಪ್ಪತ್ತು ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿವಿಧ ಭಂಗಿಗಳಲ್ಲಿ ಕುಳಿತು ಚಿತ್ರ ರಚನೆಯಲ್ಲಿ ತೊಡಗಿದ್ದಾಗ ಕಲಾಶಿಕ್ಷಕ ಬಿ.ಜಿ. ಮಹಮದ್ ತಪ್ಪುಗಳನ್ನು ತಿದ್ದುತ್ತಾ, ಸಲಹೆ–ಸೂಚನೆಗಳನ್ನು ಕೊಡುತ್ತಾ ಅವರ ನಡುವೆ ಸುಳಿದಾಡುತ್ತಿರುತ್ತಾರೆ. ಮೊತ್ತಮೊದಲ ಬಾರಿಗೆ ಮಹಮದ್ ಅವರನ್ನು ನೋಡುವ ವಿದ್ಯಾರ್ಥಿ ಚಿತ್ರಕಲೆಗಿಂತ ರಂಗಭೂಮಿಗೆ ಅವರನ್ನು ನಂಟು ಹಾಕುವ ಸಾಧ್ಯತೆ ಹೆಚ್ಚು. ಇದಕ್ಕೆ ಕಾರಣ ಅವರ ಆಕರ್ಷಕ ವ್ಯಕ್ತಿತ್ವ. ಮಹಮದ್ ಅವರ ಹಸನ್ಮುಖಕ್ಕೆ ಬೆಳ್ಳಿಗೂದಲು ಗಾಂಭೀರ್ಯವನ್ನೂ, ಕಲಾತ್ಮಕ ಚೌಕಟ್ಟನ್ನೂ ಒದಗಿಸುತ್ತದೆ. ಮೆಲು ಮಾತಿನಿಂದ, ಒಟ್ಟಂದದಲ್ಲಿ ವ್ಯಕ್ತವಾಗುವ ಸಜ್ಜನಿಕೆಯ ಮೂಲಕ ಮಹಮದ್ ಅವರು ಎಂಥವರನ್ನೂ ಕ್ಷಣಾರ್ಧದಲ್ಲಿ ಗೆದ್ದುಬಿಡುತ್ತಾರೆ. ತಮ್ಮ ಕಲಾಶಾಲೆಯಲ್ಲೂ ಇದೇ ಬಗೆಯ ಸಭ್ಯ ಶಿಸ್ತನ್ನು ಉಳಿಸಿಕೊಂಡು ಬರುವಲ್ಲಿ ಮಹಮದರು ಯಶಸ್ವಿಯಾಗಿದ್ದಾರೆ. ಯುವತಿಯರು, ಗೃಹಿಣಿಯರು, ಹೆಚ್ಚಿನ ಸಂಖ್ಯೆಯಲ್ಲಿ ಈ ಕಲಾ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವುದು ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ಮಂಗಳೂರಿನ ಬೋಳಾರದಲ್ಲಿ ಜನಿಸಿದ ಮಹಮದ್, ಅವರ ವಿದ್ಯಾಭ್ಯಾಸ ನಡೆದದ್ದು ಉಡುಪಿಯ ಮಾರ್ಡನ್ ಸ್ಕೂಲ್ ಮತ್ತು ಬೋರ್ಡ್ ಹೈಸ್ಕೂಲ್‌ಗಳಲ್ಲಿ. ಆದರೆ ನೀರಸವಾದ ಪಠ್ಯಪುಸ್ತಕಗಳಲ್ಲಿ ಅವರಿಗೆ ವಿಶೇಷ ಆಕರ್ಷಣೆ ಇರಲಿಲ್ಲ. ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಚಿತ್ರಕಲೆ ನಿಧಾನವಾಗಿ ಅವರನ್ನು ಆಕ್ರಮಿಸಿಕೊಳ್ಳುತ್ತಿತ್ತು. ತರಗತಿಯಲ್ಲಿ ಹೆಚ್ಚಿನ ವೇಳೆಯನ್ನು ಅವರು ಚಿತ್ರ ಬಿಡಿಸುವುದರಲ್ಲಿ ಕಳೆಯುತ್ತಿದ್ದರು. ಕಾಡು, ಬೆಟ್ಟ, ನದಿ, ಕಡಲನ್ನು ಬಗೆಬಗೆಯಾಗಿ ಚಿತ್ರಿಸುವುದರಲ್ಲಿ ಮಹಮದ್ ಅವರಿಗೆ ಅಪರಿಮಿತ ಆಸಕ್ತಿ. ತರಗತಿಯಿಂದ ಹೊರಬಿದ್ದರೆ ಸಂಗೀತ – ಇವಿಷ್ಟೇ ಅವರ ಪ್ರಪಂಚವಾಗಿತ್ತು. ಮಹಮದ್ ಅವರ ಸಮೀಪ ಬಂಧು ಮಹಮದ್ ಉಸ್ಮಾನ್ ಬಾಲಕನ ಆಸಕ್ತಿಗೆ ಪ್ರೋತ್ಸಾಹ ನೀಡಿದರು. ಇದರಿಂದ ಉತ್ತೇಜಿತರಾದ ಮಹಮದ್ ಉಡುಪಿಯ ಪ್ರಸಿದ್ಧ ಸಂಗೀತ ಶಿಕ್ಷಕರಲ್ಲಿ ಒಬ್ಬರಾಗಿದ್ದ ನರಸಿಂಹ ಶೇರಿಗಾರ್ ಅವರಲ್ಲಿ ಕೊಳಲು ವಾದನ ಅಭ್ಯಾಸ ಮಾಡತೊಡಗಿದರು. ಸ್ವರಜತಿ, ವರ್ಣ, ಕೀರ್ತನೆಯವರೆಗೂ ಅವರ [illegible]

ಮುಂದುವರಿಯಿತು. ಮಹಮದ್ ಅವರ ಚಿತ್ರ ಕಲಾ ಆಸಕ್ತಿಗೆ ಉಡುಪಿಯ ಇಬ್ಬರು ಹಿರಿಯ ಚಿತ್ರ ಕಲಾವಿದರಿಂದ ಪೋಷಣೆ ದೊರೆಯಿತು. ಎಂ.ಎಸ್. ಶಿರಾಲಿ ಮತ್ತು ನಾರಾಯಣ ಪದ್ಮಶಾಲಿ ಅವರುಗಳು ಚಿತ್ರಕಲೆಯ ಮೂಲಭೂತ ವಿಚಾರಗಳಲ್ಲಿ ಮಹಮದ್ ಅವರಿಗೆ ತರಬೇತಿ ನೀಡಿದರು.

ಪ್ರತಿಭಾಶಾಲಿ ವಿದ್ಯಾರ್ಥಿಗೆ ಹೆಚ್ಚಿಗೆ ಇನ್ನೇನು ಬೇಕು? ನೋಡುವ ಕಣ್ಣಿದೆ, ಹೀರುವ ಹೃದಯವಿದೆ. ಸುತ್ತುಮುತ್ತು ಕಲಾವಸ್ತು ಸೂರೆಹೋಗುತ್ತಾ ಬಿದ್ದಿದೆ.

ಸಾಧನೆ, ವೀಕ್ಷಣೆ ಮತ್ತು ಅಧ್ಯಯನದಿಂದ ಮಹಮದ್ ತಮ್ಮ ಅಭಿವ್ಯಕ್ತಿಯನ್ನು ಪಕ್ವಗೊಳಿಸುತ್ತ ಬಂದರು. ಕ್ರಮೇಣ ತದ್ರೂಪ ಚಿತ್ರಕಲೆಯಲ್ಲಿ ತಮ್ಮದೇ ಆದ ಒಂದು ಶೈಲಿಯನ್ನು ರೂಪಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾದರು.

ಮಂಗಳೂರಿಗೆ ಬಂದ ಬಿ.ಜಿ. ಮಹಮದ್ ಅವರಿಗೆ ತಮ್ಮ ಮುಂದಿನ ಬದುಕಿನ ಬಗ್ಗೆ ಯಾವುದೇ ಸಂದೇಹ ಇರಲಿಲ್ಲ. ತಾವು ನೆಚ್ಚಿಕೊಂಡ ದಾರಿಯಲ್ಲೇ ಮುಂದುವರಿಯಲು ನಿರ್ಧರಿಸಿದ್ದರು. ಐವತ್ತರ ದಶಕದ ಆರಂಭದಲ್ಲಿ ಮಂಗಳೂರಲ್ಲಿ ಚಿತ್ರಕಲೆಯಲ್ಲಿ ವ್ಯವಸ್ಥಿತ ಶಿಕ್ಷಣ ನೀಡುವ ಸಂಸ್ಥೆಗಳು ಇದ್ದಿರಲಿಲ್ಲ. ಆತ್ಮೀಯರ ಪ್ರೋತ್ಸಾಹದಿಂದ ಧೈರ್ಯ ತುಂಬಿಕೊಂಡ ಮಹಮದ್ 1954ರಲ್ಲಿ 'ಬಿ.ಜಿ.ಎಂ. ಫೈನ್ ಆರ್ಟ್ಸ್' ಕಲಾ ಸಂಸ್ಥೆಯನ್ನು ತೆರೆದರು. ಕೆಲವೇ ವರ್ಷಗಳಲ್ಲಿ ಈ ಶಾಲೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಆಕರ್ಷಿಸತೊಡಗಿತು. ಇದಕ್ಕೆ ಮುಖ್ಯ ಕಾರಣ ಮಹಮದ್ ಅವರ ಶಿಕ್ಷಣ ವಿಧಾನ. ಮಾಮೂಲಿ ಶಾಲೆಗಳಂತೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಸಮಯದ ನಿರ್ಬಂಧ ಇಲ್ಲಿ ಇಲ್ಲ. ತಮಗೆ ಅನುಕೂಲವೆನಿಸಿದ ವೇಳೆಯಲ್ಲಿ ಬಂದು ಅಭ್ಯಾಸ ಮಾಡುವ ಸೌಲಭ್ಯ ವಿದ್ಯಾರ್ಥಿಗಳಿಗಿರುತ್ತದೆ. ಇದರಿಂದಾಗಿ ಗೃಹಿಣಿಯರಿಗೆ ಮತ್ತು ಉದ್ಯೋಗಿಗಳಿಗೆ ಸಮಯ ಹೊಂದಿಸಿಕೊಳ್ಳುವುದು ಸುಲಭವಾಯಿತು. ಯಾವುದೇ ಪರೀಕ್ಷೆಗೆ ಕಟ್ಟುವ ತಯಾರಿ ಆ ಶಾಲೆಯಲ್ಲಿ ನಡೆಯುವುದಿಲ್ಲ. ಪರೀಕ್ಷೆಗಾಗಿ ಮಕ್ಕಳನ್ನು ತಯಾರು ಮಾಡುವುದು ತಮ್ಮ ಶಾಲೆಯ ಉದ್ದೇಶವೇ ಅಲ್ಲ ಅನ್ನುತ್ತಾರೆ ಬಿ.ಜಿ.ಎಂ. "ಎಷ್ಟೋ ಮಂದಿಗೆ ಚಿತ್ರಕಲೆಯಲ್ಲಿ ಸಹಜ ಪ್ರತಿಭೆ ಇರುತ್ತದೆ. ಅದನ್ನು ಯೋಗ್ಯ ಮಾರ್ಗದರ್ಶನದಲ್ಲಿ ಬೆಳೆಸಿಕೊಳ್ಳುವ ಅಪೇಕ್ಷೆಯೂ ಅವರಿಗಿರುತ್ತದೆ. ಇವರು ಸರ್ಟಿಫಿಕೇಟ್‌ಗಾಗಿ ಬರುವ ವಿದ್ಯಾರ್ಥಿಗಳಲ್ಲ. ಇಂಥವರಲ್ಲಿ ಎಲ್ಲ ವರ್ಗಕ್ಕೆ, ಎಲ್ಲ ವಯೋಮಾನಕ್ಕೆ ಸೇರಿದವರಿರುತ್ತಾರೆ. ಈ ಹವ್ಯಾಸಿಗಳಿಗೆ ತಮ್ಮ ಆಸಕ್ತಿಯನ್ನು ಕ್ರಮಬದ್ಧವಾಗಿ ಬೆಳೆಸುವ ಅವಕಾಶವನ್ನು ನಾವು ಒದಗಿಸುತ್ತೇವೆ. ಪರೀಕ್ಷೆ ಪಾಸು ಮಾಡುವ ಉದ್ದೇಶದಿಂದ ಬರುವ ಮಕ್ಕಳಿಗೆ ಮಾರ್ಗದರ್ಶನ ನೀಡಿ ನಾವೇ ಬೇರೆ ಕಡೆಗೆ ಕಳುಹಿಸುತ್ತೇವೆ".

ಆಸಕ್ತರಿಗೆ ಇಲ್ಲಿ ಫ್ರೀ ಹ್ಯಾಂಡ್, ಪೆನ್ಸಿಲ್ ಚಿತ್ರ, ಚಾರ್ಕೋಲ್, ವಾಟರ್ ಕಲರ್, ಕ್ರಯಾನ್, ಇಂಡಿಯನ್ ಇಂಕ್ ಮತ್ತು ತೈಲ ಚಿತ್ರದಲ್ಲಿ ಶಿಕ್ಷಣ ನೀಡಲಾಗುತ್ತದೆ. ನವ್ಯ ಚಿತ್ರಕ್ಕೆ ಇಲ್ಲಿ ಸ್ಥಾನವಿಲ್ಲ.

"ನಾನು ಹಿಡಿದಿರುವ ಕಲೆಯ ಪ್ರಕಾರದಲ್ಲೇ ಕಲಿಯಬೇಕಾದ್ದು ಬಹಳಷ್ಟು ಉಳಿದುಕೊಂಡಿದೆ. ಹಾಗಿರುವಾಗ ನವ್ಯ ಚಿತ್ರದ ತಂಟೆ ನನಗೇಕೆ?" ಎಂದು ನಗುತ್ತಾ ಪ್ರಶ್ನಿಸುತ್ತಾರೆ ಮಹಮದ್. ಹಾಗೆಂದು ಅವರು ನವ್ಯ ಶೈಲಿಯ ವಿರೋಧಿಗಳೇನೂ ಅಲ್ಲ.

ತಮ್ಮ ಬಿಡುವಿನ ವೇಳೆಯನ್ನು ಈಗಲೂ ಚಿತ್ರ ರಚನೆಗಾಗಿ ಮೀಸಲಿಡುತ್ತಾರೆ ಮಹಮದ್. ಪ್ರಕೃತಿ ಅವರ ಮಟ್ಟಿಗೆ ನಿತ್ಯ ನೂತನ. ನಿಮಿಷ ನಿಮಿಷವೂ ಬದಲಾಗುತ್ತಿರುವ ಆಕೆಯ ವೈಭವ ವಿಲಾಸಗಳನ್ನು ಚಿತ್ರಿಸುವುದರಲ್ಲಿ ಮಹಮದರಿಗೆ ಆಯಾಸವೆಂಬುದಿಲ್ಲ. ಪಡುವಣ ತೀರದ ಕಾರ್ಗಾಲದ ವೈಭವ ಅವರ ಹತ್ತಾರು ಚಿತ್ರಗಳಿಗೆ ವಸ್ತುವಾಗಿದೆ. ಅವರ ಇನ್ನೊಂದು ಅಚ್ಚುಮೆಚ್ಚಿನ ವಸ್ತು ಕಡಲು. ಅವರ ಚಿತ್ರಗಳಲ್ಲಿ ಕಡಲಿಗೆ ಎಷ್ಟೊಂದು ಮುಖಗಳು! ಎಲ್ಲವೂ ಅಪ್ಪಟ ಸಾಂಪ್ರದಾಯಿಕ ಶೈಲಿಯ ಗಾಂಭೀರ್ಯದಲ್ಲಿ ಅಭಿವ್ಯಕ್ತಗೊಂಡಿವೆ. ಮಹಮದ್ ಅವರ ಅನೇಕ ಕೃತಿಗಳು ಪ.ಜರ್ಮನಿ, ಆಸ್ಟ್ರೇಲಿಯಾ, ಮತ್ತು ಕೊಲ್ಲಿ ರಾಷ್ಟ್ರಗಳ ಖಾಸಗಿ ಸಂಗ್ರಹಕಾರರಲ್ಲಿವೆ.

ಇದೀಗ ಮಹಮದ್ ಅವರು ತಮ್ಮ ಶಾಲೆಯ ಜವಾಬ್ದಾರಿಯನ್ನು ತಮ್ಮ ಮಗ ಶಬೀರ್ ಅಲಿ ಅವರಿಗೆ ವಹಿಸಿಕೊಟ್ಟು ತಾವು ಮನೆಯಲ್ಲಿ ವಿಶ್ರಾಂತಿ ಜೀವನವನ್ನು ಅನುಭವಿಸುತ್ತಾರೆ. ಆದರೆ ವಿದ್ಯಾರ್ಥಿಗಳು ಅಲ್ಲಿಗೂ ಅವರನ್ನು ಅರಸಿಕೊಂಡು ಬರುತ್ತಾರೆ. ಬಂದವರನ್ನು ಎಂದೂ ಹೋಗು ಅಂದವರಲ್ಲ ಮಹಮದ್. ರಜಾ ದಿನಗಳಲ್ಲಿ ಅವರ ಮನೆಯೂ ಶಾಲೆಯ ರೂಪ ತಾಳುವುದಿದೆ.

ಪ್ರತಿಫಲಾಪೇಕ್ಷೆ ಇಲ್ಲದೆ ಶಿಕ್ಷಣ ನೀಡಬೇಕೆಂದು ಯಾರೂ ಅನ್ನಲಾರರು. ಆದರೆ ಅದೊಂದೆ ಗುರಿಯಾದರೆ ಕಲಾ ಶಿಕ್ಷಣ ಮಹತ್ವವನ್ನು, ಉದ್ದೇಶವನ್ನು ಕಳೆದುಕೊಳ್ಳುತ್ತದೆ ಎನ್ನುವುದನ್ನು ಬಲವಾಗಿ ಪ್ರತಿಪಾದಿಸುತ್ತಾರೆ ಮಹಮದ್. ಮಾತಿನಲ್ಲಷ್ಟೇ ಅಲ್ಲ, ಕ್ರಿಯೆಯಲ್ಲಿ ಕೂಡಾ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮಹಮದ್ ಉಚಿತವಾಗಿ ಶಿಕ್ಷಣ ನೀಡುತ್ತಿದ್ದಾರೆ. ಕಿವುಡ, ಮೂಕ ವಿದ್ಯಾರ್ಥಿಗಳಿಗೂ ಮಹಮದ್ ಅವರು ಚಿತ್ರಕಲೆಯಲ್ಲಿ ತರಬೇತಿ ನೀಡುತ್ತಿದ್ದಾರೆ.

ಮಹಮದ್ ಅವರದ್ದು ಅಪರೂಪದ್ದೆನ್ನಬಹುದಾದ ಆದರ್ಶ ಕುಟುಂಬ. ಅವರ ಶ್ರೀಮತಿಯವರೂ ಉತ್ತಮ ಚಿತ್ರ ಕಲಾವಿದೆಯಾಗಿರುತ್ತಾರೆ. ಮೈಸೂರಿನ ಎಸ್.ಎಂ. ಸೂಫಿ ಅವರಲ್ಲಿ ತರಬೇತಿ ಪಡೆದ ಆಕೆಯ ಕೆಲವು ಸುಂದರ ಕೃತಿಗಳನ್ನು ಕಲಾ ಶಾಲೆಯಲ್ಲಿ ಕಾಣಬಹುದಾಗಿದೆ. ಇದೀಗ ಕಲಾ ಶಾಲೆಯನ್ನು ನಡೆಸುತ್ತಿರುವ ಶಬೀರ್ ಆಲಿ ಕೂಡಾ ತಂದೆಯ ಹೆಜ್ಜೆಯನ್ನು ಅನುಸರಿಸುತ್ತಿದ್ದಾರೆ.

ಕಲೆಯ ವಿಚಾರದಲ್ಲಿ ಮಹಮದ್ ಅವರದ್ದು ಮುಕ್ತ ಮನಸ್ಸು. ಮಗುವಿನಿಂದಲೂ ನಾವು ಕಲಿಯುವುದಿದೆ ಅನ್ನುತ್ತಾರೆ ಅವರು. ತಮ್ಮ ಹೊಸ ರಚನೆಗಳನ್ನು ತಾವೇ ಮೊದಲಾಗಿ ಕುಟುಂಬದ ಸದಸ್ಯರ ವಿಮರ್ಶೆಗೆ ಒಡ್ಡುತ್ತಾರೆ. ಮಧ್ಯ ರಾತ್ರಿಯವರೆಗೂ ತಾವು ಒಂದು ಚಿತ್ರದ ಗುಣಾವಗುಣಗಳನ್ನು ಚರ್ಚಿಸಿದ್ದಿದೆ ಎಂದು ಜ್ಞಾಪಿಸಿಕೊಳ್ಳುತ್ತಾರೆ ಅವರು.

ತಮ್ಮ ಕಲಾ ಜೀವನದ ಬಗ್ಗೆ ಮಹಮದ್ ಅವರಿಗೆ ತುಂಬ ತೃಪ್ತಿ ಇದೆ. ತಮ್ಮನ್ನು ಆದರದಿಂದ ನಡೆಸಿಕೊಂಡ ವಿಚಾರದಲ್ಲಿ ಮಂಗಳೂರಿನ ಕಲಾ ರಸಿಕರ ಬಗ್ಗೆ ಅವರಲ್ಲಿ ಕೃತಜ್ಞತಾಭಾವ ಇದೆ. ನಮ್ಮ ಜನರಲ್ಲಿ ಕಲಾಭಿರುಚಿ ಇಲ್ಲ ಎನ್ನುವ ಮಾತು ಸುಳ್ಳು. ಹಾಗಿದ್ದಿದ್ದರೆ ತಮ್ಮ ಕಲಾ ಶಾಲೆ ರಜತಮಹೋತ್ಸವವನ್ನು ಆಚರಿಸುತ್ತಿರಲಿಲ್ಲ ಎಂದು ತೋರಿಸಿಕೊಡುತ್ತಾರೆ.

ರಾಜ್ಯ ಲಲಿತಕಲಾ ಅಕಾಡೆಮಿ ಮಹಮದ್ ಅವರನ್ನು 1981ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿರುತ್ತದೆ. ಊರ, ಪರವೂರ ಸಂಘ–ಸಂಸ್ಥೆಗಳೂ ಇವರ ಕಲಾ ಸೇವೆಯನ್ನು ಗುರುತಿಸಿ ಸನ್ಮಾನಿಸಿರುತ್ತವೆ.

ಈಶ್ವರಯ್ಯ ಎ.

ಬಿ.ಜಿ. ಮಹಮದ್



ಪ್ರಕೃತಿ ಚಿತ್ರ

ವಿ. ಸಿ. ಮಾಲಗತ್ತಿ



ವೀರಬಸಪ್ಪ ಚನ್ನಬಸಪ್ಪ ಮಾಲಗತ್ತಿ ಅವರದು ಕರ್ನಾಟಕದಾದ್ಯಂತ ಮೇಲಿಂದ ಮೇಲೆ ಹಲವು ಕಾರಣಗಳಿಗಾಗಿ ಕೇಳಿಬರುವ ಹೆಸರು. ಬಹುಮುಖ ವ್ಯಕ್ತಿತ್ವ, ರಾಜ್ಯದ ಕಲಾ ಕ್ಷೇತ್ರಕ್ಕೆ ಅವರ ಹೆಸರು ಸುಪರಿಚಿತ. ಉತ್ತರ ಕರ್ನಾಟಕದ ಕಲಾ ಶಿಕ್ಷಣದ ಬೆಳವಣಿಗೆಯಲ್ಲಿ ಮುಖ್ಯ ಮಾರ್ಗದರ್ಶಕರಾದವರಲ್ಲಿ ಒಬ್ಬ ರಾಗಿದ್ದಾರೆ.

ಬಾಲ್ಯ ಹಾಗೂ ಕಲಾ ಪರಿಸರ :

ಬಿಜಾಪುರ ಜಿಲ್ಲೆಯ ಇಳಕಲ್ಲು ಸೀರೆಗೆ, ನೇಯ್ಗೆ ಕಲಾವಿದರಿಗೆ ಪ್ರಸಿದ್ಧವಾದ ಸ್ಥಳ. ಅದು ಮಾಲಗತ್ತಿಯವರು ಹುಟ್ಟಿದ ಸ್ಥಳ. ಅವರು 18, ಅಕ್ಟೋಬರ್ 1922ರಂದು ಹುಟ್ಟಿದರು. ತಂದೆ ಚೆನ್ನ ಬಸಪ್ಪ, ತಾಯಿ ಅಡಿವೆವ್ವ. ಹುಟ್ಟಿದುದು ಇಳಕಲ್ಲಾದರೂ ಮುಂದೆ ಅವರ ಕಾರ್ಯಕ್ಷೇತ್ರವಾದುದು ಕರ್ನಾಟಕದ ಗಡಿನಾಡ ಪ್ರದೇಶವಾದ ಬೆಳಗಾವಿ. ಪ್ರಾಥಮಿಕ ಶಿಕ್ಷಣವನ್ನು ಇಳಕಲ್ಲದಲ್ಲಿ ಮುಗಿಸಿ, ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸಿದರು. ಬಾಲ್ಯದಲ್ಲಿಯೇ ನೇಕಾರಿಕೆಯ ಕಲಾ ಪರಿಸರಲ್ಲಿ ಬೆಳೆದ ವೀರಬಸಪ್ಪನವರಿಗೆ ಕಲೆಯಲ್ಲಿ ಆಸಕ್ತಿ ಹುಟ್ಟಿದುದು ಸಹಜವೇ. ಮುಂಧೆ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಭ್ಯಾಸ. ಎಲಿಫಿನೆವನ್ ಕೈಗಾರಿಕಾ ಶಾಲೆ ಹಾಗೂ ನೂತನ ಕಲಾಮಂದಿರದಲ್ಲಿಯೂ ಕಲಾ ಶಿಕ್ಷಣ ಪಡೆದು ಮಾಸ್ಟರ್ ಆಫ್ ಆರ್ಟ್ಸ್ ಪದವಿ ಪಡೆದುಕೊಂಡು ಮರಳಿ ಬೆಳಗಾವಿಗೆ ಬಂದರು. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಕಾಲೇಜಿಗೆ ಚಿತ್ರಕಲಾ ಪ್ರಾಧ್ಯಾಪಕರಾಗಿ ನೇಮಿತರಾದ ಮಾಲಗತ್ತಿ 1945 ರಿಂದ 1987ರ ವರೆಗೆ ಅಲ್ಲಿ ಕೆಲಸ ಮಾಡಿ ಮುಂದೆ ಜಿ.ಎ. ಜ್ಯೂನಿಯರ್ ಕಲಾ ವಿಭಾಗದ ಮುಖ್ಯಸ್ಥರಾಗಿ, ಹಾಗೂ ಜೆ.ಎನ್. ಮೆಡಿಕಲ್ ಕಾಲೇಜಿನಲ್ಲಿ ಕಲಾ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು.

ಕಲಾ ಪ್ರದರ್ಶನಗಳು :

ವಿದ್ಯಾರ್ಥಿ ದೆಸೆಯಿಂದಲೇ ಮಾಲಗತ್ತಿಯವರು ಮುಂಬಯಿಯ ಹಲವಾರು ಸ್ಥಳಗಳಲ್ಲಿ, ಪುಣೆ ಹಾಗೂ ಬನಾರಸ್‌ಗಳಲ್ಲಿ ನಡೆದ ಸಾಮೂಹಿಕ ಪ್ರದರ್ಶನಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಪಡೆದರು. ಮೈಸೂರು ದಸರಾ ಪ್ರದರ್ಶನದಲ್ಲಿ ಭಾಗವಹಿಸಿದಾಗ ರಜತ ಪದಕ ಹಾಗೂ ಪ್ರಶಸ್ತಿಗಳು ಲಭಿಸಿದುವು.

1973ರಲ್ಲಿ ಮಾಲಗತ್ತಿಯವರು ವಿದೇಶ ಪ್ರವಾಸ ಕೈಗೊಂಡು ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್, ಸ್ವಿಟ್ಸರ್‌ಲೆಂಡ್ ಮತ್ತು ಇರಾಕ್ ದೇಶಗಳಿಗೆ ಪ್ರವಾಸ ಮಾಡಿ, ಆಯಾ ದೇಶದಲ್ಲಿಯ ಕಲಾ ಶಿಕ್ಷಣ ಹಾಗೂ ಆರ್ಟ್ ಗ್ಯಾಲರಿಗಳ ಬಗ್ಗೆ ವಿಚಾರಪೂರ್ಣ ಲೇಖನಗಳನ್ನೂ ಬರೆದಿದ್ದಾರೆ. ಜೊತೆಗೆ ಅಲ್ಲಲ್ಲಿ ತಮ್ಮ ಕಲಾ ಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸಿ ಮೆಚ್ಚುಗೆ ಪಡೆದರು.

ಭಾರತದಾದ್ಯಂತ ಭಾರತೀಯ ಕಲೆಯ ಬಗೆಗೆ ಐತಿಹಾಸಿಕ, ಮಹತ್ವಪೂರ್ಣವಾದ ಶಿಲ್ಪಕಲೆಗಳ ಬಗೆಗೆ ಅನೇಕ ಚಿತ್ರಸಹಿತ ಲೇಖನಗಳನ್ನೂ ಬರೆದಿದ್ದಾರೆ ಮಾಲಗತ್ತಿ.

ವಿವಿಧ ಕಲಾ ಕ್ಷೇತ್ರಗಳಲ್ಲಿಯ ಸೇವೆ :

ಮುಂಬಯಿ ಪ್ರಾಂತದ ಕರ್ನಾಟಕ ಆರ್ಟಿಸ್ಟ್ಸ್ ಸೊಸೈಟಿಯ ಸದಸ್ಯರಾದ ಮಾಲಗತ್ತಿಯವರು ಕಲಾ ಶಿಕ್ಷಣಕ್ಕಾಗಿ ಅಪಾರ ಕಳಕಳಿಯಿಂದ ದುಡಿದವರು. ರಾಜ್ಯಗಳ ಪುನರ್ ವಿಂಗಡಣೆಯ ನಂತರ ಕರ್ನಾಟಕ ರಾಜ್ಯದಲ್ಲಿ ಕಲಾ ಕೈಗಾರಿಕಾ ಶಿಕ್ಷಣ ಆರಂಭಿಸಲಿಕ್ಕೆ ಶ್ರಮವಹಿಸಿದವರಲ್ಲಿ ಮಾಲಗತ್ತಿಯವರೂ ಒಬ್ಬರು.

ಅವರ ಅವಧಿಯಲ್ಲಿ ಜರುಗಿದ ಕಲಾ ಶಿಕ್ಷಣದ ಪ್ರಗತಿಯ ಕಾರ್ಯ ಉಲ್ಲೇಖನೀಯವಾದುದ್ದು.

ಈ ಕಳಕಳಿ ಹಾಗೂ ಸೇವೆಯನ್ನು ಮನ್ನಿಸಿ, ರಾಜ್ಯ ಸರ್ಕಾರ ಮಾಲಗತ್ತಿಯವರನ್ನು 1960ರಲ್ಲಿ ಕಲೆ ಹಾಗೂ ಕೈಗಾರಿಕಾ ಪರೀಕ್ಷಾ ಮತ್ತು ಶಿಕ್ಷಣ ಸಲಹಾ ಮಂಡಳಿಯ ಸದಸ್ಯರನ್ನಾಗಿ ನೇಮಿಸಿತು. 1975ರವರೆಗೆ ಅದರ ಸದಸ್ಯರಾಗಿ ಕೆಲಸ ಮಾಡಿದ್ದಲ್ಲದೇ ಕಲಾ ಶಿಕ್ಷಣದ ಅಭ್ಯಾಸ ಪತ್ರಿಕೆಯ ಪರೀಕ್ಷೆಗಳಿಗಾಗಿ ನಿಯಮಗಳ ಸಮಿತಿಯ ಸದಸ್ಯರಾಗಿ ಸುಮಾರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಗ್ರ್ಯಾಂಟ್ ಇನ್ ಏಡ್ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಾಗಿಯೂ, ದಾವಣಗೆರೆ ಸ್ಕೂಲ್ ಆಫ್ ಆರ್ಟ್‌ನ ಸಲಹಾ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. 1967ರಲ್ಲಿ ದೆಹಲಿಯಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಕ್ಕಳ ಕಲಾ ಪ್ರದರ್ಶನ ಸಮಿತಿಯ ಸದಸ್ಯರಾಗಿ ಮಕ್ಕಳ ಕಲಾಭಿವೃದ್ಧಿಗೆ ಅಮೂಲ್ಯ ಸಲಹೆಗಳನ್ನು ಮಾಡಿದ್ದಾರೆ ಮಾಲಗತ್ತಿ.

ಬಹುಮುಖ ವ್ಯಕ್ತಿತ್ವ :

ಕಲಾವಿದ ಹಾಗೂ ಸಾಹಿತಿಯೂ ಆದ ಮಾಲಗತ್ತಿಯವರು ಕಲೆಯ ವಿಷಯದ ಸತ್ವಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಕಲಾವಿದನಂತೆಯೇ ಸಾಹಿತಿಯಾಗಿಯೂ ಪ್ರಕಾಶಮಾನಕ್ಕೆ ಬಂದ ಮಾಲಗತ್ತಿ ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಆಯ್ಕೆಗೊಂಡು ಸಾಹಿತ್ಯ ಕ್ಷೇತ್ರಕ್ಕೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಕಲಾಕೃತಿಗಳ ವಿಶ್ಲೇಷಣೆ :

ಕರ್ನಾಟಕದಲ್ಲಿ ಅಷ್ಟೇ ಅಲ್ಲದೇ ಭಾರತದ ವಿವಿಧ ಭಾಗಗಳಲ್ಲಿ ಹಾಗೂ ವಿದೇಶಗಳಲ್ಲಿಯೂ ತಮ್ಮ ಕಲಾಕೃತಿಗಳ ಪ್ರದರ್ಶನಗಳನ್ನೇರ್ಪಡಿಸಿದ ಮಾಲಗತ್ತಿಯವರು ಸಾಂಪ್ರದಾಯಿಕ ಚಿತ್ರಗಳ ಜೊತೆಗೆ ಆಧುನಿಕ ಶೈಲಿಯಲ್ಲೂ, ತೈಲವರ್ಣ ಜಲ ವರ್ಣಗಳ ಮಾಧ್ಯಮದಲ್ಲಿ ಚಿತ್ರಗಳನ್ನು ರಚಿಸಿದ್ದಾರೆ. ಬಹುಮಟ್ಟಿಗೆ ಸಾಂಕೇತಿಕವಾಗಿ ರಚಿತಗೊಂಡಿವೆ. ವಿವಿಧ ಪೇಚುಗಳಿಂದ ಕುಸ್ತಿಯಾಡುವಾಗಿನ, ವಿವಿಧ ಪೋಜುಗಳನ್ನು ಒಳಗೊಂಡ ಚಿತ್ರದಲ್ಲಿ ಬೆಳಕು–ಕತ್ತಲಿನ, ದಪ್ಪ ಹಾಗೂ ತೆಳು ಗೆರೆಗಳಿಂದ ಆವೃತಗೊಂಡ ವರ್ಣಮೇಳ ರಂಜನೀಯವಾಗಿದೆ.


ಬಹುಮಾನ ಹಾಗೂ ಪ್ರಶಸ್ತಿಗಳು:

ವಿದ್ಯಾರ್ಥಿ ದೆಸೆಯಿಂದಲೇ ಕಲಾ ಪ್ರದರ್ಶನಗಳಲ್ಲಿ ಸಾಕಷ್ಟು ಬಹುಮಾನಗಳನ್ನು ಪಡೆದ ಮಾಲಗತ್ತಿ ಕರ್ನಾಟಕ ಲಲಿತಕಲಾ ಅಕಾಡೆಮಿಯ 1980ರ ವಾರ್ಷಿಕ ಪ್ರಶಸ್ತಿ, 1985ರಲ್ಲಿ ಅಖಿಲ ಭಾರತ ಲಲಿತಕಲಾ ಕೈಗಾರಿಕಾ ಸಂಸ್ಥೆ, ನವ ದೆಹಲಿ ಅವರಿಂದ ರಜತ ಫಲಕವನ್ನೂ ಪಡೆದರು.

ಈ ಇಳಿ ವಯಸ್ಸಿನಲ್ಲೂ ಮಾಲಗತ್ತಿಯವರು ಸದಾ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಹಾಗೂ ಕಲಾ ಚಟುವಟಿಕೆಗಳಲ್ಲಿ ಅತ್ಯಂತ ಆಸಕ್ತಿಯಿಂದ ಪಾಲ್ಗೊಳ್ಳುವಂಥ ಉತ್ಸಾಹಿಗಳಾಗಿದ್ದಾರೆ. ಗಂಭೀರ, ನಿಷ್ಠುರವಾದಿ, ಅಷ್ಟೇ ಒಳ್ಳೆಯತನಕ್ಕೆ, ಪ್ರತಿಭೆಗೆ ಅತ್ಯಂತ ಗೌರವವನ್ನು ಕೊಡುವ ಮೃದು ಹೃದಯದ ಸದುವಿನಯದ ವ್ಯಕ್ತಿ ವೀರಬಸಪ್ಪ ಚನ್ನಬಸಪ್ಪ ಮಾಲಗತ್ತಿ.

ಅನ್ನದಾನಿ ಹಿರೇಮಠ

ವಿ.ಸಿ. ಮಾಲಗತ್ತಿ



ಸಂಯೋಜನೆ

ರಾಘವೇಂದ್ರ ಚವಟಿ



ಶಿಲ್ಪಕಲೆ ಒಂದು ಕಷ್ಟಸಾಧ್ಯ ಕಲೆ. ಕಾವ್ಯ, ಸಂಗೀತ, ನೃತ್ಯಗಳ ಭಾವ ಲಯಕ್ಕಿಂತಲೂ ಅತಿ ಸೂಕ್ಷ್ಮ ಅರಿವು, ಹಿಡಿತಗಳು ಶಿಲ್ಪಿಗೆ ಅವಶ್ಯಕ. ಇಂತಹ ಸಿದ್ಧಿ ಪಡೆದವರು ರಾಘವೇಂದ್ರ ಚವಟಿ. ಶಾಸ್ತ್ರ ಶುದ್ಧ ಪರಂಪರೆಯಲ್ಲಿಯೇ ಕಲಾಕೃತಿ ನಿರ್ಮಿಸಿ ಖ್ಯಾತಿ ಗಳಿಸಿದ್ದುದು ಅವರ ವೈಯಕ್ತಿಕ ಹಿರಿಮೆ.

ಜನನ, ಬಾಲ್ಯ, ವಿದ್ಯಾಭ್ಯಾಸ :

1915ರಲ್ಲಿ ಜನಿಸಿದ ರಾಘವೇಂದ್ರ ಚವಟಿಯವರ ತಂದೆ ಭಾಸ್ಕರಪ್ಪ, ತಾಯಿ ಪಾರ್ವತಿದೇವಿ. ಬಾಲ್ಯಕಾಲ ಸುಖದಲ್ಲಿ ಕಳೆಯಿತು. ಸರಾಫಿಯ ವ್ಯಾಪಾರ ಇವರ ಮನೆತನದ ಮೂಲ ಉದ್ಯೋಗವಾದ ಕಾರಣ ಚಿಕ್ಕವರಾಗಿದ್ದಾಗ ಇವರಿಗೆ ಇವರ ತಂದೆ ಬಂಗಾರದ ತಗಡಿನಲ್ಲಿ ಕುಸುರಿನ ಕೆಲಸ ಮಾಡಿದ ಟೊಪ್ಪಿಗೆಯನ್ನು ವಿಶೇಷ ಸಂದರ್ಭದಲ್ಲಿ ಹಾಕಿ ಕೊಳ್ಳಲು ಕೊಡುತ್ತಿದ್ದರಂತೆ. ಹೀಗೆ ಸಂತೋಷದ ದಿನಗಳು ಉರುಳುತ್ತಿದ್ದಂತೆ ಅವರ 12ನೆಯ ವಯಸ್ಸಿನಲ್ಲಿ ಅವರ ತಂದೆಯವರು ಅನಿರೀಕ್ಷಿತವಾಗಿ ಮರಣ ಹೊಂದಿದುದರಿಂದ ಮಾಧ್ಯಮಿಕ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಮುಗಿಸಿ ಮನೆಯ ಜವಾಬ್ದಾರಿಯನ್ನು ಹೊರಬೇಕಾಯಿತು. ಕಲೆಯ ಕಡೆಗೆ ವಿಶೇಷ ಒಲವು ಇರುವುದನ್ನು ಗುರುತಿಸಿದ ಕಲಘಟಗಿಯ ನಾಯಕರು ರಾಮಣ್ಣ ಹಾನಗಲ್ಲ ಹಾಗೂ ಸವಾಯಿ ಗಂದರ್ವರ ಸಂಪರ್ಕ, ಮಾರ್ಗದರ್ಶನದ ಸಹಾಯದೊಂದಿಗೆ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಕಲಾ ವಿದ್ಯಾರ್ಥಿಯಾಗಿ ಸೇರಿದರು. 1945 ರಿಂದ 1950ರವರೆಗೆ ಚಿತ್ರ, ಶಿಲ್ಪ, ಎಂಬೋಸಿಂಗ್, ಮಾಡ್ಲಿಂಗ್ ಹೀಗೆ ಕಲೆಯ ವಿವಿಧ ಮುಖಗಳನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿದ್ದಾರೆ. ಜೆ.ಡಿ. ಆರ್ಟ್ಸ್ ಪದವೀಧರರಾಗಿ 1950ರಲ್ಲಿ ಹುಬ್ಬಳ್ಳಿಗೆ ಹಿಂತಿರುಗಿದರು.

ಶಿಲ್ಪಕಲಾ ಶಾಲೆ

ಹುಬ್ಬಳ್ಳಿಗೆ ಬಂದ ಚವಟಿಯವರು ಅನೇಕ ಮಿತ್ರರ ಸಲಹೆ ಮತ್ತು ತಮ್ಮ ಆಸಕ್ತಿಗೆ ಅನುಗುಣವಾಗಿ ಉತ್ತರ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಶಿಲ್ಪ ಕಲಾ ಶಾಲೆಯನ್ನು ತೆರೆದರು. ಧಾರವಾಡದಲ್ಲಿ ಹಾಲಭಾವಿಯವರು ಚಿತ್ರಕಲಾ ಶಾಲೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದರು. ಅದೇ ರೀತಿಯಲ್ಲಿ ಶಿಲ್ಪಕಲಾ ಶಾಲೆಯನ್ನು ತಾನೂ ಬೆಳೆಸಬೇಕೆಂಬ ಅಭಿಲಾಷೆ ಇವರದಾಗಿತ್ತಂತೆ. ಆದರೆ ಈ ಕನಸು ನನಸಾಗಲಿಲ್ಲ. ವಿದ್ಯಾರ್ಥಿಗಳ ಕೊರತೆಯಿಂದಾಗಿ ಶಾಲೆಯನ್ನು ಮುಚ್ಚಿಬಿಡಬೇಕಾಯಿತು. ಮುಂದೆ ಜೀವನದಲ್ಲಿ ದಾರುಣ ದಿನಗಳು. ಒಬ್ಬರಾದ ಮೇಲೆ ಒಬ್ಬರಂತೆ ಇಬ್ಬರು ಹೆಂಡತಿಯರೂ ತೀರಿಕೊಂಡರು.

ಕಲಾಕೃತಿಗಳು

ಚವಟಿಯವರು ಸೃಷ್ಟಿಸಿದ ಕಲಾಕೃತಿಗಳಲ್ಲಿ ಕೆಲವನ್ನು ಇಲ್ಲಿ ಮಾದರಿಗಾಗಿ ವಿವರಿಸಬಹುದಾಗಿದೆ:

1. **ಮುರಲಿಧರನ ವಿಗ್ರಹ:** 1954ರಲ್ಲಿ ರಚನೆಗೊಂಡುದು. ತ್ರಿಭಂಗಿಯಲ್ಲಿ ಕೊಳಲನೂದುತ್ತ ನಿಂತಿರುವ ಮೂರು ಅಡಿ ಎತ್ತರದ ಶಿಲ್ಪವಿದು. ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿದೆ.
2. **ಹನುಮಂತ ದೇವರ ಶಿಲ್ಪ:** 1957ರಲ್ಲಿ ಪೂರ್ಣಗೊಂಡ ಈ ಶಿಲ್ಪ ಹುಬ್ಬಳ್ಳಿಯ ಅಶೋಕನಗರದಲ್ಲಿ

ಸ್ಥಾಪನೆಯಾಗಿದೆ. ನಿಂತಿರುವ ಹನುಮಂತನ ವಿಗ್ರಹ ಗಂಭೀರವಾದ ಮುಖಮುದ್ರೆಯಿಂದ ಕೂಡಿದ ಶಿಲ್ಪ.

3. ಅಕ್ಕಮಹಾದೇವಿಯ ಶಿಲ್ಪ: ಕಾರವಾರ ಜಿಲ್ಲೆಯ ಗೋಕರ್ಣದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಕುಳಿತು ಕೊಂಡಿರುವ ಭಂಗಿಯ ಈ ಶಿಲ್ಪ, ನುಣುಪಾದ, ನಯ–ನಾಜೂಕಿನಿಂದ ಪ್ರಮಾಣಬದ್ಧವಾದ ಶಾರೀರಿಕ ವಿನ್ಯಾಸ ದಿಂದ ಕೂಡಿದೆ.

4. ಪ್ರಾಣ ದೇವರ ವಿಗ್ರಹ: 1972ರಲ್ಲಿ ರೂಪುಗೊಂಡ ಈ ಶಿಲ್ಪ ಹುಬ್ಬಳ್ಳಿಯ ಶಟ್ಲಮೆಂಟನಗರದ ನಿವಾಸಿ ಗಳಿಗಾಗಿ ಸೃಷ್ಟಿಸಿರುವ ಈ ಶಿಲ್ಪವು ಪರಂಪರಾಗತ ಶೈಲಿಯಲ್ಲಿ ಕೈ ಮೇಲೆ ಎತ್ತಿ ಇನ್ನೊಂದು ಕೈಯನ್ನು ಸೊಂಟದ ಮೇಲಿಟ್ಟು ನಿಂತಿರುವ ಭಂಗಿಯಲ್ಲಿದೆ. ದಷ್ಟಪುಷ್ಟವಾದ ಸ್ನಾಯುಗಳು ಶರೀರದ ಅಂಗಾಂಗ ಗಳ ಪ್ರಮಾಣಬದ್ಧ ವಿನ್ಯಾಸದಿಂದ ಕೂಡಿದೆ. 1972 ರಲ್ಲಿ ಇದು ರಚನೆಗೊಂಡಿದೆ.

5. ಬೆಳ್ಳಿಯಲ್ಲಿ ಮಾಡಿದ ತುಳಜಾಭವಾನಿಯ ವಿಗ್ರಹ: ಇದು 300 ತೊಲ ಬೆಳ್ಳಿಯಲ್ಲಿ ಸೂಕ್ಷ್ಮವಾದ ಸುಳುವುಗಳಿಂದ ಕೆತ್ತನೆಗೊಂಡಿದೆ. ದೇವಿಯ ವಿನ್ಯಾಸದ ಶಾಸ್ತ್ರೋಕ್ತವಾದ ಎಲ್ಲ ಅಂಶಗಳನ್ನೂ ಶಿಲ್ಪದಲ್ಲಿ ತಂದಿರುವುದು ಗಮನಾರ್ಹ.

6. ಶ್ರೀ ವೀರಭದ್ರದೇವರ ಶಿಲ್ಪ : 1971ರಲ್ಲಿ ರೂಪಿತವಾದ ಈ ವಿಗ್ರಹ ಹುಬ್ಬಳ್ಳಿಯಿಂದ ಸುಮಾರು 30 ಮೈಲು ಅಂತರದಲ್ಲಿರುವ ಹಿರೆಉಳ್ಳಿಗೇರಿಯಲ್ಲಿ ಪ್ರತಿಷ್ಠಾಪನಗೊಂಡಿದೆ. ನಿರ್ಮಾಣಕ್ಕೆ ಹತ್ತು ವರ್ಷ ಗಳ ಕಾಲ ಹಿಡಿದ ಐದು ಅಡಿ ಎತ್ತರದ ಈ ಶಿಲ್ಪ ಬೇಲೂರು–ಹಳೇಬೀಡುಗಳ ಶಿಲ್ಪ ಕಲಾಕೃತಿಗಳನ್ನು ನೆನಪಿಗೆ ತರುತ್ತವೆ.

ಈ ವಿಗ್ರಹದ ಆಸರೆ ಎಂದರೆ ಪಾದವು ಪೀಠದ ಮೇಲೆ ನಿಂತು ಕಿರೀಟದ ಮೇಲಿನ ನಾಗಾಭರಣದ ಸ್ವಲ್ಪ ಭಾಗ ಪ್ರಭಾವಳಿಗೆ ತಗುಲಿದೆ. ಅಲ್ಲದೆ ಇದರ ನಡುವಿನ ಭಾಗವನ್ನು ಸೂಕ್ಷ್ಮವಾಗಿ ಬಿಡಿಸಿಕೊಳ್ಳಲಾಗಿದೆ. ಒಂದೇ ಕಲ್ಲಿನಲ್ಲಿ ಪೀಠ, ಪ್ರಭಾವಳಿ, ಸೊಂಟದ ಮೇಲೆ ಎಡಗೈವೂರಿ, ಬಲಗೈಯಲ್ಲಿ ಬಿಚ್ಚುಗತ್ತಿ ಹಿಡಿದ ಪ್ರಮಾಣಬದ್ಧ ಸಲಕ್ಷಣ, ವಿಗ್ರಹ ಮೊಣಕಾಲಿಗೆ ಸುತ್ತಿದ ಹಾವು, ತಲೆಯ ಮೇಲಿನ ಏಳು ಹೆಡೆಯ ಸರ್ಪ, ಅದರ ಮೇಲಿನ ಗಂಭೀರ ಸಿಂಹಾಕೃತಿ, ಸ್ಫುಟ ವಾದ ಅಂಗಾಂಗಗಳು ಪ್ರಭಾವಳಿಯ ಸೂಕ್ಷ್ಮಾತಿ ಸೂಕ್ಷ್ಮ ಕುಸುರಿನ ಸುಳುಹುಗಳು ಶಿಲ್ಪ ಚಾತುರ್ಯದ ಸಿದ್ಧಿಯ ಸಾಕ್ಷಿಯಾಗಿವೆ.

7. ಶ್ರೀ ವೆಂಕಟೇಶ ವಿಗ್ರಹ : ಚವಟಿಯವರ ಕೊನೆಯ ಶಿಲ್ಪವಿದು. ಐದು ಅಡಿ ಎತ್ತರವಿರುವ ಈ ಶಿಲ್ಪದ ನಿರ್ಮಾಣ 1972ರಿಂದ 15 ವರ್ಷ ಕಾಲ ಹಿಡಿಯಿತು. ವೀರಭದ್ರ ದೇವರ ಶಿಲ್ಪದ ನಂತರ ಮತ್ತೊಂದು ಮೇರು ಕೃತಿ ಈ ಶಿಲ್ಪ. ಆದರೆ ಇದರ ಕಾರ್ಯ ಇನ್ನು ಅಲ್ಪ–ಸ್ವಲ್ಪ ಉಳಿದಿರುವಾಗಲೆ ಚವಟಿಯವರ ಆರೋಗ್ಯ ಕೆಟ್ಟು ಮರಣವನ್ನಪ್ಪಿದುದು ವಿಷಾದಕರ.

ಧಾರವಾಡದ ಬಳಿಯ ಮುಂಡರಗಿಯ ದೇವಸ್ಥಾನದಲ್ಲಿ ಸ್ಥಾಪಿಸಲು ಸಿದ್ಧವಾದ ಕೃತಿ ಇದು.

ಸಂಗೀತದ ಹುಚ್ಚು :

ಶ್ರೀ ಚವಟಿಯವರು ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪದವಿ ಪಡೆದು ಹುಬ್ಬಳ್ಳಿಗೆ ಬಂದಮೇಲೆ ಖ್ಯಾತ ಕಲಾವಿದ ರಾಮಣ್ಣಾ ಪಾಟೀಲ ಅವರಲ್ಲಿ ಸಂಗೀತ, ಕಲ್ಲಪ್ಪ ಹೂಗಾರ ಅವರಲ್ಲಿ ತಬಲಾ ವಾದನಗಳ ಶಾಸ್ತ್ರೀಯ ಅಧ್ಯಯನ ಮಾಡಿ ಸವಾಯಿ ಗಂಧರ್ವರ ಪ್ರೀತಿಯನ್ನು ಸಹ ಗಳಿಸಿದರು. ಬಾಲ ಗಂಧರ್ವ, ಪೆಂಡಾರಕರ, ಮಾಸ್ಟರ ಕೃಷ್ಣ, ಗಂಗೂ ಬಾಯಿ ಹಾನಗಲ್, ಭೀಮಸೇನ ಜೋಶಿ ಮೊದಲಾದ ಸಂಗೀತಕಾರರ ಸಂಪರ್ಕ ಹೊಂದಿ ಅನೇಕ ಸಾರ್ವಜನಿಕ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟರು. ಒಳ್ಳೆಯ ತಬಲಾವಾದಕನೆಂದು ಅನೇಕ ಸಲ ಇವರಿಗೆ ಸತ್ಕಾರವೂ ಆಗಿದೆ.

ಚವಟಿಯವರ ಜೀವನದ ಬಹುಭಾಗ ಒಂದು ರೀತಿಯ ಸತ್ವಪರೀಕ್ಷೆಯೇ. ಅದು ಮಾನಸಿಕ ಮತ್ತು ಆರ್ಥಿಕವಾದುದು. ಇಬ್ಬರು ಹೆಂಡಿರಂತೆಯೇ ಮಕ್ಕಳೂ ತೀರಿಕೊಂಡರು. ಆಪ್ತರಾಗಿ ಪೋಷಕರಾಗಿದ್ದವರು ನಿಧನಹೊಂದಿದರು. ಮಾನಸಿಕ ಯಾತನೆ, ಬಡತನ, ಈ ಉದ್ವಿಗ್ನ ಸ್ಥಿತಿಗೆ ಅವರು ಕಂಡುಕೊಂಡ ಮದ್ದು ಶಿಲ್ಪ. ಅವುಗಳ ರಚನೆಯಲ್ಲಿ ಏಕಾಗ್ರತೆಯಿಂದ ಕೆಲಸ ಮಾಡಿ ಸಮಾಧಾನಪಟ್ಟರು. ಚವಟಿಯವರ ಶಿಲ್ಪಕಲಾ ಪ್ರವೀಣ್ಯತೆಯನ್ನು ಮನ್ನಿಸಿ ಅನೇಕ ಸಂಘ–ಸಂಸ್ಥೆ ಗಳೂ, ಗುರುಮನೆಗಳೂ ಸತ್ಕರಿಸಿದುವು.

ಕಲೆಯ ಕುರಿತು ಚವಟಿಯವರ ವಿಚಾರಗಳು :

ಬದುಕಿದ್ದಾಗ ಪತ್ರಕರ್ತರು ಕೇಳಿದ ಪ್ರಶ್ನೆ ಗಳಿಗೆ ಅವರು ನೀಡಿದ ಉತ್ತರ ಹೀಗಿವೆ. "ಸದ್ಯಕ್ಕೆ ಶಿಲ್ಪಕಲೆಯ ಸ್ಥಿತಿ–ಗತಿ ಬಗ್ಗೆ ನಿಮ್ಮ ಅಭಿಪ್ರಾಯ ವೇನು?" ಬೇಲೂರು ಬಾದಾಮಿಗಳಂತೆ ನಿರ್ಮಿಸಬಲ್ಲ ಶಿಲ್ಪಿಗಳು ಈಗಿಲ್ಲ. ಈ ಶಿಲ್ಪಕಲೆ ಗತಕಾಲದ ಕತೆ ಎಂಬ ಭಾವನೆ ಸಮಾಜದಲ್ಲಿದೆ. ಶಿಲ್ಪಿಗಳ ಸಂಖ್ಯೆ

ಇಂದು ವಿರಳವಾದರೂ ಕೆಲವರಾದರೂ ಇದ್ದಾರೆ. ಅವರಿಗೆ ಆಶ್ರಯವಿಲ್ಲ, ಧನಿಕರ ಕನಿಕರವಿಲ್ಲ. ಈ ಕಲೆಯನ್ನು ನಂಬಿ ಬಾಳುವ ಕಾಲ ಇದಲ್ಲ. ಅದನ್ನು ಉಳಿಸಿಕೊಳ್ಳುವುದೆಂತು? ಇದ್ದ ಶಿಲಾ ಮಂದಿರಗಳು ಹಾಳಾಗುಹತ್ತಿವೆ. ಮೂರ್ತಿಗಳು ಕಳುವಾಗುಹತ್ತಿವೆ. ಸರಕಾರದ ಗಮನ ಅಷ್ಟಾಗಿ ಇಲ್ಲ. ಜನಸಾಮಾನ್ಯರಂತೂ ಪಾಶ್ಚಾತ್ಯ ಅಂಧಾನುಕರಣೆಯಿಂದ ಶಿಲ್ಪ ಕಲಾನುಭೂತಿ ಮರೆತಿದ್ದಾರೆ ಅಂದಮೇಲೆ ಶಿಲ್ಪಕ್ಕೆಲ್ಲಿದೆ ಸ್ಥಾನ? ಎಂದು ಉತ್ತರಿಸಿದ್ದಾರೆ. ಶಿಲಾ ಮೂರ್ತಿಗಳ ಕುರಿತು ಅವರು ವ್ಯಕ್ತಪಡಿಸಿದ ವಿಚಾರಗಳು ಹೀಗಿವೆ. "ಬಹು ಕಡಿಮೆ ರೀತಿಯಲ್ಲಿ ಕಲಾಕೃತಿಗಳು ಬರುತ್ತಿವೆ. ಇದು ರಾಜಕೀಯ ಧುರೀಣರ ಪ್ರತಿಮೆಯ ಅನಾವರಣದ ಕಾಲ. ಈ ಪ್ರತಿಮೆಗಳು ಕಂಚು ಅಥವಾ ಸಿಮೆಂಟ್‌ನಲ್ಲಿ ಆಗುತ್ತವೆ. ಆದಕ್ಕೆ ಖರ್ಚು ಕಡಿಮೆ. ಶಿಲೆಗೆ ಬೆಲೆಯೆಲ್ಲಿ?'' ಎಂದಿದ್ದಾರೆ. ಶಿಲ್ಪಕಲೆ ಕಲಿಯುವವರು ಬಹು ಕಡಿಮೆ. ಈ ಕಲೆ ಕಠಿಣವಾದುದು, ಆದಕ್ಕೆ ಪ್ರೋತ್ಸಾಹವಂತೂ ಇಲ್ಲವೇ ಇಲ್ಲವೆಂದು ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಶಿಲ್ಪಕಲೆಯ ವಿಕಾಸ ಹೇಗೆ ಸಾಧ್ಯವೆನ್ನುವುದಕ್ಕೆ ಅವರ ಉತ್ತರ ಇಂತಿದೆ. ಕರ್ನಾಟಕದಲ್ಲಿ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಂತಹ ಸಂಸ್ಥೆಯಿಲ್ಲ. ಇದು ಸಹಕಾರದ ಯುಗ. ಸುಸಂಸ್ಕೃತರು ಮತ್ತು ಸರಕಾರ ಈ ದಿಸೆಯಲ್ಲಿ ಆಲೋಚಿಸಬೇಕಾಗಿದೆ. ಚವಟಿಯವರು ವ್ಯಾಪಾರದ ದೃಷ್ಟಿಯಿಂದ ಕಲೆಯನ್ನು ಕರಗತ ಮಾಡಿಕೊಳ್ಳಲಿಲ್ಲ ಎಂಬುದನ್ನು ಇಲ್ಲಿ ನೆನೆಯಬೇಕಾಗುತ್ತದೆ.

15–7–1987ರಲ್ಲಿ ನಿಧನರಾದ ಚವಟಿ ಏಕಾಂತ ಪ್ರಿಯರು. ಸದಾ ಶಿಲ್ಪ ಚಿಂತನೆಯಲ್ಲಿರುತ್ತಿದ್ದವರು. ಜೊತೆಗೆ ಆಧ್ಯಾತ್ಮಿಕ ಗ್ರಂಥಗಳನ್ನೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಅನೇಕ ಕಲಾ ಮತ್ತು ತತ್ವಜ್ಞಾನ ಗ್ರಂಥಗಳನ್ನೂ ಸಂಗ್ರಹಿಸಿದ್ದರು. ಕೊನೆಯ ದಿನಗಳಲ್ಲೂ ಯಾತನಾಮಯ ಕಿಡ್ನಿ ಕ್ಯಾನ್ಸರ್‌ನಿಂದ ಬಳಲಿ ತುಂಬ ತೊಂದರೆಯಿಂದ ನಿಧನರಾದರು.

ಎಸ್. ಸಿ. ಪಾಟೀಲ



ವೀರಭದ್ರ

ಆರ್. ಜಿ. ರಾಯಕರ್



Face is the index of their mind ಎನ್ನುವುದು ಇಂಗ್ಲಿಷ್‌ನಲ್ಲಿಯ ಗಾದೆ ಮಾತು. ಕಲಾವಿದ ಆರ್.ಜಿ. ರಾಯಕರ್ ಹತ್ತಾರು ಮಂದಿಯ ಮಧ್ಯ ದಲ್ಲಿ ಆಕರ್ಷಿಸುವಂತಹ ವ್ಯಕ್ತಿ. ಹೊಂಬಣ್ಣ, ಸದಾ ಮಂದಹಾಸ, ವಿಶಾಲವಾದ ಹಣೆ, ಬಂಗಾರ ಚೌಕಟ್ಟಿನ ಕನ್ನಡಕ, ತಲೆಯ ಮೇಲೊಂದು ರಟ್ಟಿನ ಟೊಪ್ಪಿಗೆ, ಕರಿಯ ಕೋಟು, ಬಹಳ ಎತ್ತರವೂ, ಕುಳ್ಳೂ ಅಲ್ಲದ ಸಾಮಾನ್ಯ ದಪ್ಪಗಿನ ನಿಲುವು. ಇವು ಶಿರಸಿಯ ಚಿತ್ರ ಕಲಾವಿದ ರಾಮಚಂದ್ರ ಗುರುರಾವ್ ರಾಯಕರ್ ಅವರ ಲಕ್ಷಣಗಳು.

ಕರ್ನಾಟಕದ ಮಲೆನಾಡಿನ ಐಸಿರಿಯಾದ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ 30 ಆಗಸ್ಟ್ 1924 ರಂದು ಜನಿಸಿದ ರಾಮಚಂದ್ರ ರಾಯಕರ್ ಅವರಿಗೆ ಶಿರಸಿಯ ಸುತ್ತ–ಮುತ್ತಲಿನ ನಿಸರ್ಗ ಒಳ್ಳೆಯ ಕಲಾ ಸಂಸ್ಕಾರ ನೀಡುವುದರ ಜೊತೆಗೆ ಕಲೆಯು ಅವರ ತಂದೆಯಿಂದಲೂ ಬಂದ ಬಳುವಳಿಯಾಗಿದೆ. ದಿ. ಗುರುರಾವ್ ರಾಮಚಂದ್ರ ರಾಯಕರ್ ಶ್ರೇಷ್ಠ ಶಿಲ್ಪಿ ಹಾಗೂ ಚಿತ್ರ ಕಲಾವಿದರು. 'ಕರ್ನಾಟಕ ಜ್ಯೂವೆಲ್ಲರಿ ವರ್ಕ್ಸ್'ನ ಮೂಲಕ ದೇಶ–ವಿದೇಶಗಳಿಗೆಲ್ಲ ಬೆಳ್ಳಿ–ಬಂಗಾರದ ಆಭರಣಗಳನ್ನು ಬಹಳ ಸುಂದರವಾಗಿ ನಿರ್ಮಿಸಿ ಕಳಿಸುತ್ತಿದ್ದ ಶ್ರೀಯುತರು ಕಲಾವಿದರು ಹಾಗೂ ಪ್ರಸಿದ್ಧ ವ್ಯಾಪಾರಿಗಳಾಗಿದ್ದರು. ಆರ್.ಜಿ. ರಾಯಕರ್ ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾಭ್ಯಾಸವನ್ನು ಶಿರಸಿಯಲ್ಲಿ ಮುಗಿಸಿ ಕಲೆಯ ಬಗೆಗೆ ಕಲಿಯಬೇಕೆನ್ನುವ ತಮ್ಮ ಅಂತರಂಗದ ಆಕಾಂಕ್ಷೆ ಕಾರ್ಯಗತವಾಗಲು ಮುಂಬಯಿಯ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಹೋಗಿ "ಆರ್ಟ್ ಮಾಸ್ಟರ್'' ಪದವಿಯನ್ನು ಪಡೆದರು. ಮಾಡಲಿಂಗ್ ಮತ್ತು ಪ್ರೆಟ್ ವರ್ಕ್ಸ್ ಡಿ.ಟಿ.ಸಿ. ಡಿ.ಎಂ. ಅಭ್ಯಾಸವನ್ನೂ ಮುಂಬಯಿಯಲ್ಲಿಯೇ ಮುಗಿಸಿದರು. ಹುಬ್ಬಳ್ಳಿಯ ಡಾ. ಎಂ.ವಿ. ಮಿಣಜಗಿಯವರ ಕಲಾ ಶಾಲೆಗೆ ಬಂದು ಕಲಾಭ್ಯಾಸ ಮಾಡುವುದಲ್ಲದೇ ಧಾರವಾಡದ ಡಿ.ವಿ. ಹಾಲಭಾವಿಯವರ ಕಲಾ ಶಾಲೆಯಲ್ಲಿಯೂ ಪೇಂಟಿಂಗ್ ಅಭ್ಯಾಸವನ್ನು ಮಾಡಿದರು.

ಕಲಾ ಸಾಧನೆ:

ವಿದ್ಯಾರ್ಥಿ ಹಂತದಲ್ಲಿರುವಾಗಿಂದಲೇ ಕಲಾಕೃತಿಗಳ ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿರುವ ರಾಯಕರ್ ಶಿರಸಿಯ ಶ್ರೀ ಮಾರಿಕಾಂಬಾ ಪ್ರೌಢಶಾಲೆಯಲ್ಲಿ 1942ರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇರಿ 33 ವರ್ಷಗಳ ದೀರ್ಘ ಕಾಲದ (1980ರವರೆಗೆ) ಸೇವೆ ಸಲ್ಲಿಸಿದ್ದಾರೆ. ತುಂಬ ಕಾಳಜಿಯಿಂದ ಸುಂದರವಾದ ಕಲಾಕೃತಿಗಳನ್ನು ನಿರ್ಮಿಸುವ ಹಾಗೆಯೇ ತಾವು ಕಲಾ ಶಿಕ್ಷಕರಾಗಿದ್ದಾಗಲೂ ಸುಮಾರು ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಮ್ಮ ಕಲಾ ಶಿಷ್ಯತ್ವ ನೀಡಿ ಅನೇಕರನ್ನು ಕಲಾವಿದರನ್ನಾಗಿಯೂ ನಿರ್ಮಾಣ ಮಾಡಿದ್ದಾರೆ. ತಮ್ಮ ಶಿಕ್ಷಕ ವೃತ್ತಿಯಿಂದ ರಾಯಕರ್ ನಿವೃತ್ತರಾದಾಗ ಅಭಿಮಾನಿಗಳೂ, ವಿದ್ಯಾರ್ಥಿಗಳೂ ಹಾಗೂ ಕಲಾವಿದರೂ ಕೂಡಿ ಬೃಹತ್ ಸಮಾರಂಭವೊಂದರಲ್ಲಿ ನಿಧಿ ಸಮರ್ಪಣೆ ಹಾಗೂ ಅವರ ಹೆಸರಿನಲ್ಲಿ ಒಂದು 'ಪಾರಿತೋಷಕ ದತ್ತಿ' ಏರ್ಪಡಿಸಿ 'ಕಲಾ ಗೌರವ' ಗ್ರಂಥ ಸಮರ್ಪಣೆ ಮಾಡಿ ಅಭಿಮಾನದಿಂದ

ಸನ್ಮಾನಿಸಿದುದೇ ಸಾಕ್ಷಿ.

ಚಿತ್ರ ಕಲಾವಿದರಾಗಿ :

ರಾಜ್ಯದ ಸುಮಾರು ಹದಿನಾರು ಸ್ಥಳಗಳಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಏರ್ಪಡಿಸಿ ಕಲಾ ಅಭಿಮಾನಿಗಳ ಪ್ರಶಂಸೆಗೊಳಪಟ್ಟಿದ್ದಾರೆ. ರಾಜ್ಯದ ರಾಷ್ಟ್ರೀಕೃತ ಪಠ್ಯಪುಸ್ತಕಗಳಿಗೆ ಹಾಗೂ ನಾಡಿನ ಅನೇಕ ಗಣ್ಯ ಸಾಹಿತಿಗಳ ಪುಸ್ತಕಗಳಿಗೆ, ಸ್ಮರಣ ಸಂಚಿಕೆಯ ಮುಖಚಿತ್ರಗಳನ್ನು ರಚಿಸಿದ್ದಾರೆ. ಐತಿಹಾಸಿಕ ಸ್ಥಳಗಳಾದ ಬಾದಾಮಿ ಮತ್ತು ಹಂಪೆಯ ನೂರಾರು ಜಲ ವರ್ಣಗಳ ಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೆ ನೈಸರ್ಗಿಕ ಚಿತ್ರ, ತೈಲ ಚಿತ್ರ, ವ್ಯವಹಾರಿಕ ಕಲೆ, ಪೆನ್ಸಿಲ್ ಹಾಗೂ ಪೌಡರ್‌ಗಳ ಮಾಧ್ಯಮದಲ್ಲಿಯೂ ಚಿತ್ರಗಳನ್ನು ರಚಿಸಿದ್ದಾರೆ. 1959ರಲ್ಲಿ ಕುಮಟಾ ಗಿಬ್ ಹೈಸ್ಕೂಲಿನ ಸುವರ್ಣ ಮಹೋತ್ಸವದಲ್ಲಿ ರಾಯಕರ್ ಅವರ ಕಲಾ ಪ್ರದರ್ಶನವನ್ನು ನೋಡಿ ಆಗಿನ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ವಿಶೇಷವಾಗಿ ಪ್ರಶಂಸಿಸಿ ಬರೆದ ಶರಾ ದಾಖಲೆ ಪುಸ್ತಕದಲ್ಲಿ ಸಂಗ್ರಹಿತವಾಗಿದೆ.

ಶಿಲ್ಪ ಕಲಾವಿದರಾಗಿ:

1957ರಲ್ಲಿ ಅಖಿಲ ಭಾರತ ಮಲೆನಾಡ ಸಮ್ಮೇಳನ ಹಾಗೂ ಅಖಿಲ ಭಾರತ ಅಡಿಕೆ ಸಮ್ಮೇಳನದ ಬೃಹತ್ ಮಹಾದ್ವಾರಗಳನ್ನು ಸುಂದರವಾಗಿ ಹಾಗೂ ಕಲಾತ್ಮಕವಾಗಿ ರಚಿಸಿದ ಖ್ಯಾತಿ ಶ್ರೀ ರಾಯಕರ್ ಅವರಿಗಿದೆ.

ಶಿರಸಿ ಶ್ರೀ ಮಾರಿಕಾಂಬಾ ದೇವಾಲಯದ ವಿಶ್ವಸ್ತ ಮಂಡಳಿಯ ಅಧ್ಯಕ್ಷರಾಗಿದ್ದ, ಐದು ವರ್ಷಗಳ ಅವಧಿಯಲ್ಲಿ ನಡೆದ ರಾಯಕರ್ ಅವರ ಕಲಾ ಕೈಂಕರ್ಯ ಮಾರಿಕಾಂಬಾ ಕಲ್ಯಾಣ ಮಂಟಪ, ನೂತನ ಈಶ್ವರ ದೇವಾಲಯ, ಸುಮಾರು ಐರಡೂವರೆ ಲಕ್ಷ ರೂಪಾಯಿ ಮೌಲ್ಯದ ಬೆಳ್ಳಿ–ಬಂಗಾರದ ಆಭರಣಗಳು. ಸಂಸ್ಥೆಗೆ ಭಕ್ತರಿಂದ ಬರುವ ಆದಾಯ ಲಕ್ಷಗಟ್ಟಲೆ ಏರುವುದಕ್ಕೆ ರಾಯಕರ್ ಅವರ ಈ ಆಕರ್ಷಣೀಯ ಕೊಡುಗೆಯೇ ಒಂದು ಕಾರಣವೆನ್ನಬಹುದು.

ಕಲಾರಂಗದ ಇತರ ಸೇವೆ:

ಮೊಳಕೆಯಲ್ಲಿಯೇ ಮೂಡಿಬಂದ ಕಲಾಸಕ್ತಿ ರಾಯಕರ್‌ರಲ್ಲಿ ಮುಂದೆ ಹೆಮ್ಮರವಾಗುತ್ತ ಬೆಳೆದು ಬಂದು, ಭಾರತದ ನಾನಾ ಕಡೆಗಳಲ್ಲಿ ಇರುವ ಶಿಲ್ಪ ಹಾಗೂ ಕಲಾಕೃತಿಗಳನ್ನು ವೀಕ್ಷಿಸಲು ಅನೇಕ ಸ್ಥಳಗಳಿಗೆ ಪ್ರವಾಸ ಮಾಡಿದರು. ಜೊತೆಗೆ ಅಲ್ಲಿಯ ಕಲಾ ಶಾಲೆಗಳಲ್ಲಿರುವ ವಿವಿಧ ಕಲಾಕೃತಿಗಳು ಮತ್ತು ವಸ್ತುಸಂಗ್ರಹಾಲಯಗಳನ್ನೂ, ವಾಸ್ತುಶಿಲ್ಪವನ್ನೂ ಕಲಾ ದೃಷ್ಟಿಯಿಂದ ವೀಕ್ಷಿಸಿ ಅಭ್ಯಾಸ ಮಾಡಿದ್ದಾರೆ.

ಅವರ ಕಲಾ ಪ್ರತಿಭೆಯನ್ನು ಮನ್ನಿಸಿ, ರಾಜ್ಯ ಸರ್ಕಾರದವರು 'ರಾಜ್ಯ ಕಲಾ ಮತ್ತು ಕೈಗಾರಿಕಾ ಮಂಡಳಿ' ದಾವಣಗೆರೆಯ ಸರಕಾರಿ ಕಲಾ ಶಾಲಾ ಮಂಡಳಿ, ಚಿತ್ರಕಲಾ ಪರೀಕ್ಷಾ ಮಂಡಳಿ, ಕಲಾ ಪಠ್ಯ ಪುಸ್ತಕ ಸಮಿತಿ ಮುಂತಾದ ನಾನಾ ಸಮಿತಿಗಳಲ್ಲಿ ಅನೇಕ ವರ್ಷಗಳ ಕಾಲ ಸದಸ್ಯರನ್ನಾಗಿ ನೇಮಿಸಿದೆ.

ಉಚ್ಚಕಲಾ ಪರೀಕ್ಷೆ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಚಿತ್ರಕಲಾ ಅಭ್ಯಾಸ, ಡ್ರಾಯಿಂಗ್ ಗ್ರೇಡ್ ಪರೀಕ್ಷೆ, ಮುಲ್ಕಿ ಡ್ರಾಯಿಂಗ್ ಪರೀಕ್ಷೆಗಳನ್ನು ಏರ್ಪಡಿಸುವಂತೆ ಪ್ರಯತ್ನಿಸಿದ್ದಲ್ಲದೇ ದಾವಣಗೆರೆ ಕಲಾ ಪರೀಕ್ಷೆಯ ಪರೀಕ್ಷಕರಾಗಿ, ಅಧ್ಯಕ್ಷರಾಗಿ ಹಾಗೂ ಪರೀಕ್ಷಾ ನಿಯಂತ್ರಕರಾಗಿಯೂ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಮೈಸೂರು ದಸರಾ ಕಲಾ ಸಮಿತಿಯ ಸದಸ್ಯರಾಗಿ ಹಾಗೂ ಪರೀಕ್ಷಕರಾಗಿಯೂ ಕೆಲಸ ಮಾಡಿದ ರಾಯಕರ್ ಅವರು 1981ರಲ್ಲಿ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಟಿ.ಪಿ. ಅಕ್ಕಿಯವರ ನೇತೃತ್ವದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಲಲಿತಕಲಾ ಅಭಿವೃದ್ಧಿಯ ಬಗೆಗೆ ವಿಶೇಷವಾದ ಉಪನ್ಯಾಸವನ್ನೂ ಮಂಡಿಸಿದ್ದಾರೆ.

ವಿದ್ಯಾರ್ಥಿಯಾಗಿದ್ದಾಗ ಶ್ರಮವಹಿಸಿ ಕಲೆಯನ್ನು ಅಭ್ಯಾಸ ಮಾಡಿದ ಹಾಗೆಯೇ ಅವರು ಶಿಕ್ಷಕರಾಗಿದ್ದಾಗಲೂ ಅದೇ ದಿಶೆಯಲ್ಲಿ ತಮ್ಮ ಕಲಾ ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕೆ ರಾಯಕರ್ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆ ಚಿರ ನೆನಪಿಗೋಸ್ಕರ ಎಲ್ಲ ಕಲಾ ಪರೀಕ್ಷೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ದರ್ಜೆಯಲ್ಲಿ ಪಾಸಾಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡುವ ಪರಿಪಾಠ, ಜೊತೆಗೆ ಗ್ರೇಡ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಶಿಕ್ಷಕರಿಗೂ ಪ್ರತಿಫಲ ಸಿಗುವ ಹಾಗೆ ಪ್ರಯತ್ನಿಸಿದರು ರಾಯಕರ್.

ಕಲಾ ಸಂಘಟನಾಕಾರರಾಗಿ:

ಚಿತ್ರಕಲಾ ಶಿಕ್ಷಣಕ್ಕೆ ಯೋಗ್ಯ ಪ್ರೋತ್ಸಾಹ, ಮನ್ನಣೆ ಸಿಗುವಂತೆ ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರನ್ನೆಲ್ಲ ಸಂಪರ್ಕಿಸಿ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಕಲಾ ಶಿಕ್ಷಕರ ಸಂಘವನ್ನು ಕಟ್ಟಿದ ರಾಯಕರ್ ಅದರ ಪ್ರಧಾನ ಕಾರ್ಯದರ್ಶಿ

ಯಾಗಿ ಪರಿಶ್ರಮಪಟ್ಟಿದ್ದಾರೆ. ಚಿತ್ರಕಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ವೇತನಶ್ರೇಣಿ ಹಾಗೂ ಅವರ ಸೇವಾ ಮಟ್ಟವನ್ನೇರಿಸುವಲ್ಲಿ ಆಧಾರಯುಕ್ತವಾಗಿ ಸರ್ಕಾರವನ್ನು ಒಪ್ಪಿಸುವಲ್ಲಿ ಅವರು ಅವಿರತವಾಗಿ ಹೋರಾಡಿದ್ದಾರೆ. ಬೆಂಗಳೂರು, ಉಡುಪಿ, ಗದಗಗಳಲ್ಲಿ ರಾಜ್ಯಮಟ್ಟದ ಕಲಾ ಸಮ್ಮೇಳನಗಳನ್ನು ಜರುಗಿಸಿ, ಗೊತ್ತುವಳಿಗಳನ್ನು ಸರ್ಕಾರಕ್ಕೆ ಕಳುಹಿಸಿ ರಚನಾತ್ಮಕ ಕಾರ್ಯವನ್ನು ಮಾಡಿದ್ದಾರೆ. ಮೈಸೂರು, ಬೆಂಗಳೂರುಗಳ ಕಲಾವಿದರ ಸಂಘಗಳು, ಅಖಿಲ ಭಾರತ ಚಿತ್ರಕಲಾ ಸಂಘದ ಸದಸ್ಯರಾಗಿ ಹಾಗೂ ಕರ್ನಾಟಕ ಕೇರಳ ರಾಜ್ಯ ಸರಕಾರಗಳ ಚಿತ್ರಕಲಾ ಅಭ್ಯಾಸ ಕ್ರಮಗಳ ಸಲಹಾ ಸಮಿತಿಯಲ್ಲಿ ಸದಸ್ಯರಾಗಿ ರಾಯಕರ್ ಅವರು ಕೆಲಸ ಮಾಡಿದ್ದಾರೆ. ಬ್ರಿಟನ್ನಿನ ಹೊಬೀಸ್ ಕಂಪನಿಗೂ, ಮುಂಬಯಿಯ ಅನೇಕ ಪ್ರಸಿದ್ಧ ಆಭರಣೋದ್ಯಮಿಗಳಿಗೆಲ್ಲ ಹಲವಾರು ಆಲೇಖ್ಯಗಳನ್ನು ಒದಗಿಸಿದ ರಾಯಕರ್ ಅನೇಕ ಸಮ್ಮೇಳನಗಳ, ಕಲಾ ಸಮಿತಿಗಳ ಅಧ್ಯಕ್ಷರಾಗಿ ಅರ್ಥಪೂರ್ಣ ಹಾಗೂ ಆಕರ್ಷಕ ಮಂಟಪಗಳನ್ನು ರಚಿಸಿ ಕಲೆಯನ್ನು ಸಮಾಜದ ಒಂದು ಮುಖ್ಯ ಅಂಗವನ್ನಾಗಿ ಮಾಡಲಿಕ್ಕೆ ಶ್ರಮಿಸಿದ್ದಾರೆ.

ಕಲಾ ಸಂಗ್ರಹ ಹವ್ಯಾಸ:

ತಾನು ಸರ್ವಶ್ರೇಷ್ಠ ಎಂದು ಸಾರಿಕೊಳ್ಳುವ ಸ್ವಭಾವ ರಾಯಕರ್ ಅವರಿಗಿಲ್ಲ. ತಾನಿನ್ನೂ ಸಾಧನೆಯಲ್ಲಿ ಬಹಳ ಚಿಕ್ಕವನು ಎಂದುಕೊಳ್ಳುತ್ತಾರೆ. ಅಂತೆಯೇ ಗಣ್ಯರ ಕಲಾಕೃತಿಗಳನ್ನು, ಕಲಾ ಗ್ರಂಥಗಳನ್ನು ಸಂಗ್ರಹಿಸಿ ಅಭ್ಯಸಿಸುವುದರ ಜೊತೆಗೆ ವಿವಿಧ ಕಲಾ ವಸ್ತುಗಳನ್ನು ಸಂಗ್ರಹ ಮಾಡಿ ಅವುಗಳನ್ನೆಲ್ಲ ಸಾರ್ವಜನಿಕರಿಗೂ ಪ್ರದರ್ಶಿಸಿ ಖುಷಿಪಡಿಸಿದ್ದಾರೆ. ವಿಶ್ವದ ವೈವಿಧ್ಯಮಯ ಸ್ಟ್ಯಾಂಪುಗಳು, ನಾಣ್ಯಗಳು ಹಾಗೂ ಬೇರೆ ಬೇರೆ ಸಮುದ್ರಗಳಲ್ಲಿ ದೊರಕುವ ಸಿಂಪುಗಳು, ಶಂಖಗಳು ಹಾಗೂ ವೈಶಿಷ್ಟ್ಯಮಯ ಕಲ್ಲುಗಳನ್ನು ಹಾಗೂ ಪಳೆಯುಳಿಕೆಗಳನ್ನೂ ಅವರು ಸಂಗ್ರಹಿಸಿದ್ದಾರೆ.

ಕಲಾ ಲೇಖಕರಾಗಿ :

ನಾಡಿನ ಬೇರೆ ಬೇರೆ ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಪತ್ರಿಕೆ ನಿಯತಕಾಲಿಕಗಳಲ್ಲಿ ರಾಯಕರ್ ಅವರ ಲೇಖನಗಳು ಕಲೆ, ಕಲಾ ಶಿಕ್ಷಣ, ಜೀವನ ಚರಿತ್ರೆ, ಪ್ರವಾಸೋದ್ಯಮ, ಧಾರ್ಮಿಕ ಶಿಲ್ಪ, ನೈತಿಕ ಮತ್ತು ಕೈಗಾರಿಕೆ ಇವುಗಳನ್ನು ಕುರಿತು ಪ್ರಕಟವಾಗಿವೆ.

ಕಲೆಯ ಆರಾಧಕರಾಗಿರುವ ರಾಯಕರ್ ಅವರಿಗೆ ಸಾಹಿತ್ಯದಲ್ಲೂ ಅಷ್ಟೇ ಆಸಕ್ತಿ. ಕನ್ನಡ ವಿಶ್ವಕೋಶದಲ್ಲಿ ಇವರ ಅನೇಕ ಸಂಶೋಧಕ ಲೇಖನಗಳು ಪ್ರಕಟವಾಗಿವೆ. ಸಾಹಿತಿಗಳಾಗಿ ಬರೆದ ಇವರ ಸಂಗ್ರಹಗಳು, ಕರ್ನಾಟಕದ ಜಲಪಾತಗಳು, ಕರ್ನಾಟಕದಲ್ಲಿ ಚಿನ್ನ-ಬೆಳ್ಳಿಯ ಕುಶಲ ಕೈಗಾರಿಕೆ ಹಾಗೂ ಕರ್ನಾಟಕದ ಗಿರಿಧಾಮಗಳು, ಇವುಗಳನ್ನು ಬೆಂಗಳೂರಿನ ಇಂಡಿಯಾ ಬುಕ್ ಹೌಸ್ ಪ್ರಕಾಶನದವರು ಪ್ರಕಟಿಸಿದ್ದಾರೆ. 1970ರಲ್ಲಿ ಪ್ರಕಟವಾದ ರಾಯಕರ್ ಅವರು ರಚಿಸಿದ 'ಗಾಂಧಿ ಶತಾಬ್ದಿ' ಸಂಚಿಕೆಗಾಗಿ ರಾಜ್ಯಪಾಲ ಧರ್ಮವೀರರಿಂದ ಸುವರ್ಣ ಪದಕ ಪಡೆದಿದ್ದಾರೆ.


ಕಲಾ ಸಾಹಿತ್ಯದ ಬಗೆಗೆ ಸದಾ ಚಿಂತನಶೀಲರಾದ ರಾಯಕರ್ ಅವರ ಸಾಮಾಜಿಕ ಸೇವೆಯೂ ಶ್ಲಾಘನೀಯವಾದದ್ದು. ಅಖಿಲ ಭಾರತ ಮಲೆನಾಡ ಸಮ್ಮೇಳನ, ರಾಜ್ಯ ಒಕ್ಕಲುತನ ಮತ್ತು ಕೈಗಾರಿಕಾ ಪ್ರದರ್ಶನ, ಭಾರತೀಯ ಧರ್ಮ ಸಮ್ಮೇಳನ, ಕಲಾ ಸಾಹಿತ್ಯ ಹಾಗೂ ನಾಟಕ ಸಂಘ–ಸಂಸ್ಥೆಗಳಿಗಾಗಿ, ರೋಟರಿ ಸಮ್ಮೇಳನದ ಚೇರ್‌ಮನ್ನರಾಗಿ ದುಡಿದಿರುವ ರಾಯಕರ್ ಅವರಿಗೆ ಈ ವಯಸ್ಸಿನಲ್ಲೂ ಶ್ರಮವೇ ಜೀವನವಾಗಿದೆ.

ಸನ್ಮಾನ, ಪ್ರಶಸ್ತಿಗಳು :

ಕಿರಿಯ ವಯಸ್ಸಿನಲ್ಲಿಯೇ ಕಲಾ ಬಹುಮಾನಗಳನ್ನು ಪಡೆಯುತ್ತ ಬಂದ ರಾಯಕರ್ ಹಿರಿಯರಾದಾಗಲೂ ಬಂದ ಸನ್ಮಾನ, ಪ್ರಶಸ್ತಿಗಳ ಸಂಖ್ಯೆ ಅಸಂಖ್ಯ. ಶಿರಸಿಯ ಶ್ರೀ ಮಾರಿಕಾಂಬಾ ದೇವಾಲಯ ಬರೀ ಒಂದು ದೇವಾಲಯವನ್ನಾಗಿ ಮಾತ್ರ ಉಳಿಸದೇ ಅದನ್ನು ಒಂದು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಲಾ ಕೇಂದ್ರವನ್ನಾಗಿಸಿ, ಕರ್ನಾಟಕದ ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಿದ ಅವರ ಶ್ರಮಕ್ಕೆ ಶಿರಸಿ ಮಾರಿಕಾಂಬಾ ದೇವಾಲಯ ವಿಶ್ವಸ್ತ ಮಂಡಳಿಯವರು ಅದ್ದೂರಿಯ ಗೌರವ ಸಮಾರಂಭ ಏರ್ಪಡಿಸಿ, ಸುವರ್ಣ ಪದಕ ನೀಡಿ ಗೌರವಿಸಿದ್ದಾರೆ. ಗೋವಾ ದೈವಜ್ಞ ಸಮಾಜ ಹಾಗೂ ಅಖಿಲ ಭಾರತ ಮಲೆನಾಡ ಸಮ್ಮೇಳನದ ಮಹಾದ್ವಾರದ ರಚನೆಗೆ ಸುವರ್ಣ ಪದಕಗಳು ಲಭಿಸಿವೆ. 1963ರಲ್ಲಿ ಹೊನ್ನಾವರದಲ್ಲಿ ಜರುಗಿದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ 'ಶ್ರೇಷ್ಠ ಕಲಾವಿದ' ಪ್ರಶಸ್ತಿ ದೊರಕಿದರೆ 1982ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.


ಅನ್ನದಾನಿ ಹಿರೇಮಠ

ಆರ್.ಜಿ. ರಾಯಕರ್



ಭಾವಚಿತ್ರ

ಶಾಂತಲಿಂಗಪ್ಪ ಪಾಟೀಲ



ಕಲಬುರ್ಗಿ ಇತಿಹಾಸ ಪರಂಪರೆಯನ್ನು ಹೊಂದಿದ ನಾಡು. ಇಲ್ಲಿ ಹಿಂದಿನಿಂದಲೂ ಕಲಾವಿದರು ಬಾಳಿ–ಬೆಳಗಿದ್ದಾರೆ. ಅಂಥವರಲ್ಲಿ ದಿವಂಗತ ಶಾಂತಲಿಂಗಪ್ಪ ಪಾಟೀಲರೂ ಒಬ್ಬರು. ವಿಷಾದದ ಸಂಗತಿ ಎಂದರೆ ಶಾಂತಲಿಂಗಪ್ಪ ಪಾಟೀಲರ ಬಗ್ಗೆ ಈ ಭಾಗದ ಜನರಿಗೇ ಗೊತ್ತಿಲ್ಲ. ಇಂಥ ಹಲವಾರು ಜನ ಕಲಾವಿದರು ಅಜ್ಞಾತವಾಗಿಯೇ ಹೋಗಿರಬೇಕೆನಿಸುತ್ತದೆ.

ಹೈದರಾಬಾದ್ ನಿಜಾಮರ ಆಶ್ರಯದಲ್ಲಿ ಕಲಾ ವಿದರೆಂದು ಸೇವೆ ಸಲ್ಲಿಸಿದ ಶಾಂತಲಿಂಗಪ್ಪ ಪಾಟೀಲರು ಎಲೆಮರೆ ಹೂವಿನಂತೆ ಬಾಳಿದ ಕಲಾವಿದರು. ತಮ್ಮ ಬಗ್ಗೆ ಎಲ್ಲಿಯೂ ಹೇಳಿಕೊಂಡಿಲ್ಲ, ಪ್ರಚಾರ ಬಯಸ ಲಿಲ್ಲ.

ನಿಜಾಮರು ಅರಮನೆಯಲ್ಲಿ ತಮ್ಮ ಹೆಚ್ಚು ಗಮನ ಸೆಳೆದ ಕಲಾವಸ್ತುಗಳನ್ನು ಹತ್ತಿರದಲ್ಲಿಯೇ ಒಂದು ಚಿಕ್ಕ ಸಂಗ್ರಹಾಲಯ ಮಾಡಿ, ಆಗಾಗ ವೀಕ್ಷಿಸಿ ಆನಂದ ಪಡುತ್ತಿದ್ದರಂತೆ. ಆ ಸಂಗ್ರಹಾಲಯದಲ್ಲಿ ಶಾಂತಲಿಂಗಪ್ಪ ಪಾಟೀಲರು ರಚಿಸಿದ ತೈಲವರ್ಣದ ಭಾವಚಿತ್ರವೊಂದಿತ್ತು. ಆ ಭಾವಚಿತ್ರ ನಿಜಾಮರ ಸೊಸೆ ರಾಣಿ ನಿಲೋಫರ್ ಅವಳದು. ಈ ರಾಣಿಯ ಭಾವಚಿತ್ರ ನೋಡಲು ಜನ ಹಾತೊರೆಯುತ್ತಿದ್ದರು. ಅಷ್ಟು ಆಕರ್ಷಕವಾಗಿರಬೇಕು ಆ ಚಿತ್ರ. ಆ ಭಾವಚಿತ್ರದಲ್ಲಿ ಜೀವಂತಿಕೆ ತುಂಬಿತ್ತು ಎಂಬುದನ್ನೂ ಆ ಜನ ಗಮನಿಸಿರಬೇಕು. ಒಮ್ಮೆ ಆ ದೊಡ್ಡ ಭಾವಚಿತ್ರವನ್ನು ನಿಜಾಮನ ಕೋಣೆಯ ಬಾಗಿಲ ಹತ್ತಿರ ಇಟ್ಟಾಗ ಎಷ್ಟೋ ಜನ ದೂರದಿಂದ, ರಾಣಿ ಬಾಗಿಲಲ್ಲಿ ನಿಂತಿದ್ದಾಳೆ ಎಂದು ಭಾವಿಸಿದ್ದರಂತೆ. ಅಂಥ ಚಿತ್ರ ನೋಡಿದಾಗ ಕಲಾವಿದನ ಸಂವೇದನೆ ಇತರರಿಗಿಂತ ಬಹು ಸೂಕ್ಷ್ಮವಾದದ್ದು ಎಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಮಾಡೆಲ್ ಆಗಿದ್ದ ವ್ಯಕ್ತಿಯ ಭಾವನೆಗಳನ್ನು, ಗಂಭೀರತೆಯನ್ನು, ವ್ಯಕ್ತಿತ್ವವನ್ನು ಗ್ರಹಿಸಿ ಚಿತ್ರದಲ್ಲಿ ತರುವುದು ಸಾಮಾನ್ಯ ಕೆಲಸವೇನಲ್ಲ. ಅಂಥ ಚಿತ್ರ ರಚಿಸಿದ ಕಲಾವಿದ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ಪಾಟೀಲರ ಹಲವಾರು ಭಾವಚಿತ್ರಗಳನ್ನು ಅವಲೋಕಿಸಿದಾಗ ಅನಿಸುತ್ತದೆ ಅವರು ತಾವು ಬಿಡಿಸಬೇಕಾಗಿದ್ದ ವ್ಯಕ್ತಿಯ ಗುಣಲಕ್ಷಣಗಳನ್ನು ಚೆನ್ನಾಗಿ ಲಕ್ಷಿಸಿ, ಗ್ರಹಿಸಿ ರಚಿಸುತ್ತಿದ್ದರೆಂದು. ಇವರು ಬಿಡಿಸಿದ ನೆಹರು, ಗಾಂಧಿ, ತಿಲಕ್, ಸುಭಾಷ್‌ಚಂದ್ರ ಬೋಸ್ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳು ಆಯಾ ವ್ಯಕ್ತಿಯ ಮನೋಗುಣವನ್ನು, ಭಾವನೆಗಳನ್ನು ಪ್ರತಿಬಿಂಬಿಸುವಲ್ಲಿ ಸಾಫಲ್ಯ ಪಡೆದಿವೆ. ಮಾಡೆಲ್ ಆಗಿದ್ದ ವ್ಯಕ್ತಿಗಳ ತಾಳ್ಮೆ, ರೋಷ, ಕರುಣೆ, ಮುಂತಾದ ಭಾವನೆಗಳನ್ನು ಆ ಚಿತ್ರಗಳು ಪ್ರತಿಬಿಂಬಿಸುತ್ತವೆ.

ಸ್ವಾತಂತ್ರ್ಯ ಹೋರಾಟದಲ್ಲಿ ಶಾಂತಲಿಂಗಪ್ಪ ಪಾಟೀಲರದು ಪರೋಕ್ಷ ಪಾತ್ರ – ಕಲೆಯ ಮೂಲಕ. ಅಂದು ಸ್ವಾತಂತ್ರ್ಯದ ಪ್ರಜ್ಞೆ ಜನರಲ್ಲಿ ಮೂಡುತ್ತಿದ್ದಾಗ ಸ್ವಾತಂತ್ರ್ಯ ಹೋರಾಟಗಾರರ ವಿವಿಧ ಭಂಗಿಗಳ ಚಿತ್ರಗಳನ್ನು ಬಿಡಿಸಿ ಜಾತ್ರೆಗಳಲ್ಲಿ, ಉತ್ಸವಗಳಲ್ಲಿ, ನಿಬಿಡ ಜನಸಮೂಹದಲ್ಲಿ ಪ್ರದರ್ಶಿಸಿ ಜನರಲ್ಲಿ ಜಾಗ್ರತೆಯುಂಟುಮಾಡಿದರು. ಪಾಟೀಲ್ ಒಮ್ಮೆ ಕಲಬುರ್ಗಿಯ ಶರಣ ಬಸವೇಶ್ವರ ಜಾತ್ರೆಯಲ್ಲಿ ಇಂಥ

ಕಲಾ ಪ್ರದರ್ಶನ ನಡೆಸಿದಾಗ ಬ್ರಿಟಿಷ್ ಸರಕಾರ ಪೊಲೀಸ್ ಪಡೆ ಕಳಿಸಿ ಆ ಪ್ರದರ್ಶನ ಧ್ವಂಸಗೊಳಿಸಿತಂತೆ. ಅಲ್ಲಿಂದ ತಪ್ಪಿಸಿಕೊಂಡ ಪಾಟೀಲರು ಮುಂದೆ 1957ರಲ್ಲಿ ಸ್ವಾತಂತ್ರ್ಯದ ನಂತರ ಅದೇ ಜಾತ್ರೆಯಲ್ಲಿ, ಅದೇ ಸ್ಥಳದಲ್ಲಿ ಮತ್ತೆ ಚಿತ್ರ ಪ್ರದರ್ಶನ ನಡೆಸಿ ಧೀರತನದ ಪ್ರಭಾವ ಜನರಲ್ಲಿ ಮೂಡುವಂತೆ ಮಾಡಿದರು.

ಮುಂಬೈ, ಹೈದರಾಬಾದ್, ಸೊಲ್ಲಾಪುರ, ಗುಲಬರ್ಗಾಗಳಲ್ಲಿ ಇವರು ರಚಿಸಿದ ಮೂರ್ತಿಗಳು, ಭಾವಚಿತ್ರಗಳನ್ನು ಪ್ರದರ್ಶಿಸಲ್ಪಟ್ಟಿವೆ. ಪಾಟೀಲರ ಕಲೆಯ ಹೋರಾಟದ ಬದುಕನ್ನು ಕುರಿತು ನಾಡಿನ, ಹೊರನಾಡಿನ ಹಲವಾರು ಪತ್ರಿಕೆಗಳು ಬರೆದಿವೆ. ಅನೇಕ ಜನ ಕಲಾವಿದರೂ, ಕಲಾಭಿಮಾನಿಗಳೂ ಮೆಚ್ಚಿ ಪ್ರಶಂಸಿಸಿದ್ದಾರೆ. ಇವರು ರಚಿಸಿ ಸಂಗ್ರಹಿಸಿದ್ದ ಭಾವಚಿತ್ರಗಳು, ಮೂರ್ತಿಗಳು ನಿಂಬಾಳದ ಮನೆಯ ಒಂದು ಕೋಣೆ ತುಂಬಿ ಹೋಗಿತ್ತಂತೆ. ಪಾಟೀಲರ ನಂತರ ಅವರ ಮನೆಯವರು ಅವುಗಳ ರಕ್ಷಣೆಗೆ ಲಕ್ಷ್ಯಗೊಡದೆ ಹೋದಾಗ ಒಮ್ಮೆ ಕೋಣೆ ಬಿದ್ದು ಎಲ್ಲವೂ ಹಾಳಾದವು ಎಂಬ ಮಾತು ಕೇಳಿದಾಗ ವ್ಯಥೆ ಎನಿಸುತ್ತದೆ.

ಶಾಂತಲಿಂಗಪ್ಪ ಪಾಟೀಲರು ಸುಮಾರು ಸಾವಿರಕ್ಕೂ ಮಿಕ್ಕಿ ಭಾವಚಿತ್ರಗಳನ್ನು ರಚಿಸಿದ್ದಾರೆ. ನೂರಾರು ಮೂರ್ತಿಗಳನ್ನು ಮಾಡಿದ್ದಾರೆ. ಕೆಲವು ನಿಸರ್ಗ ಚಿತ್ರಗಳನ್ನು, ಪೌರಾಣಿಕ ಚಿತ್ರಗಳನ್ನು ಬಿಡಿಸಿದ್ದಾರೆ. ಆದರೆ ಅವೀಗ ಎಲ್ಲಿಯೂ ನೋಡಲು ದೊರೆಯುವುದಿಲ್ಲ. ಅವರ ಕೆಲವು ಭಾವಚಿತ್ರಗಳು ಮಾತ್ರ ಹೈದರಾಬಾದಿನ ಮ್ಯೂಜಿಯಂನಲ್ಲಿ, ನಿಜಾಮರ ಮನೆಯಲ್ಲಿ ಗುಲಬರ್ಗಾದ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟನಲ್ಲಿ, ಗುಲಬರ್ಗಾ, ಬೀದರ್, ರಾಯಚೂರಿನ ಗಣ್ಯವ್ಯಕ್ತಿಗಳ ಮನೆಯಲ್ಲಿ ಇಂದಿಗೂ ನೋಡಲು ದೊರೆಯುತ್ತವೆ.

ಪಾಟೀಲರು ಸೃಜನಾತ್ಮಕ ಕಲೆ ನಿರ್ಮಿಸಿರಲಿಕ್ಕಿಲ್ಲ. ನವ್ಯದತ್ತ ವಾಲಿರಲಿಕ್ಕಿಲ್ಲ, ಹೊಸ ಹೊಸ ಪ್ರಯೋಗಗಳಿಗೆ ಮನಸ್ಸು ಮಾಡಿರಲಿಕ್ಕಿಲ್ಲ. ಆದರೆ ಅವು ಅವರಿಗೆ ಅಸಾಧ್ಯವಾಗಿದ್ದವೆಂದು ಭಾವಿಸಲಾಗದು. ಅವರ ಒಲವು ಹೆಚ್ಚು ಭಾವಚಿತ್ರಗಳತ್ತ. ಅಲ್ಲದೇ ಸ್ಟುಡಿಯೋದ ಮೇಲಿನ ನಿಬಂಧಗಳು. ಇವೆಲ್ಲವುಗಳನ್ನು ಗಮನಿಸಿದಾಗ ಅವರಿಗೆ ತಮ್ಮ ಚೌಕಟ್ಟಿನಿಂದ ಹೊರಬರಲಾಗಿರಲಿಕ್ಕಿಲ್ಲ ಎನ್ನಿಸುತ್ತದೆ.

ಪಾಟೀಲರು ಆಗಿನ ನಿಜಾಮರಾದ ಉಸ್ಮಾನಲಿಖಾನರ ಇಡೀ ಕುಟುಂಬದ ವ್ಯಕ್ತಿಗಳ ಮೂರ್ತಿಗಳನ್ನು, ಭಾವಚಿತ್ರಗಳನ್ನು ರಚಿಸಿದ್ದಾರೆ. ಅಕ್ಕಲಕೋಟೆಯ ರಾಜರ ಕರೆ ಬಂದಾಗ ಅಲ್ಲಿಯೂ ಹೋಗಿ ಕೆಲವು ದಿವಸ ಅವರ ಆಶ್ರಯದಲ್ಲಿದ್ದು ರಾಜ–ರಾಣಿಯರ ಭಾವಚಿತ್ರಗಳನ್ನು ರಚಿಸಿ ಅವರ ಪುರಸ್ಕಾರ ಪಡೆದು ಬಂದಿದ್ದಾರೆ. ಕೆಲವು ದಿವಸ ಸೊಲ್ಲಾಪುರದಲ್ಲಿದ್ದು, ಅಲ್ಲಿಯ ಸಿದ್ಧರಾಮೇಶ್ವರದ ಹಲವಾರು ಪ್ರಮುಖ ಘಟನೆಗಳನ್ನು ನಿರೂಪಿಸುವ ಮೂರ್ತಿಗಳನ್ನು ತಯಾರು ಮಾಡಿ ಪ್ರದರ್ಶಿಸಿದರು.

1882ರಲ್ಲಿ ಹುಟ್ಟಿದ ಶಾಂತಲಿಂಗಪ್ಪ ಪಾಟೀಲರ ಊರು ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬಾಳ ಗ್ರಾಮ. ತಂದೆ ಗಿರಿಯಪ್ಪ, ತಾಯಿ ನಿಂಗಮ್ಮ. ಪ್ರಾಥಮಿಕ, ಮಾಧ್ಯಮಿಕ ಓದು ಮುಂಬೈ ಹತ್ತಿರದ ಪನವೇಲದಲ್ಲಿ. ಅವರ ಮಾವ ಆತ್ಮಾರಾಮ ಶೇಠ ಗಣ್ಯರಲ್ಲಿ ಒಬ್ಬರು. ಪಾಟೀಲರ ಕಲಾಸಕ್ತಿ ಕಂಡು ಅವರು ಮುಂಬೈ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಸೇರಿಸಿದರು. ಚಿತ್ರಕಲೆಯ ಜೊತೆ ಮುಂಬೈಯಲ್ಲಿ ಫಡಕೆ ಎಂಬ ಗುರುಗಳಿಂದ ಪ್ಲ್ಯಾಸ್ಟರ್ ಆಫ್ ಪ್ಯಾರೀಸ್‌ನಿಂದ ಮೂರ್ತಿ ಮಾಡುವುದನ್ನು ಕಲಿತರು. ಚಿತ್ರಕಲೆಯಲ್ಲಿ ನಮ್ಮ ದೇಶದ ಆಗಿನ ಶ್ರೇಷ್ಠ ಕಲಾ ಮೇಧಾವಿಗಳಾದ ಹಲ್ದಂಕರ್ ಅವರ ನೆಚ್ಚಿನ ಶಿಷ್ಯರಾಗಿ ಅಭ್ಯಸಿಸುವ ಭಾಗ್ಯ ಪಾಟೀಲರದಾಗಿತ್ತು. ಭಾವಚಿತ್ರಗಳನ್ನು ರಚಿಸುತ್ತ ಬದುಕುವ ಮಾರ್ಗ ಕಂಡುಕೊಂಡರು. ಬದುಕಿನ ಅರ್ಧ ಆಯುಷ್ಯ ಮುಂಬೈಯಲ್ಲಿಯೇ ಜರುಗಿತು. ನಂತರ ಹೈದರಾಬಾದಿಗೆ ಬಂದು ರಾಜಾ ದೀನದಯಾಳರ ಸ್ಟುಡಿಯೋದಲ್ಲಿ ಕಲಾವಿದರಾಗಿ ಕೆಲಸ ಮಾಡ ಹತ್ತಿದರು. ಇದು ನಿಜಾಮರ ಆಶ್ರಯದ ಸ್ಟುಡಿಯೋ ಆಗಿತ್ತು.

ಪಾಟೀಲರು ಜೀವನದಲ್ಲಿ ಎದುರಿಸಿದ ಸಮಸ್ಯೆಗಳು ಹಲವಾರು. ಸಹೋದರ ಮತ್ತು ಅತ್ತಿಗೆ ಒಂದೇ ದಿನ ಮರಣ ಹೊಂದಿದ ದುರಂತ ಪಾಟೀಲರ ಹೃದಯ ಒಡೆಯುವಂತಾಯಿತು. ಅಂದಿನಿಂದ ಪಾಟೀಲರು ನಿಂಬಾಳಕ್ಕೆ ಬಂದು ನೆಲೆಸಿ, ಒಂದು ಸ್ಟುಡಿಯೋ ನಿರ್ಮಿಸಿಕೊಂಡು ಬೇಸಾಯದ ಜೊತೆ ಜೊತೆ ಕಲೆಯನ್ನೂ ಬೆಳೆಸಿಕೊಂಡು ಬಂದರು. ಸುದೀರ್ಘ ಜೀವನ ನಡೆಸಿ 1976ರಲ್ಲಿ ನಿಧನರಾದರು. ಇಂದು ಅವರು ಮರೆಯಾಗಿದ್ದರೂ ಚಿತ್ರಗಳು ಶಾಂತಲಿಂಗಪ್ಪ ಪಾಟೀಲರನ್ನು ಇನ್ನೂ ಜೀವಂತ ಇರಿಸಿದೆ.


ಗವೀಶ ಹಿರೇಮಠ

ಶಾಂತಲಿಂಗಪ್ಪ ಪಾಟೀಲ್



ಭಾವಚಿತ್ರ

ಎಂ.ಜೆ. ಶುದ್ಧೋದನ



ನಿಸರ್ಗ ಚಿತ್ರಗಳ ವರ್ಣಮಾಧುರ್ಯದಿಂದ ರಸಿಕರನ್ನು ನೈಸರ್ಗಿಕ ವಾತಾವರಣದಲ್ಲಿ ತಲ್ಲೀನರನ್ನಾಗಿ ಮಾಡುವಂತಹ ಆಕರ್ಷಣೆ ಶುದ್ಧೋದನರವರ ಚಿತ್ರಗಳಿಗಿದೆ. ಅವರ ಮನೆಯ ಹಜಾರವು ಒಬ್ಬ ನಿಷ್ಠಾವಂತ ಕಲಾವಿದರ ಚಿತ್ರಶಾಲೆಯನ್ನು ನೆನಪಿಗೆ ತರುವಂತಿದೆ. ಹಜಾರದಲ್ಲಿ ಚಿತ್ರಗಳು ಅನೇಕ. ಕೆಲವು ಪೂರ್ಣ, ಕೆಲವು ಅಪೂರ್ಣ, ಕೆಲವು ಕಟ್ಟುಗಳಿಂದ ಕೂಡಿರುತ್ತದೆ. ಅನೇಕ ಚಿತ್ರಗಳು ಹಜಾರದಲ್ಲಿ ಜಾಗವನ್ನು ಕಾಣದೇ ಪಕ್ಕದ ಕೊಠಡಿಯಲ್ಲಿಯೂ ಇರುತ್ತವೆ. ಅಂತೂ ಮನೆಯೆಲ್ಲ ಚಿತ್ರಮಯ, ಶೋಭೆಯಿಂದ ಕೂಡಿರುತ್ತದೆ. ಅವರ ಕೈಚಳಕದಿಂದ, ಸಿದ್ಧಿ ಪಡೆದ ಅಭ್ಯಾಸದಿಂದ ರೂಪುಗೊಂಡ ಚಿತ್ರಗಳಲ್ಲಿ ಬಹುಪಾಲು ನಿಸರ್ಗಕ್ಕೆ ಉಳಿದ ವಿಭಾಗಗಳಾದ ವ್ಯಕ್ತಿಚಿತ್ರ, ಸಂಯೋಗ ಚಿತ್ರ, ನವ್ಯ, ಸಮಕಾಲೀನ ಎಲ್ಲವೂ ಇಲ್ಲಿವೆ. ಅಂತೂ ಇದೊಂದು ಪೂರ್ಣ ಕಲಾವಿದನ ಪರಿಪೂರ್ಣ ಕಲಾಭವನ. ಚಿತ್ರದ ರಮ್ಯತೆ ಹೆಚ್ಚಿಸಲು ಅವುಗಳಿಗೆ ಅಚ್ಚುಕಟ್ಟಾದ ಚೌಕಟ್ಟುಗಳ ನಿರ್ಮಾಣ ಕಲೆಯು ಅವರಿಗೆ ಕರಗತ. ಸನಿಹದಿಂದ ನೋಡಿದರೆ ಅವರ ಚಿತ್ರಗಳಲ್ಲಿ ಬಣ್ಣಗಳ ಒತ್ತಡ ಕಾಣಿಸದು. ಪ್ರಕೃತಿಯಲ್ಲಿ ಕಾಣಿಸುವಷ್ಟನ್ನೂ ತಿಳಿಬಣ್ಣಗಳಿಂದ ಮೂಡಿಸುತ್ತಾರೆ. ಅವುಗಳಲ್ಲಿ ಬಹುಪಾಲು ತೈಲ ವರ್ಣದವು. ಜಲವರ್ಣವು ಕೇವಲ ಮೂಲಾಧಾರ. ವಿದ್ಯುಚ್ಛಕ್ತಿ ಬೆಳಕಿನಲ್ಲಿ ಮಧ್ಯರಾತ್ರಿಯವರೆಗೂ ಇವರು ಚಿತ್ರಭವನದಲ್ಲಿ ಕಲೆಯೊಡನೆ ಕಲೆತಿರುವರು.

ಹೀಗೆ ಶುದ್ಧೋದನರವರ ಮನೆಯು ನಿಷ್ಠಾವಂತ ಚಿತ್ರ ಕಲಾವಿದನ ನೆನಪನ್ನು ತರುತ್ತದೆ. ನೈಷ್ಠಿಕ ಚಿತ್ರಕಾರನಿಗೆ ಆದರ್ಶಪ್ರಾಯವೂ ಆಗುತ್ತದೆ.

ಶುದ್ಧೋದನ ಅವರ ತಂದೆ ಎಂ.ಎಸ್.ಜಗದೀಶನ್. ಮದ್ರಾಸಿನ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲಾ ಡಿಪ್ಲೋಮಾ ಪಡೆದು ಮೈಸೂರಿನ ಸರ್ಕಾರಿ ತರಬೇತಿ ಕಾಲೇಜಿನಲ್ಲಿ ಹಿರಿಯ ಕಲಾನಿರ್ದೇಶಕರಾಗಿದ್ದರು. ಬಾಲ್ಯದಲ್ಲಿ ತಂದೆಯಿಂದಲೇ ಚಿತ್ರಕಲೆಯ ಬಗ್ಗೆ ಆಸಕ್ತಿ, ಉತ್ತೇಜನ ಪಡೆದ ಶುದ್ಧೋದನ 1931ರಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿ, ಮೂರು ವರ್ಷಗಳ ಕಾಲ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಚಿತ್ರಕಲಾಭ್ಯಾಸ ಮುಗಿಸಿ, 1936ರಲ್ಲಿ ಮದ್ರಾಸು ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲಾ ಡಿಪ್ಲೋಮಾ ಪಡೆದರು. ಪ್ರಸಿದ್ಧ ಚಿತ್ರಕಲಾ ಶಿಕ್ಷಕ ಶ್ರೀ ಫಾಡೇಕರ್ ಅವರಿಂದ ಮೂಲ ಸೂತ್ರಗಳಲ್ಲಿ ಮಾರ್ಗದರ್ಶನ ಪಡೆದರು.

ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಪ್ರಸಿದ್ಧ ಚಿತ್ರಕಲಾವಿದ ಹಾಗೂ ಅಧ್ಯಾಪಕರಾಗಿದ್ದ ಎಸ್.ಜಿ.ಟಂಕಸಾಲೆ, ಕೆ.ಕೇಶವಯ್ಯ ಮುಂತಾದವರಿಂದ ಮಾರ್ಗದರ್ಶನ ದೊರೆಯಿತು. ಪರಿಣತಿ ಪಡೆದ ಶುದ್ಧೋದನ ಚಿತ್ರಕಲೆಯ ಒಂದು ಕವಲು ನಿಸರ್ಗ ಚಿತ್ರಣದಲ್ಲಿ ಆಸಕ್ತರಾದರು.

ಮುಂದೆ ಚನ್ನಪಟ್ಟಣದ ಸರ್ಕಾರಿ ಕೈಗಾರಿಕಾ ಶಾಲೆಯಲ್ಲಿ 1940–59ರ ತನಕ ಕಲಾ ನಿರ್ದೇಶಕರಾದರು. 1959ರಿಂದ ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಕಲೆ ಮತ್ತು ಕರಕುಶಲ ಕಲೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿ, ಸಹಾಯಕ ಪ್ರಿನ್ಸಿಪಾಲರಾಗಿ ನಿವೃತ್ತಿ

ಹೊಂದಿದರು.

ಇಲ್ಲಿನ ಸೇವಾವಧಿಯಲ್ಲಿ ಇವರಿಂದ ಮಾರ್ಗದರ್ಶನ ಪಡೆದ ಅನೇಕ ವಿದ್ಯಾರ್ಥಿಗಳು ದೇಶವಿದೇಶಗಳಲ್ಲಿ ಪ್ರಖ್ಯಾತಿಯನ್ನು ಹೊಂದಿದರು.

ಶುದ್ಧೋದನರ ತೈಲಚಿತ್ರಗಳು ಭಾರತದ ಅನೇಕ ಸರ್ಕಾರಿ ಕಚೇರಿಗಳಲ್ಲಿ, ದೇಶವಿದೇಶ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಸಂಗ್ರಹಿತವಾಗಿವೆ. 1958ರಲ್ಲಿ ದೆಹಲಿಯ ರಾಷ್ಟ್ರಪತಿ ಭವನದ 'ಮೈಸೂರು ರೂಮ್' ಅನ್ನು ಕಲಾತ್ಮಕವಾಗಿ ಸಿದ್ಧಪಡಿಸಲು ಶುದ್ಧೋದನ ಆಹ್ವಾನಿತರಾದರು. ಈ ಹಜಾರದಲ್ಲಿ ಜೋಗ್ ಜಲಪಾತ, ಮೈಸೂರು ಅರಮನೆ[illegible] ದೃಶ್ಯ, 'ನಂದಿ ಪರ್ವತ' ಮುಂತಾದ ಚಿತ್ರಗಳಿವೆ. ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರ ಕಾಲದಲ್ಲಿ ರಾಜಭವನಕ್ಕಾಗಿಯೂ ಕಲವು ಚಿತ್ರಗಳನ್ನು ರಚಿಸಿದರು.

1964ರಲ್ಲಿ ಬೆಂಗಳೂರು ಕಾಫಿ ಬೋರ್ಡಿಗಾಗಿ, ಕಾಫಿ ವನದಲ್ಲಿ ಹೊಯ್ಸಳ ವಾಸ್ತುಕಲೆ ಎಂಬ ಕೃತಿಯನ್ನು ರಚಿಸಿದರು. "Hoysala Architecture in Coffee land" ಇವರ ಚಿತ್ರಕಲಾ ಸಂಗ್ರಹವು ರಾಜಭವನ, ಕುಮಾರಕೃಪ ಹಾಗೂ ವಿಧಾನಸೌಧದ ಅಸೆಂಬ್ಲಿ ಹಜಾರದಲ್ಲಿ ಮಹಾತ್ಮಾ ಗಾಂಧೀಜಿಯವರ ಪೂರ್ಣಾಕಾರದ ತೈಲಚಿತ್ರವಿದೆ.

ಇದಲ್ಲದೆ ಬಾದಾಮಿಕೋಟೆ, ಮಾನಸ ಗಂಗೋತ್ರಿಯಲ್ಲಿ ಸೂರ್ಯೋದಯ, ಬಿಜಾಪುರದ ಕೋಟೆ, ಭಾರಿ ಪ್ರಮಾಣದ ಅರಳಿಮರ ಮುಂತಾದ ಚಿತ್ರಗಳು ಬೆಂಗಳೂರಿನ ಡೆಪ್ಯುಟಿ ಕಮಿಷನರ್‌ರವರ ಕಚೇರಿಯಲ್ಲಿವೆ. ಖೆಡ್ಡಾ, ನಾಗರಹೊಳೆ ದೃಶ್ಯ ಅರಣ್ಯ ಭವನದಲ್ಲಿ ಪ್ರದರ್ಶಿತವಾಗಿವೆ. ಎಲ್ಲ ಚಿತ್ರಗಳೂ ಬಹುತೇಕ 4'x3' ಆಕಾರದವುಗಳು. ಕೈಲಾಸ್ ಗೆಸ್ಟ್ ಹೌಸ್‌ನಲ್ಲಿರುವ ತುಂಗಭದ್ರಾ ಜಲಾಶಯ ಗಲ್ಫ್ ರಾಷ್ಟ್ರದಲ್ಲಿ Indian Schoolನಲ್ಲಿ ಸುಲ್ತಾನ್ ಆಫ್ ಓಮೆನ್ (Sultan of Omen) ಚಿತ್ರಗಳೂ ರಮಣೀಯ.

1939ರಿಂದ ಆರಂಭಿಸಿ ಶುದ್ಧೋದನ ಸುಮಾರು ಹತ್ತು ಏಕವ್ಯಕ್ತಿ ಪ್ರದರ್ಶನಗಳನ್ನು ಮದ್ರಾಸು, ಬೆಂಗಳೂರು, ಮೈಸೂರು ಮುಂತಾದ ಸ್ಥಳಗಳಲ್ಲಿ ನಡೆಸಿದ್ದಾರೆ. ಎರಡು ವರ್ಷಗಳ ಹಿಂದೆ ಮೈಸೂರಿನ 'ಇನ್‌ಸ್ಟಿಟ್ಯೂಟ್ ಆಫ್ ಇಂಜಿನೀಯರ್ಸ್' ಸಂಸ್ಥೆಯ ಸಭಾಂಗಣದಲ್ಲಿ ನಡೆದ ಚಿತ್ರಕಲಾ ಪ್ರದರ್ಶನವನ್ನು ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟಿಸಿದರು. ಇಲ್ಲಿ ಕುವೆಂಪುರವರ ಭಾವಚಿತ್ರವೂ ಸೇರಿದಂತೆ ಅನೇಕ ಒಳ್ಳೆಯ ಚಿತ್ರಗಳಿದ್ದುವು. ಮಹಾತ್ಮಾ ಗಾಂಧೀಜಿಯವರ ಬಳಿ ಇದ್ದ ಮೂರು ಕೋತಿಗಳ ಪ್ರತಿಮೆಗಳ ಭಾವನೆಯನ್ನು ಒಂದೇ ಕೋತಿಯ ಚಿತ್ರದಲ್ಲಿ ರೂಪಿಸಿದ್ದ ಚಿತ್ರವನ್ನು ನೋಡಿದ ಕುವೆಂಪು ಇದಕ್ಕೆ 'ಪೂರ್ಣ ಪ್ರಜ್ಞ'ವೆಂಬ ನಾಮಕರಣ ಮಾಡಿದರು.

1969ರಲ್ಲಿ ನಿವೃತ್ತರಾದ ಶುದ್ಧೋದನ ವಿರಾಮದ ವೇಳೆಯನ್ನೆಲ್ಲಾ ಚಿತ್ರ ರಚನೆಗೇ ಮೀಸಲಿಟ್ಟಂತಿದೆ. ಅವರ ಚಿತ್ರಶಾಲೆಯಲ್ಲಿ ಸ್ವಹಸ್ತಾಕ್ಷರದಿಂದ ಕೂಡಿದ ಪ್ರಧಾನಿ ಇಂದಿರಾಗಾಂಧಿ, ಜವಾಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಕುವೆಂಪು ಮುಂತಾದವರ ಚಿತ್ರಗಳೇ ಅಲ್ಲದೆ ನಂದಿ ಬೆಟ್ಟ, ಬಾದಾಮಿಯ ಕಲ್ಲು ಬಂಡೆ ಮುಂತಾದ ಭೂ ದೃಶ್ಯಗಳ ಹಾಗೂ ಮನೋಧರ್ಮದಿಂದ ರಚಿಸಿದ ಸಮಕಾಲೀನ ಭಾವನಾಚಿತ್ರಗಳೂ, ಸಂಯೋಗ ಚಿತ್ರಗಳೂ ಪ್ರದರ್ಶಿತವಾಗಿವೆ. 1971ರಲ್ಲಿ ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ದೊರಕಿದೆ.

ಸಮಕಾಲೀನ ಭಾವನೆಗಳು ಸಾಂಪ್ರದಾಯಿಕ ಶೈಲಿಯ ಕಲಾವಿದರಲ್ಲಿ ಬರಲು ಸಾಧ್ಯವಿಲ್ಲವೆಂಬ ಭಾವನೆಗೆ ಉತ್ತರವೆಂಬಂತೆ ಆ ಕ್ಷೇತ್ರದಲ್ಲೂ ಪ್ರಾಯೋಗಿಕ ಕೃಷಿ ನಡೆಸಿ, ಶುದ್ಧೋದನ ಕೆಲವು ನವ್ಯ ಚಿತ್ರಗಳನ್ನೂ ರಚಿಸಿದ್ದಾರೆ. ಆದರೆ ಇವರಿಗೆ ಈ ಸಂಪ್ರದಾಯದಲ್ಲಿ ಪೂರ್ಣ ನಂಬಿಕೆಯಿಲ್ಲ.

ಯಾವುದೇ ರಚನೆ ಇರಲಿ, ಯಾವುದೇ ಚಿತ್ರಣವಿರಲಿ, ಅದು ಸಮಗ್ರವಾಗಿ, ಸರ್ವಾಂಗೀಣವಾಗಿ, ಸಂಪ್ರದಾಯಬದ್ಧವಾಗಿ ಕೌಶಲ್ಯವನ್ನೆಲ್ಲ ಉಪಯೋಗಿಸಿ ರಚಿಸಬೇಕು. ಚಿತ್ರವು ಪೂರ್ಣವಾಗುವುದು ಮಾನಸಿಕ ತೃಪ್ತಿಯಿಂದಲೇ ಎಂಬುದು ಶ್ರೀ ಶುದ್ಧೋದನರ ಸಿದ್ಧಾಂತ.

ಒಎಚ್. ಎಸ್. ಘಾಟಕ್

ಎಂ.ಜೆ. ಶುದ್ಧೋದನ



ಸಮುದ್ರ ತೀರ – ಕಾರವಾರ

ಶ್ರೀನಿವಾಸ ಗುರುರಾಯ ಟಂಕಸಾಲೆ



ಎಂದೂ ಖ್ಯಾತಿಯ ಬೆನ್ನು ಹತ್ತದೆ, ಕಲೆಗಾಗಿಯೇ ಜೀವ ತೇಯ್ದು, ಅದೃಷ್ಟವೂ ಕೈಕೊಟ್ಟಾಗ, ಒಮ್ಮೆ ಪ್ರಸಿದ್ಧನಾಗಿದ್ದ ವ್ಯಕ್ತಿ ಅಳಿದ ಇಪ್ಪತ್ತು ವರ್ಷಗಳಲ್ಲಿಯೇ ಜನರ ಮನಸ್ಸಿನಿಂದಲೂ ಕಣ್ಮರೆಯಾಗಿ ಬಿಡುವುದು ಖೇದವೆನಿಸುವ ಸಂಗತಿ. ಅಂತಹ ಉದಾಹರಣೆ –

ಶ್ರೀನಿವಾಸ ಗುರುರಾಯ ಟಂಕಸಾಲೆಯವರು ಯಾವುದಕ್ಕೂ ಹೆಚ್ಚು ಅಂಟಿಕೊಳ್ಳದೇ ಸಹಸ್ರ ಚಂದ್ರ ದರ್ಶನ ಮಾಡಿದವರು ಟಂಕಸಾಲೆ. ಇಂದಿನಂತೆ ಅಂದೂ ಚಿತ್ರಕಲಾ ಕ್ಷೇತ್ರದಲ್ಲಿ ಇದ್ದ ಸ್ಪರ್ಧೆ, ರಾಜಕೀಯದಿಂದ ದೂರವಾಗಿ ಶುದ್ಧ ವರ್ಣಗಳಿಂದ ಪ್ರಕೃತಿಯ ರೂಪ, ಸೌಂದರ್ಯಗಳನ್ನು ಸೆರೆಹಿಡಿಯುತ್ತಿದ್ದರು. ಅವರೇ ಬರೆದಿರಿಸಿದ 'ಆತ್ಮಕಥನ'ವೆನ್ನಬಹುದಾದ ಲೇಖನವೊಂದು ದೊರೆಯದಿದ್ದರೆ ಟಂಕಸಾಲೆಯವರ ಜೀವನದ ಬಗ್ಗೆ ಏನೂ ತಿಳಿಯುತ್ತಿರಲಿಲ್ಲ.

ಮನೆತನಕ್ಕೆ ಅಂಟಿಕೊಂಡ 'ಟಂಕಸಾಲೆ' ಪದದ ಕಾರಣ, ಇವರ ಪಿತಾಮಹರಾದ ನಾರಾಯಣರಾಯರು ಮೈಸೂರು ಸರ್ ದಿವಾನ್ ವೆಂಕಟೇ ಅರಸರವರ ಕಾಲದಲ್ಲಿ ಸರಕಾರದ ಟಂಕಸಾಲೆಯ ಮುತ್ಸದ್ದಿಗಳಾಗಿದ್ದರೆಂದು ಹೇಳಲಾಗಿದೆ. ಆದರೂ ಮುಂದಿನ ಪೀಳಿಗೆಯವರು ಯಾರೂ ಅರಸರ ಊಳಿಗದಲ್ಲಿ ಇದ್ದಂತಿಲ್ಲ. ತಾತ (ಬಾಲಾಜಿರಾಯ ಎಂದು ಆತ್ಮಕಥೆಯಲ್ಲಿ ಬರೆದಿದೆ) ಕೋಲಾರ ಜಿಲ್ಲೆಯ ಬಾಗೇನಹಳ್ಳಿಯ ತಾಲ್ಲೂಕು ಕಚೇರಿಯಲ್ಲಿ ಶಿರಸ್ತೇದಾರರಾಗಿದ್ದು, ಕೊನೆಯ ದಿನಗಳಲ್ಲಿ ಹತ್ತಿರದ ಚಂದೂರಿನಲ್ಲಿ ನೆಲೆಸಿದರು. ತಂದೆ ಗುರುರಾಯರು ಅಲ್ಲಿಯೇ ಅಧ್ಯಾಪಕರಾದರು. (ಆತ್ಮಕಥೆಯಲ್ಲಿ 'ಕೃಷ್ಣರಾಯ' ಎಂದು ಹೆಸರಿಸಿದೆ) ಊರು ಚಿಕ್ಕದಾದರೂ ಅಲ್ಲಿ ಕಲಾವಿದರು, ಗೊಂಬೆ ಆಟದವರೂ, ನಾಟಕ ತಂಡ ಇತ್ಯಾದಿ ಕಲೆಯ ವಾತಾವರಣವಿತ್ತು.

1887ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಒಂದು ದಿನ ಗುರುರಾಯರು ಶನಿಮಹಾತ್ಮೆ ಗೊಂಬೆಯಾಟ ಆಡಿಸುತ್ತಿದ್ದಾಗ ಶ್ರೀನಿವಾಸನ ಜನನವಾಯಿತು. ಅದೇ ಚಂದೂರಿನಲ್ಲಿ ಶ್ರೀನಿವಾಸಚಾರ್ಯ ಎಂಬಾತ ಬಣ್ಣದ ಬೊಂಬೆಗಳನ್ನು, ದೇವರ ವಿಗ್ರಹಗಳನ್ನು, ಪರದೆ ಇತ್ಯಾದಿ ಚಿತ್ರಗಳನ್ನು ಮಾಡುತ್ತಿದ್ದು, ಟಂಕಸಾಲೆಯವರ ತಂದೆಗೆ ಆತ ಬಹಳ ಬೇಕಾಗಿದ್ದು, ತಾವೂ ಆತನಿಂದ ಅಲ್ಪ ಸ್ವಲ್ಪ ಕಲೆಯನ್ನು ಕಲಿತಿದ್ದು ಅವರ ಹೆಸರೇ ಮಗನಿಗೆ ಇರಿಸಿರಬೇಕೇನೋ! ಮಗ ಮುಂದೆ ಚಂದೂರಿನಲ್ಲಿಯೇ ಮಾಧ್ಯಮಿಕ ವಿದ್ಯಾಭ್ಯಾಸ ಮುಗಿಸುವ ವೇಳೆಗೆ ತಂದೆಯವರು ತಾಲ್ಲೂಕು ಕಚೇರಿಯಲ್ಲಿ ಬೇರೆ ಹುದ್ದೆಗೆ ಹೋಗಿದ್ದರು. ಮಾಧ್ಯಮಿಕ ಶಾಲೆಗೆ ಟಂಕಸಾಲೆಯವರು ಹೊರ ಊರಿಗೆ ಹೋಗಬೇಕೆಂದಿದ್ದಾಗ ಅನಿರೀಕ್ಷಿತವಾಗಿ ಉತ್ತರ ಭಾರತಕ್ಕೆ ಹೋಗಿ ಬಂಧುಗಳೊಬ್ಬರ ಮನೆಯಲ್ಲಿ ನಾಲ್ಕೈದು ವರ್ಷವಿದ್ದು, ವಿದ್ಯಾಭ್ಯಾಸ ಕಡಿದು ಹೋಗಿ ಮರಳಿ ಚಂದೂರಿಗೆ ಬರುವ ವೇಳೆಗೆ ತಂದೆಯ ನಿಧನವಾಗಿ ಓದು ನಿಂತುಹೋಯಿತು. ಕಲಾವಿದ್ಯಾರ್ಥಿಯಾಗುವ ಮೊದಲು ಟಂಕಸಾಲೆಯವರು ಪೊಲೀಸು ಚಾಕರಿ ಮಾಡಿದಂತೆ ತೋರುತ್ತದೆ. ಹಾಗೆ ಹಾಗಲವಾಡಿಯಲ್ಲಿದ್ದಾಗ ನಾಟಕ ಕಂಪನಿಯ ಪರದೆ ಬರೆಯುವ ಕಲಾವಿದನ ಸಲಹೆಯಂತೆ 1908ರಲ್ಲಿ

ಮುಂಬೈಗೆ ಚಿತ್ರಕಲೆಯನ್ನು ಕಲಿಯಲು ಹೋದರು. ಮೊದಲಿಗೆ ಅಂದಿನ ಖ್ಯಾತ ಕಲಾವಿದ ಹಲ್ದಂಕರ್ ಅವರಲ್ಲಿ ಕಲಿತರು. ಪ್ರವೇಶ ಧನ ಮೂರು ರೂಪಾಯಿಗಳು. ತಿಂಗಳ ಶುಲ್ಕ ಮೂರು ರೂಪಾಯಿಗಳು. ಬಣ್ಣ ಕಾಗದ ಇತ್ಯಾದಿಗಳಿಗೆ ಮೂರು ರೂಪಾಯಿಗಳು. ಗೆಳೆಯರ ಸಹಾಯದಿಂದ ದೊರೆತ ಕೆಲಸವೊಂದರಲ್ಲಿ ಮಾಹೆಯಾನ ಹತ್ತು ರೂಪಾಯಿ ಸಂಬಳ ಬರುತ್ತಿತ್ತು. ಉಳಿದುಕೊಳ್ಳಲು ಉಚಿತವಾದ ಕೊಠಡಿ ದೊರಕಿತ್ತು. ಉಳಿದ ನಾಲ್ಕು ರೂಪಾಯಿಗಳಲ್ಲಿ ಜೀವನ ಸಾಗಿಸಬೇಕಿತ್ತು. ಮೂರು ವರ್ಷ ಖಾಸಗಿಯಲ್ಲಿ ಕಲಿತ ನಂತರ ಜೆ.ಜೆ.ಶಾಲೆಯಲ್ಲಿ ಪ್ರವೇಶ ದೊರೆಯಿತು. ಅಲ್ಲಿ ಕಲಾ ಪರೀಕ್ಷೆಗಳಲ್ಲಿ ಮೂರು ವರ್ಷ ಪ್ರಾಥಮಿಕ ಶಿಕ್ಷಣ, ಆನಂತರ ಐದು ವರ್ಷದ ಉನ್ನತ ಕಲಾಧ್ಯಯನದಂತೆ ವಿದ್ಯಾಭ್ಯಾಸವಿತ್ತು. ಟಂಕಸಾಲೆಯವರಿಗೆ ಪೂರ್ವಾನುಭವವಿದ್ದುದರಿಂದ ಉನ್ನತ ಕಲಾಧ್ಯಯನದಲ್ಲಿಯೂ ಒಂದು ವರ್ಷ ರಿಯಾಯಿತಿ ದೊರೆತು ಎರಡನೇ ವರ್ಗಕ್ಕೆ ಸೇರುವಂತಾಯಿತು. ಆ ವೇಳೆಗೆ ಬಂಧುಗಳಿಂದಲೂ ಹಣದ ಸಹಾಯ ದೊರೆತು ಸ್ವಲ್ಪ ನೆಮ್ಮದಿಯಿಂದ ಕಲಾಭ್ಯಾಸ ಮಾಡುವಂತಾಯಿತು. ಹಲವರು ಸಹಪಾಠಿಗಳು ಒಂದು ಕೋಣೆಯಲ್ಲಿದ್ದು, ಖಾನಾವಳಿಯಲ್ಲಿ ಉಂಡು, ಸಮುದ್ರ ದಡದಲ್ಲಿ ಸ್ಕೆಚ್‌ಗಳನ್ನು ಮಾಡುತ್ತ, ಪ್ರತಿವರುಷವೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುತ್ತಿದ್ದರು. ವರ್ಷದ ಪ್ರಥಮ ಬಹುಮಾನ ಇವರ ಪಾಲಿಗೆ ಕಟ್ಟಿಟ್ಟದ್ದೇ. ಆಗಲೇ ಟಂಕಸಾಲೆಯವರಿಗೆ ನಿಸರ್ಗದಲ್ಲಿಯ ಅಪೂರ್ವ ಸಂಯೋಜನೆಗಳನ್ನು ಹುಡುಕುವ, ದಿನನಿತ್ಯದ ಜೀವನದಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಕಾಣುವುದನ್ನು ಇವರು ಕಲಾಕಾರನ ದೃಷ್ಟಿಯಿಂದ ನೋಡುವುದನ್ನು ಅಭ್ಯಸಿಸಿ, ಮುಂದೆ ತಾವು ನಿಸರ್ಗ ಚಿತ್ರಣವನ್ನೇ ಧ್ಯೇಯವಾಗಿ ತೆಗೆದುಕೊಳ್ಳುವ ಬಗ್ಗೆ ಶ್ರಮಿಸುತ್ತಿದ್ದರು. ಇನ್ನು ವಿದ್ಯಾರ್ಥಿಯಾಗಿದ್ದಾಗಲೇ ಕಲಾಪ್ರದರ್ಶನಗಳಿಗೆ ಚಿತ್ರಗಳನ್ನು ಕಳಿಸುತ್ತಿದ್ದರಲ್ಲದೆ, ನಿಸರ್ಗ ಚಿತ್ರಣಕ್ಕೇ ಮೀಸಲಾದ ಬಹುಮಾನಗಳನ್ನು ಪಡೆಯುತ್ತಿದ್ದರು. ಇದರಿಂದಾಗಿ ಮುಖ್ಯೋಪಾಧ್ಯಾಯರ ಕೃಪೆಗೂ ಪಾತ್ರರಾದರು. ಆಗಲೇ ಇವರ ನಿಸರ್ಗ ಚಿತ್ರಣಗಳನ್ನು ಮೆಚ್ಚಿ ವಿದೇಶೀ ಕಲಾರಸಿಕರು ಕೊಳ್ಳುತ್ತಿದ್ದುದು ಇವರಿಗೆ ಕಲೆಯ ಅಭ್ಯಾಸಕ್ಕೆ ಇನ್ನಷ್ಟು ನೆರವಾಯಿತು. ಯಶಸ್ವಿಯಾಗಿ ಅಂತಿಮ ವರ್ಷ ಮುಗಿಸಿದಾಗ ಕಾರಣಾಂತರದಿಂದ ಬೆಂಗಳೂರಿಗೆ ಬರಬೇಕಾಯಿತು. ಮಾಧ್ಯಮಿಕ ಶಾಲೆಯಲ್ಲಿ ಕಲಾ ಶಿಕ್ಷಕನ ಹುದ್ದೆಯನ್ನು ಪಡೆಯ ಹೋದಾಗ ಹಿರಿಯ ಅಧಿಕಾರಿ ಚಿತ್ರಕಲಾವಿದರ ಬಗ್ಗೆ ಹಗುರವಾಗಿ ಆಡಿದ ಮಾತುಗಳು ಅಂದು ಕಲೆಗೆ ಇದ್ದ ಸ್ಥಾನ–ಮಾನಗಳನ್ನು ತೋರಿಸುತ್ತದೆಯಾದರೂ ಇವರ ಕಲೆಯನ್ನು ಮೆಚ್ಚುವ, ಖರೀದಿಸುವ ಬೇರೊಂದು ವರ್ಗವೇ ಇತ್ತು. ಮೈಸೂರಿನ ಮಹಾರಾಜ ಹೈಸ್ಕೂಲ್‌ನಲ್ಲಿ 1915ರಿಂದ 1919ರವರೆಗೆ ಕಲಾಶಿಕ್ಷಕರಾಗಿದ್ದರು. ಮುಂಬೈನಲ್ಲಿ ಕಲಿತಾಗಲೂ ಅವರಿಗೆ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯ ಇರುವಿಕೆ ತಿಳಿದಿರಲಿಲ್ಲ. ಅಥವಾ ಅಲ್ಲಿಯ ವಾತಾವರಣ ಸರಿಹೊಂದಿರಲಿಲ್ಲ. ಆದರೆ ಅಲ್ಲಿ ಹೆಚ್ಚಿನ ಸಂಬಳ ಹಾಗೂ ಜನರ ಪರಿಚಯವಾಗುವುದೆಂದು 1919ರಲ್ಲಿ ಕಲಾಶಿಕ್ಷಕರಾಗಿ ಸೇರಿದರು.

ಕಲೆಯ ಬಗ್ಗೆ ಗಂಧ–ಗಾಳಿಯಿಲ್ಲದ ಅಧಿಕಾರಿಗಳಿಂದ ಇವರಿಗೆ ಅಲ್ಲಿ ದೊರೆತ ಕೆಲಸ ಕರಕುಶಲ ವಿಭಾಗದ್ದು. ಅದನ್ನೇ ಹತ್ತು ವರ್ಷಗಳು ಶ್ರದ್ಧೆಯಿಂದ ಮಾಡಿದರಲ್ಲದೆ, ಇತರ ವೇಳೆಯಲ್ಲಿ ತಮ್ಮ ಪ್ರಿಯವಾದ ನಿಸರ್ಗವನ್ನು ಹುಡುಕಿ ಹೋಗುತ್ತಿದ್ದರು. ತಾವು ಪ್ರಕೃತಿ ಚಿತ್ರಣಕ್ಕೆ ಪಡುತ್ತಿದ್ದಷ್ಟು ಶ್ರಮ, ಕಾಡು–ಮೇಡುಗಳ ಅಲೆದಾಟವನ್ನು ಮುಂದಿನ ಪೀಳಿಗೆಯವರು ಮಾಡುತ್ತಿರಲಿಲ್ಲವೆಂಬ ಕೊರಗು ಅವರಿಗೆ ಕೊನೆಯವರೆಗೆ ಇತ್ತು. ರಾಜಕೀಯ ಆಂದೋಳನದ ಬಿಸಿ ಇವರಿಗೂ ತಟ್ಟಿತು. ರಾಜಾಶ್ರಯ ಬಯಸದ ಇವರ ಕೃತಿಗಳನ್ನು ಕೊಳ್ಳುತ್ತಿದ್ದ ಪಾಶ್ಚಿಮಾತ್ಯರು ದೇಶ ಬಿಟ್ಟುಹೊರಟರು; ವರಮಾನ ನಿಲ್ಲುವಂತಾಯಿತು. ಬೆಲೆ ಏರಿಕೆ, ಸಾಲಗಳು ಮತ್ತು ಕೆಲವು ಮನೋದೌರ್ಬಲ್ಯಕ್ಕೆ ಈಡಾಗಿ, ಕಿರಿವಯಸ್ಸಿನಲ್ಲಿ ಬಹಳಷ್ಟು ನೊಂದರು. ಡಿಸೈನ್‌ನಿಂದ ಕಲಾಶಿಕ್ಷಣ ವಿಭಾಗಕ್ಕೆ ವರ್ಗವಾದರೂ ಸಂಬಳದಲ್ಲಿ ಬದಲಾವಣೆಗಳಾಗಲಿಲ್ಲ. ಆದರೆ ಶಿಷ್ಯರಿಗೆ ತಾವು ಕಲಿತದ್ದನ್ನು ತಿಳಿಸುವಲ್ಲಿ ಇವು ಯಾವುದೂ ಅಡ್ಡಿಯಾಗಲಿಲ್ಲ. ಟಂಕಸಾಲೆಯಿಂದ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಲಿತ ಕಲಾವಿದರ ಪರಂಪರೆಯೇ ಇದೆ. ಒಂದು ದೃಷ್ಟಿಯಲ್ಲಿ ಇವರ ಮುಂದಿನ ಪೀಳಿಗೆಯಲ್ಲಿ ನಿಸರ್ಗ ಚಿತ್ರವನ್ನು ತಮ್ಮ ಧ್ಯೇಯವಾಗಿ ತೆಗೆದುಕೊಂಡ ಮೈಸೂರು ಪ್ರದೇಶದ ಕಲಾವಿದರುಗಳು ಟಂಕಸಾಲೆಯಿಂದ ಸ್ಫೂರ್ತಿ ಪಡೆದರು ಎಂದರೆ ಅತಿಶಯೋಕ್ತಿ ಆಗಲಾರದು. ಹನುಮಂತಯ್ಯ, ಶುದ್ಧೋದನ, ಸುಬ್ಬುಕೃಷ್ಣ, ರುಮಾಲೆ ಚನ್ನಬಸವಯ್ಯ, ಎಂ.ಎಸ್.ಚಂದ್ರಶೇಖರ್,

ಸೋಮಸುಂದರ್, ರಾಮಚಂದ್ರ, ತಿಪ್ಪೇಸ್ವಾಮಿ ಮುಂತಾದ ಅನೇಕ ಕಲಾ ವಿದರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಟಂಕಸಾಲೆ ಯವರು ಅಧ್ಯಾಪಕರಾಗಿದ್ದಾಗ ಕಲಿಯುತ್ತಿದ್ದರು. ಕೆಲವರು ನೇರವಾಗಿ ಶಿಷ್ಯರೂ ಆಗಿದ್ದರು. ಟಂಕಸಾಲೆ ಯವರು ಚಿತ್ರೀಕರಣಕ್ಕೆ ಆರಿಸುವ ಜಾಗ, ಮೂರು ಗಂಟೆ ಗಳಲ್ಲಿ ಚಿತ್ರಿಸಿಕೊಂಡು ಬರುವ ಕೌಶಲ್ಯ, ಕಾಗದದ ಬಿಳಿಯ ಬಣ್ಣವನ್ನೇ ಯಥೇಷ್ಟವಾಗಿ ಬಳಸುತ್ತಿದ್ದ ರೀತಿ, ಶುದ್ಧ ವರ್ಣಗಳನ್ನು ಬಳಸುತ್ತ ಅವು ಫಲಕದ ಮೇಲೆಯೇ ಮಿಶ್ರವಾಗುವ ವಿಧಾನ ಸಾತ್ವಿಕ ಜೀವನ, ಮೌನವಾಗಿ ಕಲೆ–ಕಲಾವಿದರ ಬಗ್ಗೆ ಚಿಂತಿಸುವ, ತತ್ವ ಜ್ಞಾನಿಯಂತೆ ಕೆಲವೇ ಮಾತುಗಳಲ್ಲಿ ಅರ್ಥಗರ್ಭಿತ ಉತ್ತರ ನೀಡುತ್ತಿದ್ದ ಟಂಕಸಾಲೆಯ ಬಗ್ಗೆ, ಅವರ ಒಡನಾಡಿಗಳೆಲ್ಲಾ ಮೆಚ್ಚುಗೆಯ ಮಾತುಗಳನ್ನೇ ಆಡುತ್ತಾರೆ. ಅವರ ಹೃದಯ ವೈಶಾಲ್ಯ, ಸತ್ಕಾರ ಮನೋಭಾವ ಕುರಿತು ಮನಬಿಚ್ಚಿ ಹೇಳುತ್ತಾರೆ.


ಶ್ರೇಷ್ಠ ಕಲಾವಿದ, ಆದರ್ಶ ಶಿಕ್ಷಕರು ಆಗಿದ್ದ ಟಂಕಸಾಲೆಯವರು ಬರಹಗಾರರೂ ಹೌದು. 'ಅಪರಂಜಿ' ಎಂಬ ಪ್ರಕಟಿತ ಪುಸ್ತಕ ಹಳ್ಳಿಯ ರೈತರ ಜೀವನವನ್ನು ಕುರಿತು ತಿಳಿಸುತ್ತದೆ. 'ಚಂಡೂರು ನಾರಾಯಣ' ಎಂಬ ಅಪ್ರಕಟಿತ ಕಾದಂಬರಿ ಅವರ ಜೀವನ ಚರಿತ್ರೆ ಎಂದೇ ತಿಳಿಯಲಾಗಿದೆ. ಇವುಗಳಲ್ಲಿ ಜೀವನದ ಆಳವಾದ ವಿಶ್ಲೇಷಣೆ ಜನರ ಮನೋಧರ್ಮ, ಹಳ್ಳಿ–ಪೇಟೆಗಳಲ್ಲಿಯ ಬದುಕು, ಕಲೆಯ ಸ್ಥಾನ–ಮಾನ ಇತ್ಯಾದಿಗಳನ್ನು ಸರಳ, ಸಹಜ ಸುಂದರ ಭಾಷೆಯಲ್ಲಿ ರಚಿಸಿರುವುದನ್ನು ಕಾಣಬಹುದು.

ಟಂಕಸಾಲೆಯವರನ್ನು 1969–70ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಸನ್ಮಾನಿಸಿತು. ಚಿತ್ರಕಲಾ ಪರಿಷತ್ತು ಬ್ಯಾಂಕ್ವೆಟ್ ಹಾಲ್‌ನಲ್ಲಿ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸನ್ಮಾನವನ್ನು ಮಾಡಿತು. ಎಂಬತ್ತೈದು ವರ್ಷಗಳ ಸಾರ್ಥಕ ತುಂಬು ಜೀವನ ನಡೆಸಿ 85ನೆಯ ವಯಸ್ಸಿನಲ್ಲಿ, 1972ರ ಜುಲೈ ತಿಂಗಳಲ್ಲಿ ನಿಧನರಾದರು.

(ಈ ಲೇಖನಕ್ಕೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿದ ಶ್ರೀಯುತ ಕ.ರಾ.ಕೃ ಅವರಿಗೆ ವಂದನೆಗಳು.)

ಮಾ. ಮಂಜುಳ

ಸಾಗರದತ್ತ ಭರಮಪ್ಪ ಪಾಟೀಲ



ಐವತ್ತೊಂಬತ್ತು ವರ್ಷಗಳ ಅಂಚು ದಾಟಿ ಅರವತ್ತರ ಹೊಸ್ತಿಲ ತುಳಿಯಬೇಕೆನ್ನುವಾಗಲೇ ಕಲಾವಿದ ಸಾಗರದತ್ತ ಪಾಟೀಲ 1986 ಅಕ್ಟೋಬರ್ 2 ಗಾಂಧೀ ಜಯಂತಿಯ ದಿನದಂದು ಕಣ್ಮರೆಯಾದರು. ಆದರೆ, ಅವರು ರಚಿಸಿದ ಕೃತಿಗಳಲ್ಲಿ ಪಾಟೀಲರ ಕಲಾಜೀವಂತಿಕೆ ಇನ್ನೂ ಉಳಿದಿದೆ.

ಜನನ, ಸ್ಥಳ ಹಾಗೂ ವಿದ್ಯಾಭ್ಯಾಸ

8ನೆಯ ಅಕ್ಟೋಬರ್ 1927ರಂದು ಬೆಳಗಾವಿಯಲ್ಲಿ ಜನಿಸಿದ ಸಾಗರದತ್ತ ಅವರು ಸರಾಫಿ ಕಲಾವಿದರಾದ ಭರಮಪ್ಪ ಪಾಟೀಲ ಅವರ ಪುತ್ರ. ಮೆಟ್ರಿಕ್ ಪರೀಕ್ಷೆಯವರೆಗೆ ಬೆಳಗಾವಿಯಲ್ಲಿ ಅಭ್ಯಸಿಸಿ, ಮುಂದೆ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾ ಶಿಕ್ಷಣ ಪಡೆದು, ಡ್ರಾಯಿಂಗ್ ಕೋರ್ಸ್ ಮುಗಿಸಿದರು. 1959ರಲ್ಲಿ ಅಲ್ಲಿಯ ಹೈಸ್ಕೂಲೊಂದರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಯನ್ನಾರಂಭಿಸಿದರು.

ಕಲಾಸೇವೆಯೊಂದಿಗೆ ಕಲಾಭ್ಯಾಸ

ಕಲಾ ಶಿಕ್ಷಕರಾಗಿದ್ದುಕೊಂಡೇ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನ 'ಆರ್ಟ್ ಮಾಸ್ಟರ್' ಪದವಿಯನ್ನು ಗಳಿಸಿಕೊಂಡು 1963ರಲ್ಲಿ ಬೆಳಗಾವಿಗೆ ಮರಳಿ ಬಂದರು. ತನ್ನ ಶಿಕ್ಷಣದ ಖರ್ಚನ್ನು ತಾನೇ ನಿಭಾಯಿಸಿಕೊಳ್ಳಬೇಕೆನ್ನುವ ವಿಚಾರದಿಂದಾಗಿ ಕೆಲವು ವರ್ಷಗಳ ಕಾಲ ಕಮರ್ಶಿಯಲ್ ಆರ್ಟಿಸ್ಟ್ ಆಗಿಯೂ ಕೆಲಸ ಮಾಡಿದರು. ಮುಂಬಯಿಯಿಂದ ಬಂದ ನಂತರ 1966ರಲ್ಲಿ ಬೆಳಗಾವಿ ಜಿಲ್ಲೆಯ ಟಳಕವಾಡಿಯಲ್ಲಿ ಹೈಸ್ಕೂಲಿನ ಕಲಾ ಶಿಕ್ಷಕರಾಗಿ ಕೆಲಸಕ್ಕೆ ಸೇರಿ ನಂತರ ಕೆಲವು ವರ್ಷ ಬೆಳಗಾವಿಯ ಮರಾಠಿ ಟ್ರೈನಿಂಗ್ ಕಾಲೇಜಿನಲ್ಲಿ ಹಾಗೂ ಬೆನ್ಸನ್ ಸ್ಮಿತ್ ಆರ್ಟ್ ಸ್ಕೂಲಿನಲ್ಲಿ ಕಲಾ ಪ್ರಾಧ್ಯಾಪಕರಾಗಿಯೂ ದುಡಿದಿದ್ದಾರೆ.

ಕಲಾಪ್ರದರ್ಶನಗಳು

ಕರ್ನಾಟಕ ಚಿತ್ರಕಲಾ ಪರಿಷತ್ತು, ಮೈಸೂರು ದಸರಾ ಪ್ರದರ್ಶನ, ಮುಂಬಯಿಯ ಆರ್ಟ್ ಸೊಸೈಟಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಗಳ ಆಶ್ರಯದಲ್ಲಿ ನಡೆದ ಚಿತ್ರಕಲಾ ಪ್ರದರ್ಶನಗಳಲ್ಲಿ ಸಾಗರದತ್ತ ಭಾಗವಹಿಸಿದ್ದಾರೆ. 1970ರಲ್ಲಿ ಕೊಲ್ಹಾಪುರದ ಟೌನ್‌ಹಾಲ್‌ನಲ್ಲಿ, 1976ರಲ್ಲಿ ಸಿದ್ಧಣ್ಣನವರ ಚೇಂಬರ್ಸ್‌ನಲ್ಲಿ, 1977ರಲ್ಲಿ ಬೆಂಗಳೂರು ಅಲಾಯಿನ್ಸ್ ಫ್ರಾಂಚೈಸ್ ಮತ್ತು ಧಾರವಾಡದ ಹಾಲಭಾವಿ ಆರ್ಟ್ ಗ್ಯಾಲರಿಯಲ್ಲಿ, 1977 ಮತ್ತು 1982ರಲ್ಲಿ ಬೆಳಗಾವಿಯ ಮಾರ್ಕೆಟ್ ಸ್ಕೂಲಿನಲ್ಲಿ, ಬೆಳ ಗಾವಿಯ ಸಾರ್ವಜನಿಕ ವಾಚನಾಲಯದಲ್ಲಿ, 1981 ಹಾಗೂ 1983ರಲ್ಲಿ, ಅನಂತರ 1984ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಂಸ್ಥೆಯಲ್ಲಿ ತಮ್ಮ ಜಲವರ್ಣ ಹಾಗೂ ತೈಲವರ್ಣಗಳಿಂದ ರಚಿಸಿದ ಚಿತ್ರಗಳ "ಏಕವ್ಯಕ್ತಿ ಕಲಾ ಪ್ರದರ್ಶನ" ಮಾಡಿದರು.

ತಮ್ಮ ಇಳಿ ವಯಸ್ಸಿನಲ್ಲೂ ಅತ್ಯಂತ ಉತ್ಸಾಹಿಯಾಗಿ ಕಲಾಚಿತ್ರಗಳನ್ನು ನಿರ್ಮಿಸುತ್ತಿದ್ದ ಸಾಗರದತ್ತ ಅಷ್ಟೇ ಉತ್ಸಾಹದಿಂದ ಕೊನೆಯವರೆಗೂ ಸಾರ್ವಜನಿಕ ಕಲಾ ಪ್ರದರ್ಶನಗಳನ್ನು ಮಾಡಿದರು. 1982ರ ಏಪ್ರಿಲ್ ತಿಂಗಳಿನಲ್ಲಿ 'ಏಕವ್ಯಕ್ತಿ' ಕಲಾ ಪ್ರದರ್ಶನವನ್ನು ಧಾರವಾಡದ ಸ್ಕೂಲ್ ಆಫ್ ಆರ್ಟ್‌ನಲ್ಲಿ ಏರ್ಪಡಿಸಿದಾಗ ಇಡೀ ಉತ್ತರ ಕರ್ನಾಟಕದ ಕಲಾಭಿಮಾನಿಗಳನ್ನೆಲ್ಲಾ ತಮ್ಮ ಕೃತಿಗಳ ಮೂಲಕ

ಅವರು ಆಕರ್ಷಿಸಿ, ಪ್ರದರ್ಶನದ ಸಂದರ್ಶಕರ ಸಂಗ್ರಹ ಪುಸ್ತಕದಲ್ಲಿ ಅನೇಕ ಅಭಿಮಾನಿಗಳು ಸಾಗರದತ್ತ ಅವರ ಕಲಾ ಚಿತ್ರಗಳ ಬಗೆಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. – "ಏಕವ್ಯಕ್ತಿ ನಿರ್ಮಿಸಿದ ಇಂಥ ವೈವಿಧ್ಯಮಯ ಚಿತ್ರಗಳ ಪ್ರದರ್ಶನ ಈ ಭಾಗದಲ್ಲಿಯೇ ಇದು ಪ್ರಥಮ. ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದ ಸಾಗರದತ್ತರ ವೈವಿಧ್ಯಮಯ ಕಲಾ ರಚನೆಯಿಂದಾಗಿ ವಿವಿಧ ಮಾಧ್ಯಮಗಳಿಂದ ಕೂಡಿದ ಚಿತ್ರಗಳು ಬದುಕಿನ ವಿವಿಧ ಸ್ತರಗಳನ್ನು ಹೊಂದಿರುವುದರ ಜೊತೆಗೆ ಬಣ್ಣಗಳನ್ನು ಸಂಯೋಜನೆಯಲ್ಲಿ ಬಳಸಿಕೊಳ್ಳುವ ರೀತಿ ನಿಜವಾಗಿಯೂ ಆಕರ್ಷಣೀಯ ಹಾಗೂ ಅಭಿನಂದನೀಯ" ಎಂಬುದಾಗಿ ಪ್ರಶಂಸಿಸಿದ್ದಾರೆ.

ಕಲಾಕೃತಿಗಳ ವಿಶ್ಲೇಷಣ

ಕಲೆಯು ಕೆಲಸವೆಂದರೆ, ಒಂದು ಲಾಭದಾಯಕ ಉದ್ಯಮವೆಂದು ಸಾಗರದತ್ತ ಅವರು ಭಾವಿಸಲಿಲ್ಲ. ಕಲಾ ಸಾಧನೆ ಒಂದು ಮಾನಸಿಕ ಸಿದ್ಧಿಯು, ಸಂತೋಷ ಪಡುವ ಹವ್ಯಾಸವೆಂದು ಪರಿಗಣಿಸಿಕೊಂಡು ಬಂದವರು. ಹೀಗಾಗಿ ಅವರ ಯಾವುದೇ ಚಿತ್ರಗಳಲ್ಲಿ ಈ ಉದ್ದೇಶದ ಮೌಲ್ಯದ ಗುಣಗಳೇ ಸ್ಪಷ್ಟವಾಗಿ ಕಾಣುತ್ತವೆ.

ಜಲವರ್ಣದ ಚಿತ್ರಗಳಲ್ಲಾಗಲಿ ಅಥವಾ ತೈಲವರ್ಣದ ಚಿತ್ರಗಳಲ್ಲಾಗಲಿ ಎರಡರಲ್ಲೂ ಒಂದೇ ಮಟ್ಟದ ಪ್ರಾವೀಣ್ಯತೆ ಸಾಗರದತ್ತ ಅವರದು. ಹೆಚ್ಚಾಗಿ ಭಾವಚಿತ್ರಗಳನ್ನು ಅವರು ಚಿತ್ರಿಸಿದ್ದಾರೆ. ವರ್ಣವನ್ನು ಸಂಯೋಜಿಸುವ ರೀತಿ, ಸರಳತೆ ಹಾಗೂ ಸಹಜತೆಯಿಂದಾಗಿ ಶುದ್ಧ ಭಾರತೀಯ ಶೈಲಿಯಲ್ಲಿ ರಚಿತಗೊಂಡ ಅವರ ವರ್ಣ ಸಂಯೋಜನಾ ಚಿತ್ರಗಳು ಹೆಚ್ಚು ಸುಂದರ ಎನಿಸುತ್ತವೆ. ವ್ಯಕ್ತಿ ಚಿತ್ರಗಳಲ್ಲಿ ಮೈ ಬಣ್ಣದ ಜೊತೆಗೆ ಮೇಲೊದಿಕೆಯ ಬಟ್ಟೆಗಳ ಬಣ್ಣಗಳ ಮೇಳ ಹಾಗೂ ನೆರಳು ಬೆಳಕಿನ ಸ್ಪಷ್ಟವಾದ ಚಿತ್ರ ಆಕರ್ಷಣೀಯವಾಗಿದೆ.

ನೈಸರ್ಗಿಕ ಚಿತ್ರಗಳನ್ನೆಲ್ಲಾ ಬಹಳಷ್ಟು ಜಲವರ್ಣದಲ್ಲಿಯೇ ಚಿತ್ರಿಸಿದ್ದಾರೆ. ಜಲವರ್ಣದ ಚಿತ್ರಗಳು ಸಾಂಪ್ರದಾಯಿಕ ಶೈಲಿಗೆ ಸೇರಿದವು. ಅವರ ನಿಸರ್ಗ ಚಿತ್ರಗಳಲ್ಲಿ ವರ್ಣಗಳ ಜೋಡಣೆ ಹಾಗೂ ನೆರಳು ಬೆಳಕಿನ ಬಣ್ಣಗಳ ವಿನ್ಯಾಸ ಮೆಚ್ಚುವಂತಿದೆ. ನಿಸರ್ಗ ಚಿತ್ರಗಳಲ್ಲಿ ಬರುವ ವಸ್ತುಗಳಾದ ಗಿಡ–ಮರಗಳು, ರಸ್ತೆಗಳು, ಐತಿಹಾಸಿಕ ಕುರುಹುಗಳು, ಐತಿಹಾಸಿಕ ಹಾಗೂ ಆಧುನಿಕ ಕಾಲದ ಕಟ್ಟಡಗಳನ್ನು ಬಿಡಿಸುವುದರಲ್ಲಿ ಅವರದು ಪಳಗಿದ ಕೈ.

ತೈಲವರ್ಣ ಹಾಗೂ ಜಲವರ್ಣದ ಶುದ್ಧ ಭಾರತೀಯ ಶೈಲಿಯಲ್ಲಿ ರಚಿತಗೊಂಡ ಅವರ ಸಾಂಪ್ರದಾಯಿಕ ಚಿತ್ರಗಳ ಸಂಖ್ಯೆಗಳಿಗೆ ಹೋಲಿಸಿದರೆ ಸಾಗರದತ್ತ ಅವರು ರಚಿಸಿದ ಸಂಖ್ಯೆ ಬಹಳ ಕಡಿಮೆ. ಪರಂಪರಾಗತ ಶೈಲಿಯ ಜೊತೆಗೆ ಬರುಬರುತ್ತ ಆಧುನಿಕ ಶೈಲಿಯನ್ನೂ ಮೆಚ್ಚಿಕೊಂಡು ಬಂದ ಸಾಗರದತ್ತ ಸ್ವಲ್ಪ ಮಟ್ಟಿಗೆ ಸಮಕಾಲೀನ ಕಲಾವಿದರಾಗಿಯೂ ಕಾಣಿಸಿಕೊಳ್ಳುತ್ತಾರೆ. ಆಧುನಿಕ ಶೈಲಿಯಲ್ಲಿ ಅನೇಕ ರೇಖಾ ಚಿತ್ರಗಳನ್ನು ಚಿತ್ರಿಸುತ್ತ, ಅವುಗಳಲ್ಲಿ ಹೊಸ ಆಯಾಮವನ್ನು ಕಂಡು ಹಿಡಿಯುವಲ್ಲಿಯೂ ಅವರು ಪ್ರಯತ್ನಸಿದ್ದುಂಟು. ಆದರೆ ಹೊಸ ಆಯಾಮದ ಅವರ ರೇಖಾ ಚಿತ್ರಗಳಲ್ಲಿ ಪ್ರಖರವಾದ ಬಣ್ಣಗಳ ಮೇಳದ ಜೋಡಣೆ ಇನ್ನೂ ಸಮಂಜಸವಾಗಿ ಹಾಗೂ ಪರಿಪೂರ್ಣವಾಗಿ ಪಳಗಬೇಕಾದ ಅಂಶ ಗೋಚರವಾಗುತ್ತದೆ.

ಆದರೆ ಪಾರಂಪರಿಕ ಶೈಲಿಯಲ್ಲಿ ಚಿತ್ರಿಸಿದ ಅವರ ಶ್ರವಣಬೆಳ್ಗೊಳದ ಭಿತ್ತಿಚಿತ್ರಗಳಲ್ಲಂತೂ ಅವರದೇ ವಿಶಿಷ್ಟತೆ ಹಾಗೂ ಪರಿಪಕ್ವತೆ ಕಾಣುತ್ತದೆ. ಸಾಗರದತ್ತ ಅವರ ಪ್ರತಿಭೆ ಹಾಗೂ ಕೌಶಲ್ಯವನ್ನು ಅವರು ರಚಿಸಿದ ಭಿತ್ತಿಚಿತ್ರಗಳಲ್ಲಿ ನಾವು ಕಾಣಬಹುದಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಆದೇಶದ ಮೇರೆಗೆ ಶ್ರವಣಬೆಳ್ಗೊಳದ ಭಿತ್ತಿಚಿತ್ರಗಳನ್ನು ಪಡಿಮೂಡಿಸುವ ಕೆಲಸ ಕೈಗೊಂಡ ಸಾಗರದತ್ತ ಅವರು ಅವುಗಳಲ್ಲಿ ತಮ್ಮ ನಿಪುಣತೆಯನ್ನು ಸ್ಪಷ್ಟವಾಗಿ ತೋರಿದ್ದಾರೆ.

ಪ್ರಸ್ತುತ ಚಿತ್ರವೊಂದರಲ್ಲಿ ನೃತ್ಯಗಾರ್ತಿಯ ನರ್ತನ ಇನ್ನೂ ನಡೆದಿರುವ ಹಾಗೆ ವರ್ಣದಲ್ಲಿ ಬಹಳ ಸುಂದರವಾಗಿ ಚಿತ್ರಿತಗೊಂಡಿದೆ. ಇಲ್ಲಿಯ ನೆರಳು–ಬೆಳಕಿನ ಸ್ಪಷ್ಟತೆಗಾಗಿ ಬಳಸಿಕೊಂಡ ವರ್ಣಗಳ ಮೇಳದಲ್ಲಿ ನೃತ್ಯಗಾರ್ತಿಯ ಚಿತ್ರಕ್ಕೆ ಬಹಳ ಸಹಜವಾಗಿ ಜೀವಂತಿಕೆಯನ್ನು ಮೂಡಿಸುತ್ತವೆ. 22"X28" ಸೈಜಿನ ಈ ಚಿತ್ರವನ್ನು ಸಾಗರದತ್ತ ಅವರು 1976ರಲ್ಲಿ ತೈಲವರ್ಣದಿಂದ ಚಿತ್ರಿಸಿದ್ದರು.

ಬಾಲ್ಯದಿಂದಲೇ ಕಲೆಯ ಆರಾಧಕರಾಗಿ ಬೆಳೆದು ಬಂದ ಸಾಗರದತ್ತ ಅವರು – "ನಮ್ಮ ಜನರಲ್ಲಿ ಕಲಾಭಿರುಚಿ, ವೈವಿಧ್ಯಮಯ ಕಲಾಶೈಲಿಗಳ ಚಿತ್ರಗಳನ್ನು ನೋಡುವ ತವಕ ಹಾಗೂ ಸೌಂದರ್ಯಪ್ರಜ್ಞೆ ಇನ್ನೂ ಹೆಚ್ಚು ಹೆಚ್ಚು ಬೆಳೆದರೆ ನಮ್ಮ ಈ ಕಲಾ

ಕೃತಿಗಳ ರಚನೆ ಸಾರ್ಥಕವಾದೀತು'' ಎನ್ನುತ್ತಿದ್ದರು.

ಲೌಕಿಕ ವ್ಯವಹಾರಗಳ ಏರು–ಪೇರುಗಳನ್ನು ಅರಿಯದ ಮತ್ತು ಹೆಚ್ಚು ಪ್ರಚಾರಕ್ಕೆ ಮನಸ್ಸು ಕೊಡದ ಸಾಗರದತ್ತ "ಕಲಾಕೃತಿಗಳ ರಚನೆಯ ಕಲಾಸೇವೆಯೊಂದೇ ನನ್ನ ಮುಖ್ಯ ಧ್ಯೇಯ'' ಎನ್ನುತ್ತಿದ್ದರು. ತಮ್ಮ ಕುಂಚ ಹಾಗೂ ವರ್ಣಗಳ ಲೋಕವನ್ನು ಬಿಟ್ಟು ಅವರು ಹೊರಬಂದವರಲ್ಲ. ತಾವಾಯಿತು, ತಮ್ಮ ಕಲಾ ರಚನೆಯಾಯಿತು.

ಅದಕ್ಕೆ ಹಿನ್ನೆಲೆಯಲ್ಲಿ ಕಲಾ ಜಗತ್ತಿನಿಂದ ಅವರನ್ನು ಬೇರ್ಪಡಿಸಲಾರದ ರೀತಿಯಲ್ಲಿ ಇದನ್ನು ಅರಿತ ಅವರ ಧರ್ಮಪತ್ನಿ ವನಮಾಲ ಸಾಗರದತ್ತ ಅವರು ಇದಕ್ಕೆ ಬೆಂಬಲವಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು.

ಈ ನಿಷ್ಕಾಮಂತ ಕಲಾವಿದನ ಸೇವೆಯನ್ನು ಮನ್ನಿಸಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ 1984ರ ಪ್ರಶಸ್ತಿಯನ್ನು ಇತ್ತು ಗೌರವಿಸಿತು. ಕಲೆಗಾಗಿಯೇ ಬದುಕಿದ ಶ್ರೀ ಸಾಗರದತ್ತ ಅವರು ತಮ್ಮ ದೈನಂದಿನ ಬದುಕಿನಲ್ಲಿಯ ಕಷ್ಟ–ಕಾರ್ಪಣ್ಯಗಳನ್ನೆಲ್ಲಾ ಮರೆತು ಕಲಾ ರಚನೆಯ ಮೂಲಕ ಸಂತೋಷಪಟ್ಟವರು.

ಸಾಂಪ್ರದಾಯಿಕ ಕಲಾವಿದರಿಗೂ ಹಾಗೂ ನವ್ಯ ಪಂಥದ ಕಲಾವಿದರಿಗೂ ಬೇಕಾಗಿದ್ದ ಸಾಗರದತ್ತ ಪಾಟೀಲ ಅವರು ಸಮಕಾಲೀನತೆಗೆ ಸ್ಪಂದಿಸಬಲ್ಲ ಒಬ್ಬ ಸೃಜನಾತ್ಮಕ ಕಲಾವಿದರೂ ಆಗಿದ್ದರು.


ಅನ್ನದಾನಿ ಹಿರೇಮಠ

ಸಾಗರದತ್ತ ಭರಮಪ್ಪ ಪಾಟೀಲ



ಮೇರಿ ಮತ್ತು ಕ್ರಿಸ್ತ

ಅ. ನ. ಸುಬ್ಬರಾಯರು



ಒಂದು ಸಮುದಾಯದ ಕಲೆ, ಜನಜೀವನಗಳು ಆ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಕಾಣಬರುತ್ತದೆ. ಬದುಕನ್ನೇ ಕಲೆ–ಸಂಸ್ಕೃತಿಗಾಗಿ ಮೀಸಲಾಗಿಸಿ ಬೆಳೆಸಿ ಹೋದವರನೇಕರು ಸರಿಯಾದ ಇತಿಹಾಸ ಇಂತಹವರ ಗುರುತರವಾದ ಕೆಲಸ ಹಾಗೂ ಸತ್ಯವನ್ನು ತೆರೆದಿಡಬಲ್ಲದು. ಅಂಥ ದೊಡ್ಡ ಬದುಕು ಬಾಳಿದವರು ಅ.ನ. ಸುಬ್ಬರಾಯರು. ಸುಮಾರು ತೊಂಬತ್ತು ವರ್ಷಗಳ ತುಂಬು ಜೀವನ. ಇದ್ದಷ್ಟೂ ಕಾಲ ಒಂದು ಕ್ಷಣವೂ ಬಿಡದೆ ಸಮುದಾಯದ ಮನಸ್ಸಿನ ಮೇಲ್ಮೆಗಾಗಿ ಬದುಕಿಗಾಗಿ ಎಲ್ಲರಲ್ಲಿಯೂ ಸಮಾನ ಭಾವ ತುಂಬಲು ಹೆಣಗಿದವರು. ಸುಬ್ಬರಾಯರು ಆರಿಸಿಕೊಂಡ ಕಲೆಯ ಮಾರ್ಗಗಳು ಹಲವು. ಪ್ರಧಾನವಾಗಿ ಚಿತ್ರಕಲೆ.

ಆಕ್ಕಿ ಹೆಬ್ಬಾಳು ಇವರ ಜನ್ಮಸ್ಥಳ. ತಂದೆ ನರಸಿಂಹಯ್ಯ, ತಾಯಿ ವೆಂಕಮ್ಮ. ಹಳ್ಳಿಯ ಕೂಲಿ ಮಠದಲ್ಲಿ ಅಕ್ಷರಾಭ್ಯಾಸ. ತಂದೆಯವರ ಮರಣದಿಂದಾಗಿ ತಾಯಿಯ ತವರಾದ ನಾಗಮಂಗಲದಲ್ಲಿ ವಾಸಮಾಡಬೇಕಾಯಿತು. ಇಲ್ಲಿ ಮಾಧ್ಯಮಿಕ ಶಾಲೆಗೆ ಸೇರಿದರು. ನಾಗಮಂಗಲದಲ್ಲಿ ವಿಶ್ವಕರ್ಮಿಗಳು ಹೆಚ್ಚು. ಇಲ್ಲಿಯ ಪಂಚಲೋಹದ ಮೂರ್ತಿಗಳು, ಎರಕಹೊಯ್ದ ದೀಪಸ್ತಂಭಗಳು ಪ್ರಸಿದ್ಧಿ. ಮೇಣದಲ್ಲಿ ಮೂರ್ತಿ ನಿರ್ಮಿಸಿ, ಮಣ್ಣುಕಟ್ಟಿ ಲೋಹವನ್ನು ಕರಗಿಸಿ ಹೊಯ್ದು ಮೂರ್ತಿಯನ್ನು ಬಿಡಿಸಿ ತೆಗೆದು ಮೇಲಿನ ಕುಸುರಿ ಕೆಲಸ ಮಾಡಿ ಮೆರುಗು ಕೊಡುತ್ತಾರೆ. ಅ.ನ. ಸುಬ್ಬರಾಯರಿಗೆ ಬಾಲ್ಯದಿಂದ ಈ ಕೆಲಸವನ್ನು ನೋಡುತ್ತಾ ನಿಲ್ಲುವುದೆಂದರೆ ಬಲು ಹಿಗ್ಗು. ಬಿಡುವಿನ ವೇಳೆಯಲ್ಲೆಲ್ಲ ಕೇಶವ ದೇವಾಲಯ, ನರಸಿಂಗ ದೇವಾಲಯಗಳನ್ನು ಸುತ್ತುತ್ತಾ, ದೇವಸ್ಥಾನದ ರಥದ ಚಿತ್ರಗಳ ಕುಸುರಿ ಕೆಲಸವನ್ನು ನೋಡುತ್ತಾ ನಿಲ್ಲುವ ಹವ್ಯಾಸ. ಈಶ್ವರಾಚಾರಿ ಶಾಸ್ತ್ರಗಳನ್ನು ತಿಳಿದು ಪ್ರಮಾಣಬದ್ಧ ಚಿತ್ರ ಮಾಡುವುದರಲ್ಲಿ ಹೆಸರಾಂತ ಶಿಲ್ಪಿ. ಆತನ ಶಿಷ್ಯರ ಜೊತೆ ತಾನೂ ಕಲಿಯುವ ಬಯಕೆಯನ್ನು ತಿಳಿಸಿದಾಗ ವಿಶ್ವಕರ್ಮ ಜನಾಂಗದವರ ವಿನಾ ಇತರರಿಗೆ ವಿದ್ಯೆ ಕಲಿಸಬಾರದೆಂಬ ಆತನ ನಂಬಿಕೆಯಿಂದಾಗಿ ಸುಬ್ಬರಾಯರಿಗೆ ಶಿಷ್ಯತ್ವ ಸಿಗಲಿಲ್ಲ.

ದುಃಖ ಅಸಹಾಯಕತೆ ಆ ಎಳೆಯನಲ್ಲಿ ಛಲ ಮೂಡಿಸಿದ್ದವು. ಒಂದು ರೀತಿಯಲ್ಲಿ ಏಕಲವ್ಯನಾಗಬೇಕಾಯಿತು. ಕೌಟುಂಬಿಕ ಸಮಸ್ಯೆ, ತನ್ನ ಮೇಲೆ ಬಿದ್ದ ಜವಾಬ್ದಾರಿಗಳ ಮಧ್ಯೆ ಆತನಿಗೆ ಏಕಾಗ್ರತೆಯಿಂದ ಕಲೆಗಾಗಿ ಕೆಲಸ ಮಾಡವುದು ಕಷ್ಟಕರವೆನಿಸಿದರೂ ಒಂದಿಲ್ಲೊಂದು ದಿನ ಕಲಾವಿದನಾಗುತ್ತೇನೆಂಬ ಮಹತ್ವಾಕಾಂಕ್ಷೆ ಹೊತ್ತು ನಾಳೆಯ ಕಲ್ಪನೆಯಲ್ಲಿ ಇವತ್ತಿನ ಅನೇಕ ಸಮಸ್ಯೆಗಳನ್ನು ದೊಡ್ಡದಾಗಿ ಪರಿಗಣಿಸದೆ ಶ್ರಮಿಸಿದರು.

ಪ್ರೊ. ಎಂ. ಹಿರಿಯಣ್ಣನವರು ಪ್ರಿನ್ಸಿಪಾಲರಾಗಿದ್ದ ಮೈಸೂರಿನ ನಾರ್ಮಲ್ ಸ್ಕೂಲಿನ ವಿದ್ಯಾರ್ಥಿಯಾಗಿ ಸೇರಿದಾಗ ವಿದ್ಯೆ ವೃತ್ತಿಗೆ ದಾರಿ ಎಂಬುದಷ್ಟೇ ಕಾರಣವಾಗಿತ್ತು. ಚಿತ್ರಕಲೆ ಕಡ್ಡಾಯವಾಗಿದ್ದುದೊಂದು ಸೌಭಾಗ್ಯ. ಮದರಾಸಿನ ಚಿತ್ರಕಲೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಮುಂದೆ ಕಾಲೇಜಾಗಿ ಪರಿವರ್ತನೆಗೊಂಡ ಅದೇ ಶಾಲೆಯಲ್ಲಿ ಉಪಾಧ್ಯಾಯ

ರಾಗಿದ್ದು ಅವರಿಗೆ ಸಮಾಧಾನದ ವಿಷಯವಾಯ್ತು. ಚಿತ್ರಗಳ ಜೊತೆಗೆ ಮಣ್ಣಿನ ಮೂರ್ತಿ, ರಿಲೀಫ್ ಮ್ಯಾಪ್ ಸಿದ್ಧ ಮಾಡುತ್ತಿದ್ದ ಸುಬ್ಬರಾಯರ ಕೃತಿಗಳಿಗೆ ಆಗಲೇ ದಸರಾ ಪ್ರದರ್ಶನದಲ್ಲಿ ರಜತ ಪದಕವೂ ಸಿಕ್ಕಿತ್ತು. ಆ ದಿನಗಳಲ್ಲೇ 'ಪುಷ್ಪರಚನೆ' ಮತ್ತು ಕೃತಕ ಪುಷ್ಪ ರಚನೆಯ ವಿಧಾನವನ್ನು ಎಳೆಯರಿಗೆ ಸರಳವಾಗಿ ಸಚಿತ್ರವಾಗಿ ಹೇಳುವ ಪುಸ್ತಕ ಹಾಗೂ 'ಮಕ್ಕಳ ತಿದ್ದುವಿಕೆ' ಪುಸ್ತಕ ಬರೆದರು, ಪ್ರಕಟಿಸಿದರು.

ಚಿಕ್ಕಮಗಳೂರಿನಲ್ಲಿ ಕಲಾಧ್ಯಾಪಕನಾಗಿ ಕೆಲಸ ಮಾಡಿದರು. ಒಲ್ಲದ ವಿದ್ಯಾರ್ಥಿಗಳಿಗೆ ಕಲಿಸುವ ಅಥವಾ ಕೆಲಸವಿಲ್ಲದೆ ಸಂಬಳಕ್ಕಾಗಿ ದುಡಿವ ಮನೋಧರ್ಮಕ್ಕೆ ಒಗ್ಗದ ಸುಬ್ಬರಾಯರು ಉದ್ಯೋಗ ಬಿಟ್ಟು ಮತ್ತೆ ಮದರಾಸಿನ ಕಲಾ ಶಾಲೆ, ಮೈಸೂರಿನ ಚಾಮರಾಜೇಂದ್ರ ಕಲಾ ಶಾಲೆಗಳಲ್ಲಿ ಹೆಚ್ಚಿನ ತಿಳಿವಳಿಕೆಗಾಗಿ ಚಿತ್ರಕಲೆಯನ್ನು ಅಭ್ಯಾಸ ಮಾಡಿದರು. ಕಾರ್ಯ ಕ್ಷೇತ್ರ ವಿಧಾನ ಬೇರೆ ಬೇರೆಯಾದರೂ ಆಲೋಚನೆ, ಉದ್ದೇಶಗಳು ಒಂದೇ ದಿಕ್ಕಿನಲ್ಲಾದ್ದರಿಂದ ಸರ್ ಎಂ. ವಿಶ್ವೇಶ್ವರಯ್ಯನವರ ಗೆಳೆತನ, ಪ್ರೋತ್ಸಾಹ ಸುಬ್ಬರಾಯರಿಗೆ ಲಭ್ಯವಾಯಿತು.

"ಮನುಷ್ಯನಿಗೆ ಸ್ವಾವಲಂಬನೆ ಮುಖ್ಯ. ನಮ್ಮ ಶಕ್ತಿಯ ಅರಿವು ನಮಗಿಲ್ಲ. ನಮ್ಮ ಸಾಮರ್ಥ್ಯವನ್ನು ನಾವು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ನಮ್ಮಲ್ಲಿರುವ ಪರಿಸರಗಳು ಹಾಗೂ ಪ್ರತಿಭಾವಂತರನ್ನು ಬಳಸಿ ಅಗತ್ಯ ವಸ್ತುಗಳನ್ನು ನಾವೇ ತಯಾರಿಸಬಹುದು..." ಎಂಬುದು ಅವರ ನಿತ್ಯ ಪಲ್ಲವಿಯಾಗಿತ್ತು. ಇಂಥ ಕಾರಣಕ್ಕಾಗಿಯೇ ಸರ್ ಎಂ.ವಿ. ಅವರು ಸ್ವಾವಲಂಬನೆಗೆ ಬೇಕಾದ ಸ್ವತಂತ್ರ ಸಂಸ್ಥೆಯ ಕಲ್ಪನೆ ಮೂಡಿಸಿ 'ಕಲಾಮಂದಿರ'ದ ಸ್ಥಾಪನೆಗೆ ನೆರವಾದರು.

ಯಾವುದೇ ಕಲಿಕೆ ವೃತ್ತಿಪರವೂ ಆಗಿರಬೇಕೆಂಬ ಉದ್ದೇಶದಿಂದ 'ಕಲೆ', 'ವೃತ್ತಿ'ಗಳನ್ನು ಸಮೀಕರಿಸಲು ಹೆಣಗಿದ ಸುಬ್ಬರಾಯರ ಮನೋಧರ್ಮವೇ ಅತ್ಯಂತ ಕುತೂಹಲ ತರುವಂಥದ್ದು. ಕಲೆ ಅದರಲ್ಲೂ ಚಿತ್ರಕಲೆಯಂಥ ಮಾಧ್ಯಮ ಈ ಬಗೆಯ ವೃತ್ತಿಪರತೆಯನ್ನು ಎಷ್ಟುಮಟ್ಟಿಗೆ ಆಪ್ತವಾಗಿಸಿಕೊಳ್ಳಬಲ್ಲುದು ಎಂಬುದು ಇಂದಿಗೂ ಕುತೂಹಲವೇ. ಕಲೆಯನ್ನು ವೈಯಕ್ತಿಕವಾಗಿಸಿಕೊಳ್ಳುವ ಸಡಗರದಲ್ಲಿ ಸಮುದಾಯಕ್ಕೆ ಎಂಬ ಮಾತು ಸಾಧಿತವಾಗಿಲ್ಲದ ಸ್ಥಿತಿಯೊಂದು ನಮ್ಮೆದುರು ಇನ್ನೂ ಇರುವಾಗ ಸುಬ್ಬರಾಯರ ಕಲೆ–ವೃತ್ತಿಗಳ ಕಲ್ಪನೆ ಕುತೂಹಲದ ಅಧ್ಯಯನವನ್ನು ಅಪೇಕ್ಷಿಸುತ್ತದೆ.

ಕಲಾವಿದನ ವೈಯಕ್ತಿಕ ಭಾವನೆಗಳು, ಅಭಿವ್ಯಕ್ತಿ ಮುಂತಾದವುಗಳ ಹಿಂದೆ ವೃತ್ತಿಪರವಾಗುವುದರ ಮಿತಿಗಳು ಎದ್ದು ಕಾಣಬರುವುದು ನಿಜ. ಹೀಗಾಗಿ 'ಕಲೆ'ಯಾಗಿ ಉಳಿಯದೆ ಅದನ್ನು ಕುಶಲ ಕಲೆ, ಕೈಗಾರಿಕೆಗಳ ಹಂತಗಳಲ್ಲಿ ಕೊಂಡೊಯ್ಯಲಾಗುತ್ತಿದೆ. ಸುಬ್ಬರಾಯರ ಕಲೆ ವೃತ್ತಿಯಾಗುವುದರ ಕಲ್ಪನೆಯ ಹಿಂದೆ ಕುಶಲ ಕಲೆಯ ಪ್ರಯತ್ನ ಇದ್ದಿರಬಹುದಾದರೂ ಕಲೆಯನ್ನು ಕೈಗಾರಿಕೆ ಮಾಡುವ ಪ್ರಯತ್ನ ಇರಲಿಲ್ಲ. ಅದರ ಅಸಾಧುತ್ವ ಅವರು ಮನಗಾಣದೇ ಇರಲಿಲ್ಲ. ಸುಬ್ಬರಾಯರ ಮೇಲೆ ಗಾಂಧೀಜಿಯವರ ಪ್ರಭಾವ ಬಹಳ. ಗಾಂಧೀಜಿಯವರ ರಚನಾತ್ಮಕ ಅಂಶಗಳಲ್ಲಿ ಅತಿ ಮುಖ್ಯವಾದ ಗ್ರಾಮೋದ್ಧಾರದ ಕಲ್ಪನೆ ಸುಬ್ಬರಾಯರನ್ನು ಬಹುವಾಗಿ ಆಕರ್ಷಿಸಿತ್ತು. ಆ ದಿನಗಳಲ್ಲಿ ಎಲ್ಲಾ ಕ್ರಿಯಾಶೀಲರೂ ಒಳಗೊಂಡಂತೆ ಸಾಮಾಜಿಕ, ರಾಜಕೀಯ ಸಂದರ್ಭಗಳಿಗೆ ಸ್ಪಂದಿಸಿ ತನ್ನ ತನ್ನ ಕಾರ್ಯಕ್ಷೇತ್ರವನ್ನು ಹೋರಾಟದ ಒಂದು ಭಾಗವಾಗಿ ಕೂಡ ದುಡಿಸಿಕೊಳ್ಳಬೇಕಾದ ಅಗತ್ಯವಿತ್ತು. ತೃತೀಯ ಜಗತ್ತಿನ ಎಲ್ಲಾ ಸಮಸ್ಯೆಗಳೂ ಇರುವ ಭಾರತದಲ್ಲಿ ಸ್ವತಂತ್ರವಾಗುವುದು ಮತ್ತು ತನ್ನ ಕಾಲ ಮೇಲೆ ತಾನು ನಿಲ್ಲುವುದು ಎಂಥ ಅಗತ್ಯವಾಗಿತ್ತು ಎಂಬುದನ್ನು ಇತಿಹಾಸ ಹೇಳುತ್ತಿದೆ. ಈ ಹಿನ್ನೆಲೆಯಲ್ಲಿ ಸುಬ್ಬರಾಯರು ತೆಗೆದುಕೊಂಡ 'ಸ್ವಾವಲಂಬನೆಗಾಗಿ ಕಲೆ'ಯನ್ನು ಬಳಸಿಕೊಂಡು ಅವರದೇ ವಿಶಿಷ್ಟ ರೀತಿಯಲ್ಲಿ ಕಲಾತ್ಮಕತೆಯ ಜೊತೆಗೇ ಬೆಳೆಸಿಕೊಳ್ಳಲೂಬಹುದೆಂಬ ನಿಲುವು. ಅವರ ಪ್ರಯೋಗಗಳು ಗಮನಾರ್ಹವಾಗುತ್ತವೆ.

ಈ ಹಿನ್ನೆಲೆಯಲ್ಲಿ ಸುಬ್ಬರಾಯರು ಆ ಹೊತ್ತಿನ ಎಲ್ಲಾ ಕ್ರಿಯಾಶೀಲ ಮನಸ್ಸುಗಳೂ ಸ್ಪಂದಿಸಿದ ಹಾಗೇ ಸ್ಪಂದಿಸಿದರು. ತನ್ನ ಕಾರ್ಯಕ್ಷೇತ್ರವನ್ನು ಒಂದೇ ಕಡೆಗೆ ಮಿತಿಗೊಳಿಸದೆ ಸಾಹಿತ್ಯ–ನಾಟಕ, ಮೊದಲಾಗಿ ಹತ್ತಾರು ದಿಕ್ಕಿನಲ್ಲಿ ಅವರ ಪ್ರಯೋಗಗಳು ನಡೆದವು.

ರವೀಂದ್ರರ ಪ್ರಭಾವ, ಮಾಸ್ತಿ, ನವರತ್ನರಾಮರಾಯರು, ದೇವುಡು ಮೊದಲಾದ ಅನೇಕರ ಸ್ನೇಹ ಸಂಬಂಧ ಅವರಿಂದ ಅನೇಕ ನಾಟಕಗಳನ್ನು ಬರೆಸಿತ್ತು. ಲಲಿತ ಪ್ರಬಂಧ, ಲೇಖನಗಳನ್ನು ಬರೆದರು. ಹಳ್ಳಿ–ಹಳ್ಳಿಗೆ ಒಯ್ದು ನಾಟಕಗಳನ್ನಾಡಿದರು. ಮಕ್ಕಳಿಗಾಗಿ ಚಿತ್ರಕಲೆ–ನಾಟಕ ಪ್ರಯೋಗಗಳು ಹೀಗೆ ಆ ಕ್ಷೇತ್ರದ

ವ್ಯಾಪ್ತಿಯೇ ಬಹು ದೊಡ್ಡದು. ರಾಜಕೀಯವಾಗಿಯೂ ದೇಶದ ಹಿತಕ್ಕಾಗಿ ಯಾವುದೇ ಚಳವಳಿ–ಚಟುವಟಿಕೆ ಎಂದರೂ ಸುಬ್ಬರಾಯರ ಆಶ್ರಯ ಇತ್ತು. ಇಂಡಿಯಾ–ಚೈನಾ ಸ್ನೇಹಕೂಟ ಆರಂಭಿಸಿದ್ದೂ ಉಂಟು. ದೇಶದ ಶತ್ರು ಚೀನಾ ಎಂದಾಗ ಛೇಡಿಸಿ ನಾಟಕ ಬರೆದು, ಆಡಿ ವಿರೋಧಿಸಿದ್ದೂ ಉಂಟು.

ನವೋದಯದವರ ನಂಟಿತ್ತು. ಪ್ರಗತಿಶೀಲರ ಎಲ್ಲಾ ಚಟುವಟಿಕೆಗಳಿಗೂ ಕುಮ್ಮಕ್ಕಿತ್ತು. ಸುಬ್ಬರಾಯರಿಗೆ ಸಮಾನ ವಯಸ್ಕರ ಸಹವಾಸವೆಂಬ ಮಿತಿಗಳಿರಲಿಲ್ಲ. ಎಲ್ಲಿ ದೇಶದ ಹಿತಸಾಧನೆ ಇದೆ ಅನ್ನಿಸಿದರೂ ಅವರ ಸ್ನೇಹ–ಸಹಾಯ ಅಲ್ಲಿ ಸಿದ್ಧವಿರುತ್ತಿತ್ತು. ಹೀಗಾಗಿ ಎಲ್ಲಾ ತಲೆಮಾರಿನ ಲೇಖಕರು, ಕಲಾವಿದರೂ ಸುಬ್ಬರಾಯರ ಜೊತೆ ವಯಸ್ಸಿನ ಅಂತರವಿಲ್ಲದೆ ಚರ್ಚಿಸಲು ಸಾಧ್ಯವಿತ್ತು.

ಸುಬ್ಬರಾಯರು ಆಗಲೇ ಹೇಳಿದ ಹಾಗೆ ಗಾಂಧೀಜಿಯವರ ಅನುಯಾಯಿಯಾದ್ದರಿಂದ ಸ್ತ್ರೀ ಪಕ್ಷಪಾತಿ. ಸ್ವಾವಲಂಬನೆ ಭಾರತೀಯ ಮಹಿಳೆಗೆ ಎಷ್ಟು ಆಗತ್ಯ ಎಂಬುದನ್ನು ಮನಗಂಡಿದ್ದರು. ಅವರ ಕಕ್ಷೆಗೆ ಬಂದ ಅದೆಷ್ಟೋ ನಿರಾಶ್ರಿತ, ಅಸಹಾಯಕ ಮಹಿಳೆಯರಿಗೆ ಸ್ವಾವಲಂಬನೆಗೆ ದಾರಿ ತೋರಿಸಿದರು. ಇಂದಿಗೂ ಅಂಥ ಅನೇಕ ಉದಾಹರಣೆಗಳು ಜೀವಂತ ಸಾಕ್ಷಿಗಳಾಗಿ ನಮ್ಮೆದುರು ಇವೆ.

ಸುಬ್ಬರಾಯರು ಅನೇಕ ಮೊದಲುಗಳಿಗೆ ಕಾರಣರು ಎಂಬುದನ್ನಷ್ಟು ಇಲ್ಲಿ ಹೇಳಿ ಮುಂದುವರಿಯಬೇಕು. ಸೈನ್ ಬೋರ್ಡ್‌ಗಳ ಪರಿಚಯ ಇಲ್ಲದ ಬೆಂಗಳೂರಿಗೆ ರಂಗಿನ ಫಲಕ ಪರಿಚಯಿಸಿ ವಿಸ್ಮಯ ತಂದವರು. 1922ರ ಖಾದಿ ಸ್ವದೇಶಿ ಚಳವಳಿಯ ದಿನಗಳಲ್ಲಿ ಖಾದಿ ಪೆಟ್ಟಿಗೆಗಳನ್ನು ಚರ್ಮದ ಪೆಟ್ಟಿಗೆಗೆ ಬದಲಿಗೆ ತಯಾರಿಸಿ ವಿಶೇಷ ಆಕರ್ಷಣೆಗೆ ಕಾರಣರಾದರು. ಬೇಡಿಕೆಯೂ ಅಪಾರವಾಗಿತ್ತು ಇದಕ್ಕೆ.

ವಿದೇಶದಿಂದ ಬರುತ್ತಿದ್ದ ಫೋಟೋ ಫ್ರೇಂಗಳನ್ನು ಕಂಡು ತಾವೇ ಫ್ರೇಂಗಳನ್ನು ತಯಾರಿಸುವ–ಅದರಲ್ಲಷ್ಟು ಕಲಾತ್ಮಕತೆ ತರುವ ಪ್ರಯತ್ನ ಮಾಡಿ ವಿಶೇಷ ಯಂತ್ರ ತಯಾರಿಸಿದರು. ಯುದ್ಧದ ಸಮಯ ಹೊರಗಿನಿಂದ ಏನನ್ನೂ ತರಿಸುವಂತಿರಲಿಲ್ಲ. ಅವರೇ ಬುದ್ಧಿ ಉಪಯೋಗಿಸಿ ವಿನ್ಯಾಸ ಮಾಡಿ ಸಿದ್ಧ ಮಾಡಿದ ಹೊಸ ಯಂತ್ರ ಫ್ರೇಂಗಳನ್ನು ತಯಾರಿ ಮಾಡುತ್ತಿದ್ದ ವಿಧಾನ ಕಂಡು ಸರ್ ಎಂ.ವಿ. ಅವರು "ವಿದೇಶೀ ಯಂತ್ರವೆಂದರೆ ಬಾಯಿಬಿಡುವ ಮಂದಿ – ಸ್ವದೇಶದಲ್ಲೂ ಎಂಥ ಅದ್ಭುತಗಳು ಸಾಧ್ಯ ಎಂಬುದನ್ನು ಗಮನಿಸಲು ಸುಬ್ಬರಾಯರು ಒಳ್ಳೆ ಉದಾಹರಣೆ'' ಎಂದು ಉದ್ಗರಿಸಿದ್ದರು.

ಚಿತ್ರಕಲೆ ಬಲ್ಲವರಾದ್ದರಿಂದ ವಿಶೇಷ ರೀತಿಯ ಚಿತ್ರಗಳನ್ನು ರಚಿಸಿ ಬ್ಲಾಕ್ ಮಾಡಿ ಸೀರೆಗಳ ಪ್ರಿಂಟಿಂಗ್ ಆರಂಭಿಸಿದರು. ಇದು ಒಂದು ಉದ್ಯಮವೇ ಆಗಿ ಬೆಳೆಯಿತು. ಅನೇಕರಿಗೆ ಜೀವನ ನಿರ್ವಹಣೆಗೆ ದಾರಿಯಾಯಿತು.

ಛಾಯಾಗ್ರಹಣದಲ್ಲೂ ಆಸಕ್ತಿ ತೋರಿ ಮೊದಲಬಾರಿಗೆ ಕ್ಯಾಮರಾ ತರಿಸಿ ಸ್ಟುಡಿಯೋ ಮಾಡಿದವರೂ ಸುಬ್ಬರಾಯರೇ.

ಕನ್ನಡ ಲೇಖಕಿಯರ ಸಂಘ ಮಾಡಲು ನೆರವಾಗಿ ಬರಹಗಾರ್ತಿಯರ ಸಂಘಗಳಿಗೆ ಕಾರ್ಯ ತತ್ಪರತೆಗೆ ಅನುವು ಮಾಡಿದರು. ತೊಗಲು ಗೊಂಬೆ, ಸೂತ್ರದ ಗೊಂಬೆಗಳ ಪ್ರದರ್ಶನ ಕಲಿತು ಪ್ರಯೋಗಿಸಲು ನೆರವಾದರು.

ಮುಖ್ಯವಾಗಿ ನಾಟಕಗಳತ್ತ ಒಲವು ತೋರಿದರು. ಸ್ವತಃ ನಾಟಕ ಬರೆದರು. ನಾಡಿನ ಹಿರಿಯ ಸಾಹಿತಿಗಳನ್ನು ಸೇರಿಸಿ ಮಹಾ ಸಮ್ಮೇಳನಗಳನ್ನು ಮಾಡಿ ರಂಗಭೂಮಿಗಾಗಿ ಅನೇಕ ನಿರ್ಣಯಗಳನ್ನು ಮಂಡಿಸಿದರು.

ಜಾನಪದ ಕಲಾ ಪ್ರದರ್ಶನ ಮಾಡಿದ ಮೊದಲಿಗರೂ ಇವರೇ. ಪಂಡಿತ ತಾರನಾಥರ ಸ್ನೇಹ, ಪ್ರೋತ್ಸಾಹ ಇವರನ್ನು 'ಕಲಾ' ಎಂಬ ಮಾಸಪತ್ರಿಕೆಯನ್ನು ಹೊರಡಿಸಲು ಪ್ರೇರೇಪಿಸಿತು. ನಾಡಿನ ಹೆಸರಾಂತ ಬರಹಗಾರರು ಅದಕ್ಕಾಗಿ ಸಾಹಿತ್ಯ ವಿಮರ್ಶೆ, ಕಲೆಯ ಕುರಿತ ಗಂಭೀರ ಚರ್ಚೆಗೆ ಅನುವಾಗುವ ಲೇಖನಗಳನ್ನು ಕೊಟ್ಟು ಸಹಕರಿಸಿದ್ದರು. 'ಕಲಾ' ಪ್ರಾಯಶಃ ಇತಿಹಾಸದಲ್ಲಿ ಎಂದೂ ಉಳಿಯುವಂಥ ಅಪರೂಪದ ಪತ್ರಿಕೆಯಾಗಿತ್ತು.

1919ರಲ್ಲಿ ಆರಂಭವಾದ 'ಕಲಾಮಂದಿರ'ದ ಬೆಳವಣಿಗೆಯ, ಕಾರ್ಯ ಚಟುವಟಿಕೆಯ ಹಿಂದೆ ಅನೇಕ ಹೊಸ ಹೊಸ ಯೋಜನೆಗಳು, ಸಾಧನೆ ಮತ್ತು ಈ ಹೊತ್ತಿನ ಅನೇಕ ಬೇರೆ ಬೇರೆ ಕ್ಷೇತ್ರಗಳಲ್ಲೂ ಹೆಸರಾಂತ ಕಲಾವಿದರನ್ನು ಪೋಷಿಸಿದ, ಪ್ರೋತ್ಸಾಹಿಸಿದ ಇತಿಹಾಸ ಇದೆ. ಒಂದು ಕಲಾ ಶಾಲೆ, ಸಂಘಟನೆ, ಬೆಳವಣಿಗೆಗಳು, ಸುಧಾರಣೆಯಂಥ ಗುರುತರ ಹೊಣೆ ಹೊತ್ತ ಸುಬ್ಬರಾಯರಿಗೆ ಕಲಾವಿದನಾಗಿ ಬಹುಕಾಲ ನಿಲ್ಲುವಂಥ ಕಲಾಕೃತಿ ರಚಿಸಲು ಸಾಧ್ಯವಾಗಲಿಲ್ಲ.

ಸುಬ್ಬರಾಯರು ಎಂಥ ಕಲಾವಿದರು ಎಂದು ಹೇಳಲು ಅವರ ಕಲಾಕೃತಿಗಳು ಇಲ್ಲ. ಈ ಹೊತ್ತು ಕಲಾ ಮಂದಿರದಲ್ಲಿ ಇರುವ ಗುಬ್ಬಿ ವೀರಣ್ಣನವರ ದೊಡ್ಡ 'ರೂಪ ಚಿತ್ರ' ಅವರೇ ರಚಿಸಿದ್ದು. ಅವರ ಗೆರೆ–ಬಣ್ಣ ಮುಖ್ಯವಾಗಿ ಎಂಥ ಸಮರ್ಥ ಕಲಾವಿದ ಅವರಾಗಿದ್ದ ಎಂಬುದನ್ನು ಆ ರೂಪ ಚಿತ್ರ ಹೇಳಬಲ್ಲದು. ಆದರೆ ಒಬ್ಬ ಕಲಾವಿದನಾಗಿ ತನ್ನ ಹುಟ್ಟಿನ ಕೃತಿಗಳನ್ನು ಕ್ಯಾನ್‌ವಾಸ್ ಮೇಲೆ ಆಕ ಇಟ್ಟು ಹೋಗಲಿಲ್ಲ. ಅವನ ಕ್ಯಾನ್‌ವಾಸ್ ಇಡೀ ಭಾರತವೇ ಆಗಿತ್ತು. ಅದರ ಮೇಲೆ ಅಸಂಖ್ಯಾತ ಕಲಾವಿದರೂ, ಸಾಹಿತಿಗಳೂ, ಶಿಲ್ಪಿಗಳೂ ನಾಟಕಕಾರರೂ ಸಂಗೀತ–ನೃತ್ಯ–ಶಿಲ್ಪ ಲಲಿತ ರತ್ನಗಳನ್ನು ಅರಳಿಸಿ ಬೆಳೆಸಿದ್ದೇ ಅವರ ಕಲೆಯ ಕಾಣಿಕೆ!

ಸುಬ್ಬರಾಯರು ಬರೆದ ಹಲವು ಪುಸ್ತಕಗಳು ನಮಗೆ ಅವರ ಪ್ರತಿಭೆಯನ್ನು ಎದುರಿಗಿಡಬಲ್ಲವು. ಮುಖ್ಯವಾಗಿ ಕಲಾಭಿಮಾನಿಗಳಿಗೆ ಅತ್ಯಂತ ಕಷ್ಟವಾದ ಪರ್ಸ್‌ಪೆಕ್ಟಿವ್ ಕುರಿತಂತೆ ಅವರು ಬರೆದ ದ್ವಿಭಾಷಾ ಗ್ರಂಥ ಅದರಲ್ಲಿನ ಚಿತ್ರಗಳೂ, ವಿವರಗಳೂ ಮುಖ್ಯವಾದವು. ತನ್ನ ಕಲಾಪಾಂಡಿತ್ಯ ತನ್ನ ರೀತಿಯನ್ನು ಬರಹದಲ್ಲಿ ಹರಿಯುವಂತೆ ಅರ್ಥವಾಗುವಂತೆ ಮಾಡುವುದಕ್ಕಿಂತ ಎಲ್ಲವೂ ಇತರರಿಗೆ ನೆರವಾಗಲು ದುಡಿದದ್ದೇ ಹೆಚ್ಚು.

ಕಲಾಮಂದಿರ ಅಂಥದಕ್ಕೇ ಹುಟ್ಟು ಗಟ್ಟಿ ಕೊಟ್ಟಿತು. 'ಕಲೆಗಾಗಿ ಕಲೆ' ವಾದವನ್ನು ಒಪ್ಪದ, ಗಾಂಧೀವಾದಿಯಾಗಿದ್ದೂ, ಎಡಪಂಥೀಯ ನಂಬಿಕೆಗಳನ್ನು ಕನ್ನಡವಾಗಿಸಿಕೊಂಡಿದ್ದ ಸುಬ್ಬರಾಯರಿಗೆ 'ಕಲೆ' ಬದುಕನ್ನೂ ರೂಪಿಸಬೇಕು. ವೃತ್ತಿಯಾದಾಗಲೂ ಶ್ರೇಷ್ಠತೆ ಮಾಸುವುದಿಲ್ಲ ಎಂಬ ನಂಬಿಕೆ.

"ಸ್ವಾತಂತ್ರ್ಯವೇ ಸ್ವರ್ಗ", "ಸ್ವಾವಲಂಬನೆಯೇ ಸ್ವರ್ಗದ ಹಾದಿ" ಎಂಬುದು ಅವರ ತಾರಕ ಮಂತ್ರವಾಗಿತ್ತು. ಅವರ ವಿದ್ಯಾರ್ಥಿಗಳೆಲ್ಲ ಬಡಪಾಲು ಬಡವರು. ಅವರೇ ವಿದ್ಯಾರ್ಥಿಯನ್ನು ಪೋಷಿಸಿ ಕಲಿಸಬೇಕಿತ್ತು. ಕಲಾ ಶಾಲೆಯ ಯೋಜನೆ ಹೊಸದು. ಕಲಾ ಪ್ರದರ್ಶನದ ಕಲ್ಪನೆ ಮತ್ತೂ ಹೊಸದು. ಭಾರತದ ನಾನಾ ಕಡೆಗಳಿಂದ ಕಲಾಕೃತಿಗಳನ್ನು ಆಹ್ವಾನಿಸಿ ಮೊದಲ ಕಲಾ ಪ್ರದರ್ಶನ 1921ರಲ್ಲಿ ಮಾಡಿದ ಕೀರ್ತಿ ಕಲಾಮಂದಿರದ್ದು.

1927ರಲ್ಲಿ ಲಲಿತಕಲೆ, ಕುಶಲಕಲೆಯ ಜೊತೆಗೆ ಪ್ರಾಚೀನ ಕಲಾಕೃತಿಗಳು, ವಿವಿಧ ಕುಶಲಕಲೆಯ ಪ್ರತ್ಯೇಕ ಪ್ರದರ್ಶನ, ಗುಡಿ ಕೈಗಾರಿಕೆಗಳ ಮಾದರಿಗಳ ಪ್ರದರ್ಶನ ಇತ್ಯಾದಿಗಳನ್ನೊಳಗೊಂಡ ವಿಶೇಷ ಪ್ರದರ್ಶನ ಅಮೀರ ಗಣ್ಯರ ಸಹಕಾರದಿಂದ ನಡೆಯಿತು.

ಕೈಮಗ್ಗ, ಛಾಯಾಚಿತ್ರಗಳು ಮೊದಲಾದ ಅನೇಕ ಹೊಸ ಹೊಸ ವಿಧಾನಗಳನ್ನು ಪ್ರದರ್ಶನದಲ್ಲಿ ಸೇರಿಸಲಾಗಿತ್ತು.

ಕ್ಲೇಮಾಡೆಲಿಂಗ್, ಪೇಂಟಿಂಗ್, ಉಡ್ ಕಾರ್ವಿಂಗ್, ಭಿತ್ತಿಚಿತ್ರಗಳನ್ನು ಕಲಿಸಲು ಸುಬ್ಬರಾಯರು ಕಲಾಮಂದಿರದಲ್ಲಿ ಆರಂಭಿಸಿದರು. ಈ ಹೊತ್ತು ಸರ್ಕಾರ ಅವರಿಗೆ ಕಲಾ ಶಾಲೆಗೆಂದು ಕೊಟ್ಟಿದ್ದ ನಿವೇಶನದಲ್ಲಿ ಸರ್ಕಾರದ ನೆರವಿನಿಂದಲೇ ಕಟ್ಟಡ ಸಿದ್ಧವಾಗಿದೆ. ಶಾಲೆ ನಡೆಯುತ್ತಿದೆ. ಅವರ ಅಪೇಕ್ಷೆಯಂತೆ ಮಕ್ಕಳ, ಹವ್ಯಾಸಿಗಳ ನಾಟಕಗಳಿಗೆ ಅನುಗುಣವಾಗುವ ರಂಗಮಂದಿರ ತರಬೇತಿಗಳ ಅನುಕೂಲವನ್ನೂ ಅಲ್ಲಿ ಮಾಡಲಾಗಿದೆ.

ಕಲಾ ಶಿಕ್ಷಣಕ್ಕೆ ಎಸ್.ಎಸ್.ಎಲ್.ಸಿ. ಆಗಿರಲೇಬೇಕೆಂಬ ನಿಯಮ ತೆಗೆಯಬೇಕೆಂದು ಅವರ ಅಪೇಕ್ಷೆಯಾಗಿತ್ತು. ಓದು, ಬರಹ ಬಾರದವನಿಗೂ ಕಲೆಯ ಶಿಕ್ಷಣ ಸಿಗಬೇಕು. ಅದು ಗ್ರಾಮೀಣ ಪರಿಸರಕ್ಕೂ ಹರಡಿದರೆ ವೃತ್ತಿಗಾಗಿ ಆಶ್ರಯಿಸುವ ಕಲೆ ಬೇರೆ ಬೇರೆ ನೆಲೆಯಲ್ಲಿ ವ್ಯಾಪಿಸುತ್ತದೆ. ಜನ ಮನ ಸೇರುತ್ತದೆ. ಈ ಹೊತ್ತು ಶ್ರೀಮಂತ ವರ್ಗದ ಫ್ಯಾನ್ಸಿ ಮಾತ್ರ ಆಗಿರುವ 'ಕಲೆ' ನಿಜವಾದ ಆಸಕ್ತನ ಹೃದಯಕ್ಕೂ ಹತ್ತಿರವಾಗುತ್ತದೆ ಎಂದು ನಂಬಿದ್ದವರು ಆ.ನ. ಸುಬ್ಬರಾಯರು.

ಜಿಲ್ಲಾಧಿಕಾರಿಗಳು ಅವರವರ ಕ್ಷೇತ್ರದಲ್ಲಿ ಆಸಕ್ತರಾದ 2–3 ಜನವನ್ನು ಆಯ್ದು ಶಿಕ್ಷಣಕ್ಕಾಗಿ ಕಳುಹಿಸಬೇಕು. ಆ ವಿದ್ಯಾರ್ಥಿಗಳಿಗೆ ಗ್ರಾಮ ಪರಿಸರಕ್ಕೆ ಅಗತ್ಯವಾಗಿ ಬೇಕಾದ ಬೋರ್ಡ್ ಬರೆಯುವ, ಬ್ಯಾನರ್ ತಯಾರಿಸುವ, ಪೋಸ್ಟರ್ ಬರೆಯುವುದೇ ಮೊದಲಾದ ತಯಾರಿ ಕೊಡುವುದು ಅಗತ್ಯ. ಅದು ಅವರಿಗೆ ಕಲೆ, ವೃತ್ತಿ ಎರಡೂ ಆಗಿ ನೆರವಾಗಬಲ್ಲದು ಎಂದು ಅಭಿಪ್ರಾಯಪಡುತ್ತಿದ್ದರು.

ಮಹಿಳೆ ಗೃಹಕೃತ್ಯದ ಅನಂತರವೂ ಬಿಡುವಿನ ವೇಳೆಯಲ್ಲೂ ಬಾಟಿಕ್, ಇಕೆಬನಾ, ಶಿಟ್‌ವರ್ಕ್ ಮೊದಲಾದವನ್ನು ಕಲಿತು ಸ್ವಾವಲಂಬಿಯಾಗುವ ಪ್ರಯತ್ನ ಮಾಡಬೇಕೆಂದೂ, ಹಾಗೆ ಮನೆ–ಮನೆಗೂ ಕಲೆಯನ್ನು ಹರಡಬೇಕೆಂದೂ ಬಯಸಿದ್ದರು.

ಸುಬ್ಬರಾಯರಿಗೆ ಲಲಿತಕಲಾ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು. ಈ ಹೊತ್ತು ನಾಡಿನಾದ್ಯಂತ ಅವರ ಶಿಷ್ಯರು ಕಲೆಯ ವಿವಿಧ ಕ್ಷೇತ್ರಗಳಲ್ಲಿ

ದುಡಿಯುತ್ತಿದ್ದಾರೆ. ಸುಬ್ಬರಾಯರು ಸಂಬಂಧ ಸಮಸ್ಯೆ ಒದರಿ ಆಕೆ ಚಿಣ್ಣದ ಗಡಿಗೆ, ಹಳ್ಳಿಯ ಬದುಕು, ಕೂಲಿ, ನೇಕಾರ, ಅರುಂಧತಿ ಮೊದಲಾದ ಹಲವಾರು ನಾಟಕಗಳನ್ನು ಮಕ್ಕಳಿಗೆ, ಹವ್ಯಾಸಿಗಳಿಗೆ ಬರೆದಿದ್ದಾರೆ. 'ಮಹಾತ್ಮ ಗಾಂಧಿ ವಿಚಾರಣೆ' ಕುರಿತ ಪುಸ್ತಕ ಪ್ರಕಟಿಸಿದ್ದಾರೆ. 'ದೃಗ್ದರ್ಶನ' ಗ್ರಂಥ ಜಾಮಿತಿ ಕುರಿತಂತೆ ಬರೆದಿದ್ದಾರೆ. ಅವರು ಕಲಾಮಂದಿರದ ವಿಶೇಷ ಸಂದರ್ಭಗಳಲ್ಲಿ ಹೊರ ತರುತ್ತಿದ್ದ ಸ್ಮರಣ ಸಂಚಿಕೆಗಳು ಎಲ್ಲರಂತೆ ಕೇವಲ ಜಾಹೀರಾತಿಗಾಗಿ ಬರುವ ಸಂಚಿಕೆಗಳಾಗಿರದೆ ಉಪಯುಕ್ತ ಲೇಖನಗಳೂ, ಇತಿಹಾಸ ಬರೆಯುವವನಿಗೆ ಬೆಳಕು ತೋರಬಲ್ಲ ಅಂಶಗಳೂ ಇರುವಂಥ ಉಪಯುಕ್ತ ಆಕಾರ ಕೃತಿಗಳಾಗಿವೆ. ಈತ ಶ್ರೇಷ್ಠ ಕಲಾವಿದ ಎಂದು ಸಾಬೀತು ಮಾಡಲು, ತೋರಲು ಕೃತಿಗಳಿಲ್ಲ. ಮಾಡಿದ ಕೆಲಸವೆಲ್ಲಾ ಅನೇಕ ಮೊದಲುಗಳೇ ಆದ್ದರಿಂದ ಅಲ್ಲೂ ವಿಮರ್ಶಕರಿಗೆ ಕೌಶಲ್ಯ–ನಯ–ನವಿರು ಕಾಣದೇ ಹೋಗಬಹುದು. ಆದರೆ ಒಳ್ಳೆಯ ಶಿಕ್ಷಕ, ಸಂಘಟಕ, ಪ್ರೋತ್ಸಾಹಕ.

ಸುಬ್ಬರಾಯರು 20–5–81ರಂದು ತಮ್ಮ 90ನೇ ವಯಸ್ಸಿನಲ್ಲಿ ನಿಧನರಾದರು.

ವಿಜಯಾ

ಅ.ನ. ಸುಬ್ಬರಾಯರು



ಭಾವಚಿತ್ರ

ಎಫ್. ಎಂ. ಸೂಫಿ



ಮೈಸೂರಿನ ಹೊರಗೆ ಒಂದು ಹೊಸ ಬಡಾವಣೆ. ಆಕಸ್ಮಿಕವಾಗಿ ಅಲ್ಲೊಂದು ಮನೆಗೆ ಹೋಗಬೇಕಾಯಿತು. ಹೊರ ವರಾಂಡದಲ್ಲಿ ಕುಳ್ಳಿರಿಸಿದರು. ಕೂರುತ್ತಿದ್ದಂತೆಯೇ ಗೋಡೆಯ ಮೇಲೆ ಐದು–ಆರು ಶೈಲಿ ಬರೆದ ಚಿತ್ರಗಳು ಕಣ್ಣಿಗೆ ಬಿದ್ದವು. ಎಲ್ಲವೂ ಜಲವರ್ಣದವು. ಕೆಲವು ಭೂ ದೃಶ್ಯವಾದರೆ, ಉಳಿದವು ಕಾಡು–ಪ್ರಾಣಿಗಳ ಚಿತ್ರ. ಆಧುನಿಕ ಸಲಕರಣೆಗಳಿಂದ ಬಣ್ಣದ ಛಾಯಾಚಿತ್ರ ತೆಗೆದಂತೆ ದಟ್ಟ ಅರಣ್ಯದ ಹಿನ್ನಲೆಯಲ್ಲಿ, ನಿಲುವು ನೋಟಗಳಲ್ಲಿಯೂ ಕ್ರೂರತ್ವವನ್ನು ಮೈದುಂಬಿಸಿಕೊಂಡ ವನ್ಯಜೀವಿಗಳು. ಚಿತ್ರದ ಕೆಳ ಅಂಚಿನಲ್ಲಿ ಸ್ತ್ರೀಯೊಬ್ಬರು ರಚಿಸದ್ದೆಂದು ತಿಳಿಸುವ ಸಹಿ ಇಲ್ಲದಿದ್ದರೆ ಖಂಡಿತ ಅದು ಪ್ರಸಿದ್ಧ ಕಲಾವಿದರೊಬ್ಬರು ರಚಿಸಿದ್ದೆಂದು ಯಾರಾದರೂ ನಂಬಬಹುದಾಗಿತ್ತು. ಆ ಮನೆಯೊಡತಿಯೇ ಆ ಚಿತ್ರಗಳನ್ನು ರಚಿಸಿದ್ದು. ಅವರ ಪರಿಚಯವಾಗುತ್ತಿದ್ದಂತೆಯೇ ನಾನು ಕೇಳಿದ ಮೊದಲ ಪ್ರಶ್ನೆಯೆಂದರೆ "ನೀವು ಸೂಫಿ ಅವರ ಶಿಷ್ಯರೇ?'' ಎಂದು. ಗೃಹಿಣಿಗೆ ಅಚ್ಚರಿ. ಕೇವಲ ನಾಲ್ಕು ಚಿತ್ರಗಳಲ್ಲಿ ತಮ್ಮ ಗುರುಗಳ ವ್ಯಕ್ತಿತ್ವವನ್ನೇ ನಾನು ಕಂಡೆನೆಂಬಂತೆ, ತಾವು ತಮ್ಮ ಗುರುಗಳಿಂದ ಅವರ ಹೆಸರನ್ನು ಉಲಿಸುವಂತೆ ಅವರಿಂದ ಪ್ರಭಾವಿತಳಾದೆ ಎಂಬ ಧನ್ಯಭಾವದೊಂದಿಗೆ 'ಹೌದು' ಎಂದರು. ಹಾಗೂ ಒಳಗಿರಿಸಿದ್ದ ಇನ್ನೂ ಹಲವು ಚಿತ್ರಗಳನ್ನು ತಂದು ತೋರಿಸಿದರು. ಎಲ್ಲದರಲ್ಲೂ ಜನಾಬ್ ಸೂಫಿ ಅವರ ಪ್ರಭಾವ ಅಚ್ಚಳಿಯದೆ ಕಾಣಬಹುದಿತ್ತು. ಗುರುಗಳು ತಾವು ಕಲಿತದ್ದನ್ನು ಪೂರ್ಣವಾಗಿ ಶಿಷ್ಯರಿಗೆ ಧಾರೆ ಎರೆದಿದ್ದರು. ಶಿಷ್ಯರೂ ಅಷ್ಟೇ ಸತ್ವಶಾಲಿಯಾಗಿ ಪಡೆದಿದ್ದರು. ಹೀಗೆ ಎಫ್.ಎಂ. ಸೂಫಿಯವರ ಹೆಸರು ಉಳಿಸಿರುವ ಕಲಾವಿದ ಶಿಷ್ಯರ ಪರಂಪರೆ ಇದೆ.

ಸೂಫಿ ಅವರು 1916ರಲ್ಲಿ ಮೈಸೂರಿನಲ್ಲಿ ಹುಟ್ಟಿದರು. ಫಜಲ್ ಅಲಿ ಹಾಗೂ ಅಯಾತ್ ಬಿ ತಂದೆ–ತಾಯಿಯರು. ತಂದೆಯವರೂ ಕಲಾವಿದರಾಗಿದ್ದು ಹೂ, ಬಳ್ಳಿ ಇತ್ಯಾದಿ ಡಿಸೈನ್‌ಗಳನ್ನು ರಚಿಸುತ್ತಿದ್ದರು. ಮೊದಲಿಗೆ ಸೂಫಿ ಅವರು ತಂದೆಯಿಂದಲೇ ಸ್ಫೂರ್ತಿಯನ್ನು ಪಡೆದರು. ಆದರೆ ಇವರ ಚಿತ್ರಕಲಾಕಾಂಕ್ಷೆಗೆ ನೀರೆರೆದು ಚಿಗುರುವಂತೆ ಮಾಡಿದವರು ಅಬ್ದುಲ್ ಅಜೀಜ್ ಅವರು. ಅಬ್ದುಲ್ ಅಜೀಜ್ ಸಹ ಹೆಸರಾಂತ ಕಲಾವಿದರು. ಮೈಸೂರು ಅರಮನೆಯಲ್ಲಿ ಚಿತ್ರಕಲಾವಿದರಾಗಿದ್ದವರು. ಆಗಲೇ ಅವರು ಮುಂಬೈ, ಮದ್ರಾಸ್‌ಗಳಲ್ಲಿ ಚಿತ್ರಕಲಾಭ್ಯಾಸ ಮಾಡಿ ಮೈಸೂರಿನಲ್ಲಿ ಕೆಲದಿನ ರಾಜಾಶ್ರಯದಲ್ಲಿದ್ದರು. ಆದರೆ ಸ್ವತಂತ್ರವಾಗಿ ಇರಬಯಸಿ ಕಾಬೂಲಿಗೆ ಹೋಗಿ ಕಲಾಶಾಲೆಯನ್ನು ತೆರೆದರು. ಅಂಥವರ ಆಶ್ರಯದಲ್ಲಿ ಸೂಫಿಯವರು ಮೊದಲು ಅಭ್ಯಾಸ ಮಾಡಿದ್ದು ಸಹಜವಾಗಿ ಅಜೀಜ್ ಅವರ ಪ್ರಭಾವ ಇವರ ಮೇಲೆ ಬಿದ್ದಿದೆ. ಸೂಫಿ ಅವರು 1929ರಲ್ಲಿಯೇ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿದರು. ಕೆಲವರ್ಷ ಅಲ್ಲಿ ಕಲಿತರಾದರೂ ಕಲಿಕೆಯ ಪದ್ಧತಿ ಅವರಿಗೆ ಒಗ್ಗಿದಂತೆ ತೋರುವುದಿಲ್ಲ. ಟಂಕಸಾಲೆ, ಕೇಶವಯ್ಯ ಇತ್ಯಾದಿ ಕಲಾದಿಗ್ಗಜಗಳೇ ಮೈಸೂರಿನ ಕಲಾಶಾಲೆಯಲ್ಲಿ ಉಪಾಧ್ಯಾಯರುಗಳಾಗಿದ್ದರು. ಇಲ್ಲಿ ಪದವಿಯನ್ನು ಪಡೆಯದೆ ಸೂಫಿ ಅವರು ಮುಂಬೈಯ ಜೆ.ಜೆ.ಶಾಲೆಗೆ ಹೋದರು. 1936ರಲ್ಲಿ ಮುಂಬೈಗೆ ಹೋದರಾದರೂ ಕೂಡಲೇ ಪ್ರವೇಶ

ದೊರಕದೆ ಬ್ರಿಟಿಷ್ ಇಂಡಿಯಾ ಪ್ರೆಸ್‌ನಲ್ಲಿ ರೇಖಾ ಚಿತ್ರ ಕಲಾವಿದರಾದರು. ಇಲ್ಲಿ ಮಾಡಿದ ವಾಣಿಜ್ಯ ಕಲೆ ಅವರಿಗೆ ಮೈಸೂರಿಗೆ ಬಂದ ಮೇಲೆ ಜೀವನೋಪಾಯಕ್ಕೆ ಸ್ವಲ್ಪ ಮಟ್ಟಿಗೆ ನೆರವಾಗಿದ್ದು, ನಿಜ. ಮುಂದೆ ಮೈಸೂರು ಸರ್ಕಾರ ಮೂವತ್ತೈದು ರೂಪಾಯಿಗಳ ಮಾಸಾಶನ ನೀಡಿದ್ದು, ಹಾಗೂ ಜೆ.ಜೆ.ಕಲಾಶಾಲೆಯಲ್ಲಿ ಪ್ರವೇಶ ದೊರತಿದ್ದು ನಿರಾತಂಕವಾಗಿ ಅಭ್ಯಸಿಸಿಕೊಂಡು ನೆಲೆಗೆ ಬಂದರಲ್ಲದೆ, ಬಹುಮಾನಗಳನ್ನು ಪಡೆದು ಅಲ್ಲಿಯ ಅಧ್ಯಕ್ಷ ಜರಾಲ್ಡರ್, ಅಧ್ಯಾಪಕ ಭೋಸ್ಲೆ ಇತ್ಯಾದಿಯವರ ಪ್ರಶಂಸೆಗೂ ಪಾತ್ರರಾದರು.

ಸೂಫಿಯವರಿಗೆ ಪ್ರಕೃತಿಯ ಬಗ್ಗೆ ಅಪಾರ ಪ್ರೇಮ. ಹೊರಗಡೆ ವಿಶಾಲ ಪ್ರಪಂಚದಲ್ಲಿಯ ದೈವ ಸೃಷ್ಟಿಯ ನಿರೀಕ್ಷಣೆ, ಅಭ್ಯಾಸ, ಚಿತ್ರರಚನೆಯನ್ನು ಬಯಸುತ್ತಿದ್ದರು. ಶಾಲೆಯ ಕಲಿಕೆ ಅವರಿಗೆ ಸಾಕಷ್ಟು ಸಮಾಧಾನ ತಂದಂತೆ ತೋರುವುದಿಲ್ಲ. ಚಿತ್ರಕಲೆಯ ಎಲ್ಲ ಮಗ್ಗುಲನ್ನೂ ಶೋಧಿಸುವ ಹಂಬಲವುಳ್ಳವರು. ಬಿಡುವಿನ ವೇಳೆಯಲ್ಲಿ ಸಮುದ್ರ ದೃಶ್ಯ, ಇಲ್ಲವೇ ಭೂ ದೃಶ್ಯ ರಚನೆಯನ್ನು ಮಾಡುತ್ತಿದ್ದರು. ಅಜಂತ ಇತ್ಯಾದಿ ಕಡೆಗಳಲ್ಲಿ, ಶೈಕ್ಷಣಿಕ ಪ್ರವಾಸ ಹೋದಾಗ ಭಾರತೀಯ ಪರಂಪರೆಯ ಹೃದಯವನ್ನು ಕಂಡು ಕೊಂಡರು. ಜೆ.ಜೆ.ಶಾಲೆಯ ಪದವಿಯನ್ನು ಪಡೆದು ಮೈಸೂರಿಗೆ ಹಿಂತಿರುಗಿದಾಗ ಅಲ್ಲಿಯ ಕಲಾ ಶಾಲೆಯಲ್ಲಿ ಉದ್ಯೋಗವೂ ದೊರೆಯಿತು (1942).

ಕರ್ನಾಟಕದ ನವೋದಯ ಕಾಲದ ಕಲಾವಿದರಲ್ಲಿ ಸೂಫಿಯವರನ್ನು ಮುಖ್ಯವಾಗಿ ಗುರುತಿಸುವುದು ಅವರ ಪ್ರಾಣಿಗಳ ಚಿತ್ರಗಳಿಂದ. ಕರ್ನಾಟಕದ ಮಟ್ಟಿಗಂತೂ ಅದೂ ಸೂಫಿ ಅವರು ಈ ಶೈಲಿಯ ಚಿತ್ರಗಳನ್ನು ರಚಿಸಲು ಆರಂಭಿಸಿದಾಗ ಹೊಸದೊಂದು ಅನ್ವೇಷಣೆಯೇ ಆಗಿತ್ತು. ಇಂದಿಗಾದರೂ ವನ್ಯಮೃಗಗಳ ಅದರಲ್ಲೂ ಕ್ರೂರ ಮೃಗಗಳ ಛಾಯಾ ಚಿತ್ರೀಕರಣಕ್ಕೊ ಅದರದೇ ಆದ ವಿಶೇಷತೆಯಿದೆ, ಬೆಲೆಯಿದೆ. ಆದರೆ ಸಾಕಷ್ಟು ಹಿಂದೆಯೇ ಸೂಫಿ ಅವರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಅಭ್ಯಸಿಸುತ್ತಿದ್ದಾಗಲೇ ಅವರಿಗೆ ಪ್ರಾಣಿಗಳನ್ನು ವಸ್ತುವಾಗಿರಿಸಿ ರಚಿಸಬೇಕೆಂಬ ನಿರ್ಧಾರವಿತ್ತು. ಆಗಲೇ ಅವರು ಬಿಡುವಿನ ವೇಳೆಯಲ್ಲಿ ಮೈಸೂರಿನ ಮೃಗಶಾಲೆಗೆ ಹೋಗಿ ಅಲ್ಲಿಯ ಪ್ರಾಣಿಗಳ ವಿವಿಧ ಭಾವ ಭಂಗಿಗಳನ್ನು, ದೇಹ ರಚನಾ ಶಾಸ್ತ್ರವನ್ನು, ಅವುಗಳ ವಿಶಿಷ್ಟ ಅಭ್ಯಾಸಗಳನ್ನು ನಿರೀಕ್ಷಣೆ ಮಾಡಿ, ಕರಡು ಪ್ರತಿ (ಸ್ಕೆಚ್) ತಯಾರಿಸಿಕೊಂಡು ನಂತರ ಚಿತ್ರ ರಚಿಸುತ್ತಿದ್ದರು. ಮುಂದೆ ಮುಂಬೈನಿಂದ ಬಂದ ಮೇಲೆ ಅದಕ್ಕೊಂದು ಸ್ಪಷ್ಟರೂಪ ಬಂದಂತೆ ತೋರುತ್ತದೆ. ಮುಂಬೈನ ವ್ಯಾಪಾರಿ ಕಲೆಯ (ಕಮರ್ಷಿಯಲ್) ಬಣ್ಣಗಾರಿಕೆ, ಛಾಯೆ, ಖರೀದಿಸಬಹುದಾದ ಅಂಶಗಳು ಸೇರಿದಂತೆ ಕಂಡುಬರುತ್ತದೆ. ಆ ಪದ್ಧತಿಯ ಚಿತ್ರಗಳಲ್ಲಿ ಇಂತಹ ಹೊಂದಾಣಿಕೆಯ ಅವಶ್ಯಕತೆಯೂ ಇದೆ. ದಟ್ಟ ಕತ್ತಲೆಯ ಕಾಡು, ನೀರಿನ ಕೊರತೆ, ಪ್ರತಿಫಲಿತವಾಗುತ್ತಿರುವ ಬಂಡೆಗಳು ಎಲ್ಲಿಂದಲೋ ಬೆಳಕು ತೂರಿಬಂದು ನೀರು ಕುಡಿಯಲು ಬಗ್ಗಿರುವ ಚಿರತೆಯ ಮೇಲೆ ಬಿದ್ದು ವಾತಾವರಣವನ್ನು ಇನ್ನಷ್ಟು ಗಂಭೀರ ಮಾಡುವ ಸನ್ನಿವೇಶ. ಅಥವಾ ಅಂತಹುದೇ ಸನ್ನಿವೇಶದಲ್ಲಿ ತಲೆ ಎತ್ತಿ ದಿಟ್ಟತನದಿಂದ ನೋಡುತ್ತಿರುವ ವನ್ಯಮೃಗಗಳ ಭಯಂಕರತೆ ಇತ್ಯಾದಿಗಳನ್ನು ಛಾಯಾಗ್ರಾಹಕನಂತೆ "ಒಂದು ಕ್ಷಣದ" ಅನುಭವವನ್ನು ಹಿಡಿದಿರಿಸಿದಂತೆ ಸುಮಾರು ಚಿತ್ರಗಳನ್ನು ರಚಿಸಿದರು. ಅವು ಕಲಾರಸಿಕರ ಮನೆಗಳನ್ನು ಅಲಂಕರಿಸಿರುವುದಲ್ಲದೆ ಪತ್ರಿಕೆಗಳಲ್ಲಿ ಪ್ರಕಟವಾಗಿ ಪ್ರಶಂಸೆ ಗಳಿಸಿದವು. ನವಿಲಿನ ಚಿತ್ರ ಅವರ ಇನ್ನೊಂದು ಪ್ರಿಯ ವಸ್ತು. ಅವುಗಳ ಬೆಡಗು–ಬಿನ್ನಾಣಗಳು, ಭಾವ–ಭಂಗಿಗಳು ಸುತ್ತಲಿನ ಪ್ರಕೃತಿಯ ಚಿತ್ರ ಮರ, ಗಿಡ, ಬಳ್ಳಿ, ಹೂಗಳು ನೋಡುಗನಿಗೆ ಹರ್ಷ ನೀಡುವಂತಹ, ಮುಗ್ಧಗೊಳಿಸುವ ಚಿತ್ರಗಳು. ಅಲ್ಲದೆ ಪ್ರಾಣಿಗಳೊಂದಿಗೆ ಮನುಷ್ಯರೂ ಇರುವ ಅಥವಾ ಜಿಪ್ಸಿ ಅಂತಹ ಅಲೆಮಾರಿಗಳ ಸಂಯೋಜನಾ ಚಿತ್ರಗಳನ್ನೂ ರಚಿಸಿದ್ದಾರೆ.

"ಬಡತನದಲ್ಲಿ ಬೆಂದರೂ ಹಣದ ಆಸೆಗೆ ಕಲೆಯನ್ನು ಕೊಲೆ ಮಾಡಲಿಲ್ಲ. ಹೊಗಳಿಕೆಯ ಒಣ ಪ್ರತಿಷ್ಠೆಗೆ ಮನ ಸೋಲಲಿಲ್ಲ. ಶಾಂತಿಪ್ರಿಯ, ಹಸನ್ಮುಖಿ, ಸೌಮ್ಯ, ನಿರಾಡಂಬರಿ, ಸ್ವಚ್ಛ ಉಡುಪುಧಾರಿ" ಎಂದು ಕಲಾವಿದ ಕೆ.ಆರ್.ತಿಪ್ಪೇಸ್ವಾಮಿಯವರು ಸೂಫಿಯವರ ಬಗ್ಗೆ ಹೇಳಿರುವುದು ಅಕ್ಷರಶಃ ನಿಜ. ಲಲಿತಕಲಾ ಅಕಾಡೆಮಿ 1982ರಲ್ಲಿ ಗೌರವಿಸಿತಲ್ಲದೆ 1988ರ ಬೆಳ್ಳಿಹಬ್ಬದಲ್ಲಿ ಮತ್ತೆ ಕಾಣಿಕೆ ನೀಡಿ, ಶಾಲು ಹೊದಿಸಿ ಪುರಸ್ಕರಿಸಿತು. 1984ರಲ್ಲಿ ರಾಜ್ಯ ಪ್ರಶಸ್ತಿ ದೊರೆಯಿತು.

30 ವರ್ಷ ಚಿತ್ರಕಲಾ ನಿರ್ದೇಶಕರಾಗಿ ಅನಂತರ ಕೊಂಚ ಕಾಲ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ ಮೇಲೆ (1971) ಮೈಸೂರಿನಲ್ಲಿ ಅಖಿಲ ಭಾರತ ವ್ಯಾಪ್ತಿಯ ಉದ್ದೇಶಿತ ಕಲಾಶಾಲೆಯನ್ನು ಶಿಷ್ಯರು

ಹಾಗೂ ಕಲಾವಿದ ಗೆಳೆಯರ ನೆರವಿನಿಂದ ತೆರೆದರಾದರೂ ಅದು ಬಹಳ ಕಾಲ ನಡೆಯಲಿಲ್ಲ.

ಜೂನ್ 13, 1988ರಂದು ಈ ನಿಸರ್ಗ ಕಲಾವಿದ ನಿಧನರಾಗುವ ಒಂದು ವರ್ಷದ ಮೊದಲು ಎಂದರೆ ಜುಲೈ 1987ರಲ್ಲಿ ತಮ್ಮ ಕಲಾಕೃತಿಗಳನ್ನು ಇನ್ನೊಬ್ಬ ನಿಸರ್ಗ ಕವಿ ಕುವೆಂಪು ಅವರಿಗೆ ತೋರಿಸಿದಾಗ ಅವುಗಳನ್ನು ನೋಡಿದ ಕವಿವರ್ಯರು "ಚಿತ್ರ ಕಲಾ ಪ್ರಪಂಚದಲ್ಲಿ ಸೂಫಿ ಅವರದು ನಿಜಕ್ಕೂ ಅದ್ಭುತವಾದ ಸಾಧನೆ. ಸೂಫಿ ಅವರ ಚಿತ್ರಗಳು ಪುಸ್ತಕ ರೂಪದಲ್ಲಿ ಹೊರಬಂದರೆ ಮುಂದಿನ ಪೀಳಿಗೆಯ ಕಲಿಕೆಗೆ ಮಹತ್ತರ ಪ್ರಯೋಜನವಾಗುತ್ತದೆ" ಎಂದರು.


ಅ. ಲ. ನರಸಿಂಹನ್

ಎಫ್. ಎಂ. ಸೂಫಿ



ಬಾಯಾರಿದ ಸಿಂಹ

ಎಸ್. ಆರ್. ಸ್ವಾಮಿ



ಬಿಳಿಯ ಪಂಚೆ, ತುಂಬು ತೋಳಿನ ಷರ್ಟ್, ತೀರಾ ಬೇಸಿಗೆಯ ವಿನಹ ಉಳಿದಂತೆ ಕೋಟು ಹಾಕಿಕೊಂಡು, ದಪ್ಪ ತುಟಿಗಳ, ತುಂಬು ಕೆನ್ನೆಯ, ಮಿಂಚು ಕಂಗಳ, ಅಚ್ಚ ಕಪ್ಪು ಬಣ್ಣದ, ಯಾವಾಗಲಾದರೊಮ್ಮೆ ಹೊಗೆಬತ್ತಿ ಕೈಲಿ ಹಿಡಿದ, ಸುಮಾರು 60–65ರ ಪ್ರಾಯದ ಬೆಂಗಳೂರಿನ ಶೇಷಾದ್ರಿಪುರದ ಬಸ್ ಸ್ಟಾಪಿನಲ್ಲಿ ಯಾರೊಂದಿಗಾದರೂ ನಿರರ್ಗಳವಾಗಿ ಮಾತಾಡುತ್ತಿದ್ದ ವ್ಯಕ್ತಿಯನ್ನು ಯಾರಾದರೂ ಸುಲಭವಾಗಿ ಗುರುತಿಸಬಹುದಾಗಿತ್ತು. ಅವರೇ ಶ್ರೀಕಂಠಯ್ಯ (ಎಸ್) ರಾಮ (ಆರ್) ಸ್ವಾಮಿ. ನಾವು ಆಗ ಕೆನ್ ಸ್ಕೂಲಿಗೆ ಸೇರಿದ ಹೊಸದು. ಅಲ್ಲಿಯೇ ಶೇಷಾದ್ರಿಪುರದಲ್ಲಿ ಎಸ್.ಆರ್. ಸ್ವಾಮಿ ಅವರ ಮನೆ. ಆಗಾಗ ಶಾಲೆಗೆ ಬರುತ್ತಿದ್ದರು. ಹಡಪದ್ ಮಾಸ್ತರರೊಂದಿಗೆ ಮಾತಾಡುತ್ತಿದ್ದರು. ಉಳಿದಂತೆ ಮನೆಯ ಬಳಿ ಯಾರೊಂದಿಗಾದರೂ ಮಾತಾಡುತ್ತಿದ್ದರು. ನಾವು ಹೋಗಿ–ಬರುವ ದಾರಿ. ನಮಗಿಂತ ಹಿರಿಯ ವಿದ್ಯಾರ್ಥಿಗಳು ಅವರಿಗೆ ವಂದಿಸುತ್ತಿದ್ದರು. ಅವರು ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು. ಪರಿಚಯ ಇನ್ನಷ್ಟು ಹತ್ತಿರವಾಯಿತು. ಹಳೆಯ ತಲಮಾರಿನಲ್ಲಿ ಮೈಸೂರು ಪ್ರದೇಶದ ಚಿತ್ರಕಲೆಯ ಸ್ಥಿತಿ–ಗತಿಗಳನ್ನು ತಿಳಿಯ ಬಯಸಿದಾಗ ಸ್ವಾಮಿಯವರು ಆಕರದ ಗಣಿ ಎಂದು ತಿಳಿಯಲು ಬಹಳ ಕಾಲ ಬೇಕಾಗಲಿಲ್ಲ. ಅವರು ಮಾತಾಡುತ್ತಿದ್ದುದು ಎಂದೂ ಖಾಲಿ ಮಾತುಗಳಲ್ಲ. ಕಲೆಯ ಬಗ್ಗೆ, ಕಲಾವಿದರ ಬಗ್ಗೆ, ಕಲಾ ಚರಿತ್ರೆ, ವಿದ್ಯಾಭ್ಯಾಸ, ವಿಮರ್ಶೆ, ಲೇಖನ, ಬೆಳವಣಿಗೆ, ನವ ಸಂಪ್ರದಾಯ ಯಾವುದೇ ಆಗಲಿ, ಅವರಲ್ಲಿ ಖಚಿತವಾದ ಉತ್ತರ ಇತ್ತು. ಅವರು ಓದಿದ್ದು, ಅನುಭವಿಸಿದ್ದು, ಪ್ರಯೋಗಗಳಿಂದ ಕಲಿತಿದ್ದು ಸಾಕಷ್ಟಿತ್ತು. ಪ್ರತಿಬಾರಿ ಸಂಧಿಸಿ ಮಾತಾಡಿದಾಗಲೆಲ್ಲ ಹೊಸ ವಿಷಯಗಳು ತಿಳಿಯುತ್ತಿತ್ತು. ಗಂಟೆಗಟ್ಟಲೆ ಮಾತಾಡಿದರೂ ಬೇಸರ ಬರದಷ್ಟು ವಿಚಾರಪೂರಿತವಾಗಿತ್ತು. ಈಗ ಅವರು ಶೇಷಾದ್ರಿಪುರದಿಂದ ಮನೆಯನ್ನು ಬದಲಿಸಿದರು. ಅವರ ಭೇಟಿಯೂ ಅಪರೂಪವಾಯಿತು.

ಎಸ್.ಆರ್. ಸ್ವಾಮಿಯವರು 1919ರಲ್ಲಿ ಮೈಸೂರಿನಲ್ಲಿ ಜನಿಸಿದರು. ಅವರ ಪೂರ್ವಿಕರು ತಲಕಾಡು ಕಡೆಯವರು. ದೇವಾಲಯದಲ್ಲಿ ಅರ್ಚಕರಾಗಿದ್ದವರು. ತಂದೆ ಶ್ರೀಕಂಠಯ್ಯನವರು ಮೈಸೂರಿಗೆ ಬಂದಮೇಲೂ ಅದೇ ವೃತ್ತಿಯನ್ನು ಮುಂದುವರೆಸಿದರು. ಶೈವ ಆಗಮದ ಸಂಪ್ರದಾಯನಿಷ್ಠ ಬ್ರಾಹ್ಮಣ ಮನೆತನದ ತಂದೆಯವರು ತಮ್ಮ ಇಷ್ಟ ಮಿತ್ರರೊಂದಿಗೆ ದೇವರು, ದೇವಾಲಯ, ಆಗಮಗಳನ್ನು ಕುರಿತು ಚರ್ಚಿಸುತ್ತಿದ್ದಾಗ ಬಾಲಕ ಸ್ವಾಮಿಯವರು ದೇವರ ಮೂರ್ತಿ, ಶಿಲ್ಪಗಳಲ್ಲಿ ಕಲೆಯ ಅಂಶವನ್ನು ಅರಸುತ್ತಿದ್ದರು. ಓದಿಗಿಂತ ಕಲೆಯೇ ಪ್ರಿಯವಾಯಿತು. ಸಾಲದ್ದಕ್ಕೆ ಪರಿಚಿತರೊಬ್ಬರು ಇವರ ಜಾತಕ ನೋಡಿ 'ಈತನಿಗೆ ವಿದ್ಯೆ ಹತ್ತೋಲ್ಲ, ಕೈ ಕಸುಬಲ್ಲಿ ಮುಂದೆ ಬರುತ್ತಾನೆ' ಎಂದಾಗ ಸ್ವಾಮಿಯವರ ಒಳಗಿನ ಕಲಾವಿದ ಜಾಗೃತನಾದ. ಲಂಡನ್ ಮಿಷನ್ ಶಾಲೆಯ ಚಿತ್ರಕಲಾ ಶಿಕ್ಷಕರಾಗಿದ್ದ ಮನ್ನಾಸ್‌ರವರು ಸ್ವಾಮಿಯವರಿಗೆ ಇದ್ದ ಚಿತ್ರಕಲೆಯ ಕೌಶಲ್ಯವನ್ನು ಕಂಡು ತಂದೆಯವರ ಬಳಿ "ಈತ ಚೆನ್ನಾಗಿ ಬಣ್ಣಗಳನ್ನು ತುಂಬುತ್ತಾನೆ. ಚಿತ್ರ ಸಹ ಚೆನ್ನಾಗಿ ಬರೆಯುತ್ತಾನೆ.

ಅದರಲ್ಲಿಯೇ ವಿದ್ಯಾಭ್ಯಾಸ ಕೊಡಿಸಿ'' ಎಂದು ಹೇಳಿದ್ದು, ಅದರಂತೆ ಕಲಾಮಂದಿರದ ಸುಬ್ಬರಾಯರ ಬಳಿಗೆ 1932ರಲ್ಲಿ ಸೇರಿಸಿದರು. ಆಗಿನ ಪಠ್ಯವಸ್ತುಗಳಲ್ಲಿ ಇದ್ದಂತೆ ಐದು ಲೋಯರ್ ಪರೀಕ್ಷೆಗಳನ್ನು ಸ್ವಾಮಿಯವರು ಪೂರ್ಣಗೊಳಿಸಿದರು. ಹೈಯರ್‌ಗೆ ಮೈಸೂರು ಅಥವಾ ಮದ್ರಾಸಿಗೆ ಹೋಗಬೇಕಾಗಿತ್ತು. ಮೈಸೂರಿಗೆ 1936 ರಲ್ಲಿ ಹೋದರಾದರೂ, ಆ ವೇಳೆಗೆ ಪ್ರವೇಶಗಳು ಮುಗಿದಿತ್ತು. ಕೇಶವಯ್ಯ ಹಾಗೂ ಪಾವಂಜೆಯವರು ಇವರ ಕೌಶಲ್ಯ ಕಂಡು ಸೇರಿಸಿಕೊಳ್ಳಲು ಇಷ್ಟಪಟ್ಟರೂ ಪ್ರಿನ್ಸಿಪಾಲರು ಒಪ್ಪಲಿಲ್ಲ. ಅಲ್ಲಿ ಕೆಲವು ದಿನ ಇದ್ದು ಮರಳಿ ಬೆಂಗಳೂರಿಗೆ ಬಂದರು. ಎಸ್.ಎನ್. ಸ್ಥಪತಿಗಳ ಬಳಿ ಕಲಿಯಲು ಹೋದಾಗ ವಿಶ್ವಕರ್ಮ ದೀಕ್ಷೆ ಪಡೆದರೆ ಕಲಿಸುವುದಾಗಿ ಷರತ್ತು ಹಾಕಿದ್ದು, ತಂದೆಯವರು ಒಪ್ಪದೇ ಹೋದರು. ಸ್ವಾಮಿ ಅವರ ಬಳಿ ಕಲಿಯಲಿಲ್ಲ.

ಆ ವೇಳೆಗೆ ಮದ್ರಾಸ್ ಕಲಾ ಕಾಲೇಜಿನಲ್ಲಿ ಪ್ರಾಧ್ಯಾಪಕ ರ್‍ಯಾಂಕರ್ ಬೇಸಿಗೆಯಲ್ಲಿ ಬೆಂಗಳೂರಿಗೆ ಬಂದಿದ್ದರು. ಗೋವಿಂದರಾವ್ ಎನ್ನುವವರ ಮೂಲಕ ಸ್ವಾಮಿಯವರಿಗೆ ರ್‍ಯಾಂಕರ್ ಅವರ ಪರಿಚಯವಾಯಿತು. ಅವರನ್ನು ಚಿತ್ರಕಲೆ ಕಲಿಸಲು ಕೇಳಿದರು. ಅವರು ಮದ್ರಾಸ್ ಶಾಲೆಯಲ್ಲಿ ಕಲಿಯುವುದಿದ್ದರೆ ಶಿಫಾರಸ್ಸು ಮಾಡುವುದಾಗಿಯೂ ಹಾಗೆಯೇ ಕಲಿಸಲು ಸಾಧ್ಯವಿಲ್ಲವೆಂದರು. ಆದರೆ ಅವರು ಚಿತ್ರ ಕೆಲಸ ಮಾಡುವುದನ್ನು ನೋಡಲು ಅನುಮತಿ ನೀಡಿದರು. ಐದಾರು ತಿಂಗಳು ರ್‍ಯಾಂಕರ್‌ರವರು ಚಿತ್ರ ರಚಿಸುತ್ತಿದ್ದಾಗ ಬಳಿಯಲ್ಲಿಯೇ ಕುಳಿತು ಅವರು ರಚಿಸುತ್ತಿದ್ದ ಪದ್ಧತಿಯನ್ನು ಕಂಡುಕೊಳ್ಳುತ್ತಿದ್ದರು. (ಮನೆಯಿಂದ ಒಂದು ಕಾಸಿಗೆ ಬನ್ ಕೊಂಡು, ಶಂಕರಪುರದಿಂದ ನಡೆದುಕೊಂಡೇ ಹೋಗಿ ಮಧ್ಯಾಹ್ನ ಅದನ್ನೇ ತಿಂದು, ನಲ್ಲಿಯಲ್ಲಿ ನೀರು ಕುಡಿದು ಮತ್ತೆ ಸಂಜೆಯವರೆಗೆ ನೋಡುತ್ತಾ ಕೂಡುತ್ತಿದ್ದರು. ಒಮ್ಮೆ ರ್‍ಯಾಂಕರ್ ಅವರ ಪತ್ನಿ ಅದನ್ನು ಕಂಡು ಇನ್ನಷ್ಟು ಒಳ್ಳೆಯ ತಿಂಡಿ ಕೊಟ್ಟು ಪತಿಗೆ ತಿಳಿಸಿದರಂತೆ.) ನಂತರ ರ್‍ಯಾಂಕರ್ ಚಿತ್ರಕಲೆಯ ಕೆಲವು ಮೂಲ ತತ್ವಗಳನ್ನು ತಿಳಿಸಿಕೊಟ್ಟರಲ್ಲದೆ ಹೂ ಬಳ್ಳಿಗಳ ವಿನ್ಯಾಸ, ರಚನಾ ಕ್ರಮ ಸಹ ತಿಳಿಸಿದರು. ಬೆಂಗಳೂರಿನಲ್ಲಿದ್ದ ಕೇಂಬ್ರಿಡ್ಜ್ ಶಾಲೆ ಕೇವಲ ಇಂಗ್ಲಿಷರ ಮಕ್ಕಳಿಗೆ ಇದ್ದುದು. ಭಾರತೀಯರಿಗೆ ಅವಕಾಶ ಇರಲಿಲ್ಲ. ಆದರೂ ಸ್ವಾಮಿಯವರ ಚಿತ್ರಕಲಾ ಪರಿಣತಿಯನ್ನು ಕಂಡು ರ್‍ಯಾಂಕರ್ ಅವರು ವಿಶೇಷ ಪ್ರಯತ್ನದಿಂದ ಅದರಲ್ಲಿ ಇಂಟರ್‌ಮೀಡಿಯಟ್ ಪರೀಕ್ಷೆಗೆ ಕೂಡಿಸಿದ್ದರು. ಸ್ವಾಮಿಯವರು ಅದರಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ನಂತರ 1939ರಲ್ಲಿ ಮದ್ರಾಸ್‌ನ ಪರೀಕ್ಷೆಗಳಿಗೆ ಬೆಂಗಳೂರಿನಿಂದಲೇ ಕಟ್ಟಿ, ಹೈಯರ್ ಪೇಂಟಿಂಗ್ ಮತ್ತು ಡಿಸೈನ್‌ಗಳಲ್ಲಿ ಉತ್ತೀರ್ಣರಾದರು. ಕಲ್ಕತ್ತಾ ಶಾಲೆಗೆ ಹೋಗಿ ಹೆಚ್ಚಿನ ಅಭ್ಯಾಸ ಮಾಡಬೇಕೆಂದು ರ್‍ಯಾಂಕರ್ ಬಯಸಿದ್ದರು. ಆದರೆ ಸ್ವಾಮಿ ಅವರಿಗೆ ಆ ವೇಳೆಗೆ ಮದುವೆಯಾಗಿದ್ದು ಹೋಗಲಾಗಲಿಲ್ಲ. ರ್‍ಯಾಂಕರ್ ಅದಕ್ಕಾಗಿ ಸಾಕಷ್ಟು ಪೇಚಾಡಿದರು. ಅದೇ ಗೃಹಸ್ಥಾಶ್ರಮವೇ ವೆಂಕಟಪ್ಪ ಅವರಲ್ಲಿ ಶಿಷ್ಯವೃತ್ತಿ ಮಾಡಲು ಸಾಧ್ಯವಾಗದಂತೆ ಮಾಡಿತು. ರ್‍ಯಾಂಕರ್ ತಂದೆಯವರನ್ನು ಕರೆಸಿ, ಮಗನಿಗೆ ಮದುವೆ ಮಾಡಿ, ಆತ ಹೆಚ್ಚಿನ ಅಭ್ಯಾಸಕ್ಕೆ ಹೋಗಲು ಅಸಾಧ್ಯವಾಗುವಂತೆ ಮಾಡಿದ್ದಕ್ಕೆ ನೊಂದು ನುಡಿದರು.

ಸ್ವಾಮಿಯವರಿಗೆ ದೊರೆತ ಇನ್ನೊಂದು ಅವಕಾಶ, ಕರ್ನಾಟಕದ ಬೇರೆಯವರಿಗೆ ದೊರೆತಂತೆ ಕಂಡು ಬರುವುದಿಲ್ಲ. ಅದೆಂದರೆ ಲಂಡನ್‌ನ ಜಾನ್‌ಹಾರ್ಸ್ ಕಲಾ ಶಾಲೆಗೆ ತಾವು ಮಾಡಿದ (ಚಿಕ್ಕ ಅಳತೆಯ) ಕೃತಿಗಳನ್ನು ಅಂಚೆಯ ಮೂಲಕ ಕಳಿಸುವುದು. ಅವರು ಅದನ್ನು ತಿದ್ದಿ ಕೆಲವು ಮಾರ್ಗದರ್ಶನ ನೀಡಿ ಮರಳಿ ಅಂಚೆಯ ಮೂಲಕ ಕಳಿಸುತ್ತಿದ್ದರು. ಅವರ ಆದೇಶದಂತೆ ತಿದ್ದಿ ಇನ್ನೊಂದು ಕೃತಿಯನ್ನು ಮೊದಲಿನದರೊಂದಿಗೆ ಕಳಿಸುವುದು. ಈ ರೀತಿ ವಿದೇಶೀ ಕಲಾ ಶಾಲೆಯೊಂದರಲ್ಲಿ ಅಂಚೆಯ ಮೂಲಕ ಕಲಿಯಬಹುದಾದ ಅವಕಾಶ ಆಗ ಇದ್ದು, ರ್‍ಯಾಂಕರ್ ಅವರ ಮೂಲಕ ಸ್ವಾಮಿಯವರೂ ಅದರ ಲಾಭ ಪಡೆದರು. ಕಳಿಸಿದ ಒಂದು ವಾರದಲ್ಲಿ ಅಲ್ಲಿಂದ ಮರು ಟಪಾಲು ಬರುವಷ್ಟು ಅಂಚೆ ವ್ಯವಸ್ಥೆ ಉತ್ತಮವಿತ್ತು. ಅದೇ ವೇಳೆಯಲ್ಲಿ ಕಲ್ಕತ್ತ ಇತ್ಯಾದಿ ಕಲಾ ಕೇಂದ್ರಗಳಿಗೆ ಭೇಟಿ ನೀಡಿಬಂದರು. ಮದ್ರಾಸ್‌ನಲ್ಲಿ ರಾಯ್ ಚೌಧರಿಯವರ ಬಳಿಯಲ್ಲಿ ಒಂದು ವರ್ಷ ಪುನರ್ ಪರಿಶೀಲನಾ ಅಭ್ಯಾಸವನ್ನು ಮಾಡಿದರು. ಬಿಡುವಿನ ವೇಳೆಯಲ್ಲಿ ಭೂದೃಶ್ಯ, ಸಮುದ್ರ ದೃಶ್ಯಗಳನ್ನು ರಚಿಸಿ ವಿಕ್ರಯಿಸಿದ್ದುಂಟು.

ಬೆಂಗಳೂರಿಗೆ ಬಂದಮೇಲೆ ಕೆಲಸಕ್ಕೆ ಹುಡುಕಬೇಕಾಯಿತು. ತಂದೆಯವರೂ ತೀರಿಕೊಂಡಿದ್ದರು. ಕೆಲವು ಮುದ್ರಣಾಲಯಗಳಲ್ಲಿ ಸತುವಿನ ಪಡಿಯಚ್ಚುಗಳನ್ನು ಕೊರೆದು ನಿರ್ಮಿಸುವ ಹಾಗೂ ಲಿಥೋ

ಹಾಳೆಯಲ್ಲಿ ಬರೆಯುವ ಅಥವಾ ಸ್ಟುಡಿಯೋಗಳಲ್ಲಿ ತಿದ್ದುವ ಕೆಲಸ ಕೈಗೊಂಡರು. ಸ್ವತಃ ಮೆದು ಸ್ವಭಾವದ ಇವರಿಗೆ ಇಲ್ಲೆಲ್ಲ ಶೋಷಣೆಯೇ ಆಯಿತು. ಆದರೂ ಹಲವಾರು ಕೆಲಸಗಳ ಅನುಭವ ಬಂದಿತು. 1940ರಲ್ಲಿ ಮಲ್ಲೇಶ್ವರದಲ್ಲಿಯ ಲಲಿತಕಲಾ ಶಾಲೆಯ ಪರಿಚಯವಾಗಿ ಅಲ್ಲಿಯ ವಿದ್ಯಾರ್ಥಿನಿಯರಿಗೆ ಕಲೆ ಮತ್ತು ಕೈ ಕಸುಬು ಕೆಲಸ ಕಲಿಸತೊಡಗಿದರು. ಅದೇ ವೇಳೆಗೆ ಎಚ್.ಎ.ಎಲ್.ನಲ್ಲಿಯೂ ನೌಕರಿ ದೊರೆಯಿತು. ಅಲ್ಲಿಯೂ ಒಂದೆರಡು ವರ್ಷ ಕೆಲಸ ಮಾಡಿದರು. ಆದರೆ ಅಲ್ಲಿ ಭಾನುವಾರವೂ ಹೆಚ್ಚಿನ ಕೆಲಸವಿದ್ದು ಕಲಾ ಶಾಲೆಗೆ ಹೋಗಲು ತೊಂದರೆಯಾಯಿತು. 1934ರಲ್ಲಿ ಕೆಲಸ ಬಿಡಬೇಕಾಯಿತು. ಆದರೆ ಅಲ್ಲಿಯ ಅಧಿಕಾರಿಯೊಬ್ಬರು 'ಗೌರಿ' ಎಂಬಾತ ಹಾಗೂ ಆತನ ಕಲಾವಿದ ಪತ್ನಿ ಇವರ ಚಿತ್ರಕಲಾ ನೈಪುಣ್ಯಕ್ಕೆ ಮನಸೋತು ಇವರ ಕೆಲವು ಕೃತಿಗಳನ್ನು ಕೊಂಡು, ಪ್ರೋತ್ಸಾಹ ನೀಡಿದರು.

ಎಚ್.ಎ.ಎಲ್.ಗೆ ಸೇರುವ ಮೊದಲು ಸ್ವಲ್ಪ ಕಾಲ ವಿಮಾನ ಕಾರ್ಖಾನೆಯಲ್ಲಿ ವಿಮಾನಗಳ ಮೇಲೆ ವಿನ್ಯಾಸ ರಚಿಸುವ ಕೆಲಸ ಮಾಡಿದ್ದರು. ಅದು ತೀರಾ ರೇಜಿಗೆಯ, ಇವರ ಮನೋಭಾವಕ್ಕೆ ಒಗ್ಗದ ಕೆಲಸವಾಗಿತ್ತು. ಲಲಿತಕಲಾ ಶಾಲೆಯಲ್ಲಿ 1949ರವರೆಗೂ ಇದ್ದರು. ಆ ವೇಳೆಗೆ ಜಿ.ಪಿ. ರಾಜರತ್ನಂ, ಅನಕೃ, ಮುಂತಾದವರ ಪರಿಚಯವಾಯಿತು. ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳಿಗೆ ಸಾಂದರ್ಭಿಕ ಚಿತ್ರ ಹಾಗೂ ಮುಖಚಿತ್ರ ರಚಿಸುವಾಗ ಅವುಗಳ ಓದುವಿಕೆಯಿಂದಾಗಿ ಸಾಹಿತ್ಯದಲ್ಲಿಯೂ ಆಸಕ್ತಿ ಮೂಡಿತು. ಚಿತ್ರಕಲೆಯಲ್ಲಿಯೂ ಭಾರತೀಯತೆಯ ಬಗ್ಗೆ, ಅಂಗಾಂಗ ಪ್ರಮಾಣಗಳ ಬಗ್ಗೆ, ಬಣ್ಣಗಳ ಮಿಶ್ರಣ ಹಾಗೂ ಬಳಕೆಗಳ ಬಗ್ಗೆ ಸಾಕಷ್ಟು ಪ್ರಯೋಗಗಳನ್ನು ಮಾಡಿದರು. ತಮ್ಮ ಸುತ್ತಾಟದಲ್ಲಿ, ಪ್ರದರ್ಶನಗಳಲ್ಲಿ ಕಂಡ ಚಿತ್ರಗಳ ತಂತ್ರ, ನಿರ್ವಹಣೆ, ವಸ್ತು ಇತ್ಯಾದಿಗಳನ್ನು ಕಂಡು, ಮನೆಯಲ್ಲಿ ಅವುಗಳ ಆಧಾರದಿಂದ ರಚಿಸುವ ಅಭ್ಯಾಸ ನಡೆಸಿದರು. ಇವುಗಳಿಂದ ಕೈ ಕುದುರಿತಲ್ಲದೆ ತಮ್ಮದೇ ಆದ ಶೈಲಿ, ರಚನಾಕ್ರಮ, ಆಕಾರಗಳ ವಿನ್ಯಾಸ, ಬಣ್ಣಗಾರಿಕೆ ಇತ್ಯಾದಿಗಳು ಸಾಧಿಸುವಂತಾಯಿತು. ಭಾವಚಿತ್ರ, ಭೂದೃಶ್ಯ ಇತ್ಯಾದಿಗಳಲ್ಲಿ ಪರಿಣತರಾಗಿದ್ದರೂ, ಕಥಾ ಸಂದರ್ಭಗಳು ಹಾಗೂ ಭಾವನಾತ್ಮಕ ಸಂಯೋಜನಾ ಚಿತ್ರಗಳನ್ನು ರಚಿಸುವುದು ಅವರಿಗೆ ಪ್ರಿಯವಾಯಿತು. ಅದರಲ್ಲೂ ಜಲವರ್ಣದಲ್ಲಿ 'ವಾಷ್ ಟೆಕ್ನಿಕ್'ನಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು. ಬಣ್ಣಗಳನ್ನು ಪದರ–ಪದರವಾಗಿ ಹಚ್ಚುವ ರೇಜಿಗೆಯ ಕೆಲಸ ಅದು. ಕೃತಿ ಮುಗಿಯುವುದು ನಿಧಾನ. ವೆಂಕಟಪ್ಪನವರ ಪರಿಚಯ 1944ರಿಂದ ಅವರು ತೀರುವವರೆಗೂ ಇತ್ತು. ತಮ್ಮ ಕೃತಿಗಳನ್ನು ಅವರಲ್ಲಿ ತೋರಿಸಿ, ತಿದ್ದಿಸಿಕೊಳ್ಳುತ್ತಿದ್ದರು. ವಾಷ್ ಮೆಥಡ್ ಮೂಲತಃ ಭಾರತೀಯವಲ್ಲವಾದರೂ, ಕಲ್ಕತ್ತದಲ್ಲಿ ಅಜಂತದಿಂದ ಪ್ರೇರೇಪಿತವಾದ ಆಕೃತಿಗಳನ್ನು ಇರಿಸಿ ರಚಿಸುತ್ತಿದ್ದ ಈ ಪದ್ಧತಿ ವೆಂಕಟಪ್ಪನವರಿಂದ ಇಲ್ಲಿಗೂ ಬಂದಿದ್ದು, ಸ್ವಾಮಿಯವರು ಅವರಿಂದ ಪ್ರೇರಿತವಾಗಿರಬಹುದು. ಆದರೆ ಆಕೃತಿಯನ್ನು ಇರಿಸುವಲ್ಲಿ, ಸಂಯೋಜನೆಯಲ್ಲಿ ಇವರದೇ ಆದ ಛಾಪು ಕಂಡುಬರುತ್ತದೆ. ಇಲ್ಲಿಯೂ ರೇಖೆಯೇ ಪ್ರಧಾನವಾಗಿ ಕಂಡುಬರುತ್ತದೆ. ರೇಖೆಯಲ್ಲಿಯೇ ಉಬ್ಬು–ತಗ್ಗುಗಳನ್ನು ತೋರಿಸುವ ದೃಗ್ದರ್ಶನದಲ್ಲಿ ತ್ರಿಮಾನದ ಅನುಭವ ಕಂಡುಬರುವ ಇವರ ರೇಖಾ ಚಿತ್ರಗಳ ಬಗ್ಗೆ ಕಲಾ ಇತಿಹಾಸಕಾರರು ಮೆಚ್ಚುಗೆಯಿಂದ ನುಡಿದಿದ್ದಾರೆ. ಸ್ವಾಮಿಯವರ ಬಗ್ಗೆ ಮತ್ತು ಅವರು ರಚಿಸಿದ ಹಾಗೂ ಪ್ರದರ್ಶಿಸಿದ ಕೃತಿಗಳ ಬಗ್ಗೆ ಬರೆದಿರುವ ಲೇಖನಗಳಲ್ಲಿ, ಪತ್ರಿಕಾ ವಿಮರ್ಶೆಗಳಲ್ಲಿ ಮುಖ್ಯವಾಗಿ ಚಿತ್ರಗಳಲ್ಲಿ ಕಂಡುಬರುವ ಆಳವಾದ ಅಭ್ಯಾಸ, ಕೈ ಹಾಗೂ ಕುಂಚದ ಓಟ, ಬೀಸುಗಳು, ಸನ್ನಿವೇಶಕ್ಕೆ ತಕ್ಕಂತೆ ರೂಪಿಸಿರುವ ರಸಭಾವಗಳು ಎಲ್ಲರನ್ನೂ ಆಕರ್ಷಿಸಿವೆ. ಅದು ದುರಂತವಿರಲಿ, ಶೃಂಗಾರವಿರಲಿ, ಅದ್ಭುತ, ವೀರವಿರಲಿ, ಅದಕ್ಕೆ ತಕ್ಕಂತೆ ಮುಖ ಭಾವಗಳು, ದೇಹದ ವಿನ್ಯಾಸ, ಹಿನ್ನೆಲೆಗಳು ವಿವರವಾಗಿದ್ದು ನೋಡುಗನಿಗೆ ಅವನ್ನು ತೀರ ಅನುಭವಿಸುವ ಕೆಲ ಕಾಲ ನಿಂತು ತನ್ಮಯನಾಗಿ ಚಿತ್ರವನ್ನು ವೀಕ್ಷಿಸುವ, ಮನಸ್ಸನ್ನು ಹಿಡಿದಿಡುವ, ಗೆಲ್ಲುವ ಅನುಭವವಾಗುತ್ತದೆ. ಉಮರನ ಒಸಗೆಯ 'ಅಮರ ಪ್ರೇಮ'ವಾಗಲೀ, ಹಳ್ಳಿಯ 'ಮುಗ್ಧ ಪ್ರೇಮ'ವಾಗಲಿ, ಗೀತ ಗೋವಿಂದದ ನಿರೀಕ್ಷೆಯಾಗಲಿ, ಬುದ್ಧನನ್ನು ಕುರಿತ ಚಿತ್ರಗಳಾಗಲಿ, ಶಾಕುಂತಲ ಇತ್ಯಾದಿ ಕಾವ್ಯಗಳ ಸಾಂದರ್ಭಿಕ ಚಿತ್ರಗಳಾಗಲಿ, ಮನ ಮುಟ್ಟುವಂತೆ ರಚಿತವಾಗಿರುವ ಕೃತಿಗಳು. 'ಪ್ರೇಮ ಹಾಗೂ ನಂಬುಗೆ', 'ಗುಪ್ತ ಗಾಮಿನಿ', 'ನಿಸರ್ಗ ಮೋಹಿನಿ', 'ದೇವ ನರ್ತಕಿ', 'ಅನಾಥೋ ದೈವ ರಕ್ಷಿತಃ', 'ಕಾಡು ಕುಸುಮಗಳು', 'ನಿಸರ್ಗ ಮಾಯಾ', 'ಆದರ್ಶ ಪ್ರೇಮ', 'ಸಾತ್ವಿಕ ಅಪ್ಪುಗೆ', 'ಬಿರುಗಾಳಿಯ

ಎದುರು', ಇತ್ಯಾದಿ ಅವರ ಕೃತಿಗಳ ಹೆಸರೇ ಅವುಗಳನ್ನು ಕಣ್ಣಮುಂದೆ ನಿಲ್ಲಿಸುತ್ತದೆ.

ಮೈಸೂರು, ಮದ್ರಾಸ್, ಹೈದರಾಬಾದ್, ಭೋಪಾಲ್ ಇತ್ಯಾದಿ ಕಡೆಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಸ್ವಾಮಿಯವರಿಗೆ ಬಹುಮಾನ ಬಂದಿದೆ. ರಾಜ್ಯ ಲಲಿತಕಲಾ ಅಕಾಡಮಿ 1970ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು. ದೆಹಲಿಯ ಪಾರ್ಲಿಮೆಂಟ್ ಹೌಸ್‌ನಲ್ಲಿ ಇವರ ಕೆಲವು ಕೃತಿಗಳಿವೆಯಲ್ಲದೆ, ಸ್ವಿಟ್ಜರ್‌ಲೆಂಡ್‌ನ ಮಕ್ಕಳ ಪುಸ್ತಕವೊಂದರಲ್ಲಿ ಅನೇಕ ಸಾಂದರ್ಭಿಕ ಚಿತ್ರಗಳನ್ನು ರಚಿಸುವ ಅವಕಾಶ ಇವರಿಗೆ ದೊರೆಯಿತು. ಕೆಲ ಕಾಲ ರಾಜ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರು. ಸ್ವಾಮಿ ಅವರ ಕೃತಿಗಳು ದೇಶ–ವಿದೇಶಗಳಲ್ಲಿ ಚದುರಿಹೋಗಿದೆ. ಅವುಗಳನ್ನು ದಾಖಲಿಸುವ, ಕನಿಷ್ಠ ಕೈಗೆ ಸಿಗುವುದನ್ನು ಛಾಯಾಚಿತ್ರ ತೆಗೆದು ಮುದ್ರಿಸುವ, ಅವರ ರಚನಾ ತಂತ್ರವನ್ನು ಮುಂದುವರಿಸುವಂತೆ ಆಸಕ್ತರಿಗೆ ತರಪೇತಿ ನೀಡುವ ಕೆಲಸ ಅವಶ್ಯಕವಾಗಿ ಆಗಬೇಕಾಗಿದೆ.

ಅ. ಲ. ನರಸಿಂಹನ್

